
ರಂಜನೆ ಬೋಧನೆ ಪ್ರಚೋದನೆ


ಗೌರಿ ಲಂಕೇಶ್

ಡಿಸೆಂಬರ್ 31, 2008 ರೂ. 12/-



ಮಲ್ಯ ಪಾಪರ್!

ಜಗ್ಗೇಶ್‌ಗೆ ಬಿತ್ತು ಗೂಸಾ!



ಅರಭಾವಿ: ಬಾಲಚಂದ್ರ ಅರ್ಧ ಚಂದ್ರ ಆಗುವನೆ?

ಹುಕ್ಕೇರಿ: ಕತ್ತಿಯ ರೌಡಿಸಂ ಕುತ್ತಾಗಲಿದೆಯೆ?

ಮಧುಗಿರಿ: ಬಿಜೆಪಿ ನೋಟು-ಜೆಡಿಎಸ್‌ಗೆ ಓಟು

ಮದ್ದೂರು: ತಮ್ಮಣ್ಣ ಮುಳುವು-ಕಲ್ಪನಾ ಗೆಲುವು




ಅಂಕೋಲ: ಆನಂದ್ ಮನೆಗೆ ಸತೀಶ್ ವಿಧಾನಸೌಧಕ್ಕೆ



ಬುಷ್‌ಗೆ ಎರಡೇ ಚಪ್ಪಲಿಯೇಟು ಸಾಕೆ?


ಕಾಡ ತೊರೆಯ ಜಾಡು

ಕಡಿದಾಳು ಶಾಮಣ್ಣ ಜೀವಗಾಥೆ



ಅಫಘಾನಿಸ್ತಾನ, ಇರಾಕ್ ಮೇಲೆ ಬುಷ್ ಮಾಡಿರುವ ದಾಳಿ; ಆತನಿಗೆ ಬಲಿಯಾದವರು; ಅಬುಘ್ರೈಬ್‌ನಲ್ಲಿ ಇರಾಕಿಗಳಿಗೆ ಬುಷ್ ಸೈನ್ಯ ನೀಡಿದ ಹಿಂಸೆ...

ಬುಷ್‌ಗೆ ಎರಡೇ ಬೂಟಿನೇಟು ಸಾಕೆ?

ಕಳೆದ ಡಿಸೆಂಬರ್ 15ರಂದು ಅಮೆರಿಕದ ಅಧ್ಯಕ್ಷ ಜಾರ್ಜ್ ಬುಷ್ ಇರಾಕಿಗೆ ಭೇಟಿ ನೀಡಿದರು. ಇದು ಅಧ್ಯಕ್ಷನಾಗಿ ಬುಷ್ ಇರಾಕಿಗೆ ನೀಡಿದ ಕೊನೆಯ ಭೇಟಿ. ರಾಜಧಾನಿ ಬಾಗ್ದಾದ್‌ನಲ್ಲಿ ಇರಾಕಿನ ಪ್ರಧಾನಿ ನೂರಿ ಅಲ್ ಮಲಿಕಿಯೊಂದಿಗೆ ಬುಷ್ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡುತ್ತಿದ್ದಾಗ ಮಂತದಾರ್ ಅಲ್ ಜೈದಿ ಎಂಬ ಪತ್ರಕರ್ತ ತನ್ನ ಶೂಗಳನ್ನು ಒಂದಾದ ಮೇಲೊಂದರಂತೆ ಬುಷ್ ಅತ್ತ ಎಸೆಯುವ ಮೂಲಕ ಒಟ್ಟಾರೆ ಇರಾಕಿ ಜನರ ಆಕ್ರೋಶಭರಿತ ಬೀಳ್ಕೊಡುಗೆಯನ್ನು ಕೊಟ್ಟ. ಆತ "ಏ ನಾಯಿ, ಇದು ನಿನಗೆ ಬೀಳ್ಕೊಡುಗೆಯ ಮುತ್ತು" ಎನ್ನುತ್ತಾ ತನ್ನ ಮೊದಲನೇ ಬೂಟನ್ನೆಸೆದರೆ ಅದಾದ ಮರುಕ್ಷಣದಲ್ಲಿ ಇನ್ನೊಂದು ಬೂಟನ್ನೂ ಎಸೆಯುತ್ತಾ "ಇದು ನಿನಗೆ ವಿಧವೆಯರು, ಅನಾಥರು ಮತ್ತು ಸತ್ತವರ ಕೊಡುಗೆ" ಎಂದು ಹೇಳಿದ.

ಬುಷ್ ಸ್ವಲ್ಪದರಲ್ಲೇ ಆ ಪತ್ರಕರ್ತನ ಬೂಟನೇಟನಿಂದ ತಪ್ಪಿಸಿಕೊಂಡ. ಆ ಬೂಟನೇಟು ಬುಷ್ ಮೈಮೇಲೆ ಯಾವುದೇ ಗಾಯ, ನೋವು ಉಂಟುಮಾಡಲಿಲ್ಲವಾದರೂ ಜಗತ್ತಿನ ಸರ್ವಾಧಿಕಾರಿಯಂತೆ ಮೆರೆದ ಅವನ ಎದೆಯೊಳಗೆ ಬಲವಾಗಿ ಗುದ್ದಿದಂತಾಗಿದ್ದು ಮಾತ್ರ ಸತ್ಯ. ಘಟನೆಯ ನಂತರ ತನ್ನ ಪತ್ರಿಕಾಗೋಷ್ಠಿಯನ್ನು ಮುಂದುವರೆಸಿದ ಬುಷ್ "ಆತ ಬೂಟು ಎಸೆದಿರುವುದರಿಂದ ನನಗೇನೂ ಬೇಸರವಿಲ್ಲ, ಇದು ಅಮೆರಿಕದ ರಾಜಕೀಯ ಪ್ರತಿಭಟನೆಗೆ ಸಮ. ಇದು ಇರಾಕ್ ಸ್ವತಂತ್ರ ದೇಶವಾಗಿದೆ ಎಂಬುದನ್ನು ಸೂಚಿಸುತ್ತದೆ. ಆ ಹುಡುಗನಿಗೆ ಟಿ.ವಿಯಲ್ಲಿ ಬರಬೇಕಾಗಿತ್ತು, ಅದಕ್ಕಾಗಿ ಆತ ಹಾಗೆ ಮಾಡಿದ್ದಾನೆ...." ಹೀಗೆ ಏನೇನೋ ಬಡಬಡಾಯಿಸುತ್ತಾ ತನಗಾದ ಮರ್ಮಾಘಾತವನ್ನು ಮುಚ್ಚಿಕೊಳ್ಳಲು ಪ್ರಯತ್ನಿಸಿದ.

ಈ ಘಟನೆ ಕ್ಷಣಾರ್ಧದಲ್ಲಿ ವಿಶ್ವದಾದ್ಯಂತ ಹರಡಿ ಬಲಿಯಾಂತರ ಜನರನ್ನು ಆಕರ್ಷಿಸಿತು. ಖುದ್ದು ಅನೇಕ ಸರ್ಕಾರಗಳೇ ಬುಷ್‌ಗೆ ಬೂಟನೇಟನ್ನು ಸಮರ್ಥಿಸಿಕೊಂಡವು. ಉದಾಹರಣೆಗಾಗಿ ಹೇಳುವುದಾದರೆ, ಉತ್ತರ ಕೊರಿಯ ಸರ್ಕಾರದ ಅಧಿಕೃತ ಸರ್ಕಾರಿ ಪತ್ರಿಕೆಯೇ "ಬುಷ್ ಬೂಟನೇಟಿಗೆ ಅರ್ಹರು" ಎಂದು ಕರೆದಿದೆ. ಮಲೇಷಿಯಾದ ವಿದೇಶಾಂಗ ಸಚಿವ "ಇದು ಪ್ರತೀಕಾರದ ಅತ್ಯುತ್ತಮ ಪ್ರದರ್ಶನ" ಎಂದಿದ್ದಾರೆ. ಇನ್ನು ಅಮೆರಿಕದ ಮಿಲಿಟರಿ ದೌರ್ಜನ್ಯಗಳನ್ನು, ಅಟ್ಟಹಾಸಗಳನ್ನು ಅನುಭವಿಸುತ್ತಿರುವ ಇರಾಕಿ, ಅಫಘಾನಿಸ್ತಾನಿ ಜನತೆಯಂತೂ ಈ ಪ್ರಕರಣವನ್ನು ಒಂದು ರೀತಿಯ ಹಬ್ಬದಂತೆ ಆಚರಿಸಿದ್ದಾರೆ; ಬೂಟೆಸೆದ ಪತ್ರಕರ್ತ ಮಂತದಾರ್ ಅಲ್ ಜೈದಿಯಂತೂ ಅವರಿಗೆ ತಮ್ಮೆಲ್ಲರ ಆಕ್ರೋಶವನ್ನು ಪ್ರತಿನಿಧಿಸುವ ಹೀರೋ ಆಗಿ ಮಾರ್ಪಟ್ಟಿದ್ದಾನೆ. ಉಳಿದಂತೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಅಮೆರಿಕದ ಅಟ್ಟಹಾಸಗಳಿಗೆ ಬಲಿಯಾದ ವಿಶ್ವದ ಅನೇಕ ದೇಶಗಳ ಜನರೂ ಆ ಪತ್ರಕರ್ತನ ಧೈರ್ಯವನ್ನು ಶ್ಲಾಘಿಸಿದ್ದಾರಲ್ಲದೇ ಇದು ಏತಕ್ಕೂ ಸಾಲದು, ಬುಷ್‌ಗೆ ಇದಕ್ಕಿಂತ ದೊಡ್ಡ ಶಿಕ್ಷೆಯಾಗಬೇಕು ಎನ್ನುತ್ತಿದ್ದಾರೆ.

ಬುಷ್‌ಗೆ ಬೂಟು ಎಸೆದ ಜೈದಿಯನ್ನು ಪೊಲೀಸರು ಬಂಧಿಸಿ ಕೊಡಬಾರದ ಚಿತ್ರಹಿಂಸೆ ಕೊಟ್ಟಿದ್ದಾರೆ. ಆತನನ್ನು ಇರಾಕಿನ ಕೋರ್ಟಿಗೆ ತಂದಾಗ ಆತನ ಮುಖವನ್ನೂ ಒಳಗೊಂಡಂತೆ ಇಡೀ ದೇಹ ಚಿತ್ರಹಿಂಸೆಯಿಂದ ಜರ್ಝರಿತವಾಗಿತ್ತು, ಖುದ್ದು ನ್ಯಾಯಾಧೀಶರಾದ ಧಿಯಾ ಅಲ್-ಖಿನಾನಿಯವರೇ ಆತನ ಮೈಮೇಲಾಗಿರುವ ಚಿತ್ರಹಿಂಸೆಯ ಗಾಯಗಳನ್ನು ನೋಡಿ ಹೌಹಾರಿದ್ದಾರೆ. ಈಗ ಆ ಪತ್ರಕರ್ತನನ್ನು ಬಿಡುಗಡೆ ಮಾಡಬೇಕೆಂದು ವಿಶ್ವದಾದ್ಯಂತ ಪ್ರತಿಭಟನೆಗಳು ನಡೆಯುತ್ತಿವೆ.

ಬುಷ್ ವಿರುದ್ಧದ ಈ ಆಕ್ರೋಶಕ್ಕೆ ಕಾರಣಗಳಿವೆ. ಎಂಟು ವರ್ಷಗಳ ತನ್ನ ಆಳ್ವಿಕೆಯಲ್ಲಿ ಬುಷ್ ಕುಟುಂಬ ಪ್ರಪಂಚದ ಜನರ ಮೇಲೆ ಮಾಡಿರುವಷ್ಟು ದೌರ್ಜನ್ಯಗಳನ್ನು ಚರಿತ್ರೆಯಲ್ಲಿ ಪ್ರಾಯಶಃ ಯಾರೂ ಮಾಡಿರಲಾರರು. ಅಮೆರಿಕದ ಅಧ್ಯಕ್ಷನಾಗಿದ್ದ ಬುಷ್‌ನ ಅಪ್ಪ ಸೀನಿಯರ್ ಬುಷ್ ಇರಾಕ್ ಮೇಲೆ ಯುದ್ಧ ಮಾಡಿ ಲಕ್ಷಾಂತರ ಬಡ ಇರಾಕಿಗಳನ್ನು ಕೊಂದು ಹಾಕಿದ್ದ; ಯುದ್ಧ ಮುಗಿದ ಮೇಲೆ ಇರಾಕ್ ಮೇಲೆ ಆರ್ಥಿಕ ದಿಗ್ಬಂಧನ ಹೇರಿ ಔಷಧಿಯಂತಹ ಜೀವನಾವಶ್ಯ ವಸ್ತುಗಳೂ ಇರಾಕಿಗೆ ಆಮದಾಗದಂತೆ ಮಾಡಿ ಲಕ್ಷಾಂತರ ಇರಾಕಿ ಜನರನ್ನು ಕೊಂದು ಹಾಕಿದ. ಕೇವಲ ಔಷಧಿಯ ಕೊರತೆಯೊಂದರಿಂದಲೇ ಮೂರು ಲಕ್ಷಕ್ಕೂ ಹೆಚ್ಚು ಇರಾಕಿ ಮಕ್ಕಳು ಸಾವಿಗೀಡಾದರು ಎಂದರೆ ಆಹಾರ ಧಾನ್ಯಗಳ ಕೊರತೆಯಿಂದ ಇನ್ನೆಷ್ಟು ಜನ ಸತ್ತಿದ್ದಿರಬಹುದು? ಅಪ್ಪನನ್ನು ಮೀರಿಸುವ ಮಗನೆಂಬುದನ್ನು ಜೂನಿಯರ್ ಬುಷ್ ತೋರಿಸಿಕೊಟ್ಟಿದ್ದಾನೆ.

ಯುದ್ಧ ಸನ್ನಿ ಹಿಡಿದವನಂತೆ ವರ್ತಿಸುವ ಬುಷ್ ಅಧಿಕಾರಕ್ಕೆ ಬರುತ್ತಿದ್ದಂತೆ ವಿಶ್ವ ವಾಣಿಜ್ಯ ಕೇಂದ್ರ, ಪೆಂಟಗಾನ್ ಮೇಲಿನ ದಾಳಿಯನ್ನೇ ನೆಪವಾಗಿಟ್ಟುಕೊಂಡು 2001ರಲ್ಲಿ ಅಫಘಾನಿಸ್ತಾನದ ಮೇಲೆ ಯುದ್ಧ ಸಾರಿದ. (ವಾಸ್ತವದಲ್ಲಿ ಯುದ್ಧ ಮಾಡುವುದಕ್ಕಾಗಿಯೇ ವಿಶ್ವ ವಾಣಿಜ್ಯ ಕೇಂದ್ರ ಕಟ್ಟಡದ ಮೇಲೆ ತಾನೇ ದಾಳಿ ಮಾಡಿ, ಅದನ್ನು ಅಲ್‌ಖೈದಾ ಸಂಘಟನೆಯ ಮೇಲೆ ಹೊರಿಸಲಾಯಿತೆಂದು ದಾಳಿಯನ್ನು ಸೂಕ್ಷ್ಮವಾಗಿ ಅವಲೋಕಿಸಿದ ಅನೇಕ ಅಧ್ಯಯನಗಳು ಪುರಾವೆ ಸಮೇತ ಬಿಚ್ಚಿಟ್ಟಿವೆ). ಸುಮಾರು ಐವತ್ತು ಸಾವಿರದಷ್ಟು ಸೈನಿಕರು, ಅತ್ಯಾಧುನಿಕ ಯುದ್ಧ ವಿಮಾನಗಳನ್ನು, ಟ್ಯಾಂಕರ್‌ಗಳನ್ನು ನುಗ್ಗಿಸಿ, ಕಂಡಕಂಡಲ್ಲಿ ಬಾಂಬುಗಳನ್ನು ಸಿಡಿಸಿ ಇಡೀ ಅಫಘಾನಿಸ್ತಾನವನ್ನು ನಜ್ಜುಗುಜ್ಜು ಮಾಡಿ ಸಾವಿರಾರು ಸಂಖ್ಯೆಯ ಅಮಾಯಕ ನಾಗರಿಕರನ್ನು ಕೊಂದ; ಅವರ ಹೇಳತೀರದಷ್ಟು ಆಸ್ತಿಪಾಸ್ತಿ ಧ್ವಂಸಗೊಳಿಸಿದ. ಅಫಘಾನಿಸ್ತಾನದಲ್ಲಿ 2001ರಲ್ಲಿ ಪ್ರಾರಂಭವಾದ ಬುಷ್‌ನ ಬರ್ಬರ ದೌರ್ಜನ್ಯಗಳು ಇಂದಿಗೂ ಮುಂದುವರೆಯುತ್ತಿವೆ. ಈತ ಅಫಘಾನಿಸ್ತಾನದಲ್ಲಿ ಮಾಡಿದ ದೌರ್ಜನ್ಯಕ್ಕೆ ಪ್ರತ್ಯುತ್ತರವಾಗಿ ಕೇವಲ ಎರಡು ಬೂಟನೇಟು ಸಾಕಾಗುತ್ತದೆಯೆ?

ಅತ್ತ ಅಫಘಾನಿಸ್ತಾನದಲ್ಲಿ ಅಮಾಯಕರ ಹೆಣಗಳ ಮೇಲೆ ವಿಜಯೋತ್ಸವ ಆಚರಿಸುತ್ತಲೇ ಈ ಗಿಡುಗ ಇರಾಕ್ ಎಂಬ ಪುಟ್ಟ ಗುಬ್ಬಚ್ಚಿಯ ಮೇಲೆರಗಿದ. ಸಮೂಹ ನಾಶಕ ಶಸ್ತ್ರಾಸ್ತ್ರಗಳನ್ನು ಇರಾಕ್ ಹೊಂದಿದೆ ಎಂದು ಆರೋಪಿಸಿ 2002ರಲ್ಲಿ ಇರಾಕಿನ ಮೇಲೆ ತನ್ನ ಸೈನ್ಯವನ್ನು ನುಗ್ಗಿಸಿ ಸಾವಿರಾರು ಸಂಖ್ಯೆಯ ಅಮಾಯಕ ಇರಾಕಿಯರನ್ನು ಕೊಂದು ಹಾಕಿದ. ಇಡೀ ಪ್ರಪಂಚವನ್ನು ಇಪ್ಪತ್ತು ಬಾರಿ ಸುಟ್ಟು ಹಾಕುವಷ್ಟು ಸಮೂಹ ನಾಶಕ ಶಸ್ತ್ರಾಸ್ತ್ರಗಳನ್ನು ತಾನೇ ಬಗಲಲ್ಲಿಟ್ಟುಕೊಂಡು ಇರಾಕಿನ ಮೇಲೆ ಅನ್ಯಾಯವಾಗಿ ಯುದ್ಧ ಮಾಡಲು ಹೊರಟ ಬುಷ್ ವಿರುದ್ಧ ಇಡೀ ಪ್ರಪಂಚದ ಜನ ಅಭೂತಪೂರ್ವವಾಗಿ ಪ್ರತಿಭಟಿಸಿದರೂ ಲೆಕ್ಕಿಸದೇ ಇಡೀ ಇರಾಕ್ ಮೇಲೆ ಬಾಂಬ್ ದಾಳಿ ನಡೆಸಿ ಅದನ್ನು ಛಿದ್ರ ಮಾಡಿಹಾಕಿದ. ಇವನ ಬಾಲಂಗೋಚಿಗಳು ಇಡೀ ಇರಾಕನ್ನು ಇಂಚುಇಂಚಾಗಿ ಹುಡುಕಿದರೂ ಅವನು ಆರೋಪಿಸಿದಂತೆ ಒಂದೂ ಸಮೂಹ ನಾಶಕ ಶಸ್ತ್ರಾಸ್ತ್ರಗಳು ದೊರೆಯಲಿಲ್ಲ, ಹತಾಶೆಯಿಂದ ಅಮೆರಿಕದ ಅಧಿಪತ್ಯಕ್ಕೆ ಸೆಡ್ಡು ಹೊಡೆದು ನಿಂತಿದ್ದ ಅಮೆರಿಕ ವಿರೋಧಿ ಭಾವನೆಗಳ ಪ್ರತಿನಿಧಿಯಂತಿದ್ದ ಇರಾಕಿನ ಅಧ್ಯಕ್ಷ ಸದ್ದಾಂ ಹುಸೇನನನ್ನು ನೇಣಿಗೇರಿಸುವ ಮೂಲಕ ಮೈಪರಚಿಕೊಂಡ. 1991ರಲ್ಲಿ ಈತನ ಅಪ್ಪ ಮಾಡಿದ ದಾಳಿಯಿಂದ ಮೊದಲ್ಗೊಂಡು ಈ ಹೊತ್ತಿನ ತನಕ ಇರಾಕಿನ ಜನತೆ ಒಂದಿಲ್ಲೊಂದು ರೀತಿಯಲ್ಲಿ ನಿರಂತರ ದೌರ್ಜನ್ಯಗಳನ್ನು ಎದುರಿಸುತ್ತಲೇ ಇದ್ದಾರೆ; ಅಮೆರಿಕದ ಸೈನ್ಯ ಅವ್ಯಾಹತವಾಗಿ ನಡೆಸುತ್ತಿರುವ ಅಟ್ಟಹಾಸಗಳನ್ನು ಅನುಭವಿಸುತ್ತಲೇ ಇದ್ದಾರೆ. ಇರಾಕ್ ಮೇಲೆ ಈತ ಮಾಡಿದ ದೌರ್ಜನ್ಯಗಳಿಗೆ ಪ್ರತಿಯಾಗಿ ಬುಷ್‌ಗೆ ಕೇವಲ ಎರಡು ಬೂಟನೇಟುಗಳನ್ನು ಮಾತ್ರ ಕೊಟ್ಟರೆ ಸಾಕೆ?

ಮಧ್ಯಪ್ರಾಚ್ಯದಲ್ಲಿ ಇಸ್ರೇಲ್ ಎಂಬ ಗೂಂಡಾ ದೇಶಕ್ಕೆ ಶಸ್ತ್ರಾಸ್ತ್ರ, ದುಡ್ಡು ಸರಬರಾಜು ಮಾಡುತ್ತಾ ಇಡೀ ಮಧ್ಯಪ್ರಾಚ್ಯದಲ್ಲಿ, ಅದರಲ್ಲೂ ವಿಶೇಷವಾಗಿ ಪ್ಯಾಲಿಸ್ಟೇನ್ ಜನರ ಮೇಲೆ ಈತ ನಡೆಸುತ್ತಿರುವ ದೌರ್ಜನ್ಯಗಳಿಗೆ, ಕೊಲೆ-ಸುಲಿಗೆಗಳಿಗೆ ಲೆಕ್ಕವಿದೆಯೆ? ಇಂದು ಇಸ್ರೇಲ್‌ನ ಗೂಂಡಾಗಿರಿಯಿಂದ ಇಡೀ ಪ್ಯಾಲಿಸ್ಟೇನ್ ಅಕ್ಷರಶಃ ಮಸಣಭೂಮಿಯಾಗಿದೆಯೆಂದರೆ ಅದಕ್ಕೆ ನೇರ ಹೊಣೆ

ಸುತ್ತ ಮುತ್ತ

ಕುಮಾರ್ ಬುರಡಿಕಟ್ಟಿ



ಈ ಬುಷ್. ಅಂಥ ರಾಕ್ಷಸ ಭಯೋತ್ಪಾದಕನಿಗೆ ಕೇವಲ ಎರಡು ಬೂಟನೇಟು ಸಾಕೆ?


ಇವು ಬುಷ್‌ನ ದೌರ್ಜನ್ಯಕ್ಕೆ ಕೆಲವು ಉದಾಹರಣೆಗಳು ಮಾತ್ರ. ಕೇವಲ ಅಫಘಾನಿಸ್ತಾನ, ಇರಾಕ್, ಪ್ಯಾಲಿಸ್ಟೇನುಗಳು ಮಾತ್ರ ಈತನ ದೌರ್ಜನ್ಯಗಳಿಗೆ ತುತ್ತಾಗಿಲ್ಲ, ಇವನ ರಕ್ತಪಿಪಾಸು ದೌರ್ಜನ್ಯಕ್ಕೆ ಒಳಗಾಗದ ದೇಶಗಳೇ ಇಲ್ಲ, ಇರಾನ್, ಸಿರಿಯಾ, ಕೊರಿಯಾಗಳಂಥ ದೇಶಗಳ ಮೇಲೂ ನೇರವಾಗಿ ಯುದ್ಧ ಮಾಡುವುದಕ್ಕೆ ಹವಣಿಸುತ್ತಲೇ ಇದ್ದಾನೆ. ಅಲ್ಲದೇ, ಇಡೀ ವಿಶ್ವದ ಮೇಲೆ ರಾಜಕೀಯ, ಆರ್ಥಿಕ ಮತ್ತು ಸೈನಿಕ ಅಧಿಪತ್ಯ ಸಾಧಿಸುವುದಕ್ಕಾಗಿ ಒಂದೊಂದು ದೇಶಗಳೊಂದಿಗೂ ಅನ್ಯಾಯಯುತವಾದ ದ್ವಿಪಕ್ಷೀಯ ಒಪ್ಪಂದಗಳನ್ನು ಮಾಡಿಕೊಂಡು ಆ ದೇಶಗಳ ಜನರ ಬದುಕನ್ನು ನರಕ ಮಾಡಿಟ್ಟಿದ್ದಾನೆ. ಇದಕ್ಕೆ ಭಾರತವೂ ಹೊರತಲ್ಲ, ಇಂದು ವಿಶ್ವದಾದ್ಯಂತ ಜನ ಬಡತನ, ನಿರುದ್ಯೋಗ, ಅನಕ್ಷರತೆ, ಹಸಿವುಗಳಿಂದ ನರಳುತ್ತಿದ್ದಾರೆಂದರೆ ಅದಕ್ಕೆ ಬುಷ್ ಆಡಳಿತ ನೀತಿಗಳು ನೇರವಾಗಿ ಕಾರಣವಾಗಿವೆ. ಇಂಥ ರಣಹದ್ದಿಗೆ ಕೇವಲ ಎರಡು ಬೂಟನೇಟುಗಳ ಪ್ರತೀಕಾರ ಸಾಕಾಗುತ್ತದೆಯೆ?

2001ರಲ್ಲಿ ನ್ಯೂಯಾರ್ಕ್ ವಿಶ್ವ ವಾಣಿಜ್ಯ ಕೇಂದ್ರದ ಮೇಲೆ ಭಯೋತ್ಪಾದಕರೇ ದಾಳಿ ಮಾಡಿದ್ದಾರೆಂದು ಕೊಂಡರೂ ಆ ದಾಳಿಯಲ್ಲಿ ಸತ್ತವರು ಸುಮಾರು ಮ… ಸಾವಿರ ಜನ. ಅಲ್ಲಿಂದಾಚೆಗೆ ಮುಂದಿನ ಮ… ವರ್ಷಗಳಲ್ಲಿ ವಿಶ್ವದಾದ್ಯಂತ ಭಯೋತ್ಪಾದಕರ ದಾಳಿ… ಸತ್ತವರು ಸುಮಾರು ಮೂರು ಸಾವಿರ ಜನ. ಅಂದ… ಮೂರು ವರ್ಷಗಳಲ್ಲಿ ಭಯೋತ್ಪಾದಕ ದಾಳಿಗೆ … ಯಾದವರ ಒಟ್ಟು ಸಂಖ್ಯೆ ಆರು ಸಾವಿರ. ಆದರೆ, … ಮೂರು ವರ್ಷದಲ್ಲಿ ಬುಷ್ ನೇರವಾಗಿ ಅಫಘಾನಿ… ಮತ್ತು ಇರಾಕ್‌ಗಳಲ್ಲಿ ತನ್ನ ಸೈನ್ಯದ ಮೂಲಕ ಕೊಂ… ಮೂವತ್ತು ಸಾವಿರಕ್ಕೂ ಹೆಚ್ಚು ಜನರನ್ನು! ಈತನ ಚೆ… ಇಸ್ರೇಲ್ ಮಧ್ಯಪ್ರಾಚ್ಯದಲ್ಲಿ ಕೊಂದಿರುವ ಜನರನ್ನು, … ಗ್ವಾಂಟನಾಮೋ ಬೇ ಎಂಬ ಚಿತ್ರಹಿಂಸಾ ಶಿಬಿ… ಚಿತ್ರಹಿಂಸೆ ಅನುಭವಿಸಿ ಸತ್ತಿರುವ ಜನರನ್ನು, … ಗುಪ್ತಚರ ದಳ ಸಿಐಎ ವಿಶ್ವದಾದ್ಯಂತ ಅನಧಿಕೃತ… ಕೊಂದಿರುವ ಜನರನ್ನು ಲೆಕ್ಕಕ್ಕೆ ತೆಗೆದುಕೊಂಡರೆ … ಅಧಿಕೃತವಾಗಿಯೇ ಕೊಂದಿರುವ ಜನರ ಸಂಖ್ಯೆ ಐ… ಸಾವಿರ ದಾಟುತ್ತದೆ. ಅಂತೆಯೇ, ಈತನ ಅನ್ಯಾಯ… ಒಪ್ಪಂದಗಳ ಕಾರಣದಿಂದಾಗಿ, ಆಕ್ರಮಣಕಾರಿ ಆ… ನೀತಿಯ ಕಾರಣದಿಂದಾಗಿ, ವಿಶ್ವದ ಮೇಲೆ … ಯಾಜಮಾನ್ಯವನ್ನು ಸ್ಥಾಪಿಸುವುದಕ್ಕಾಗಿ ಈತ ನ… ಒಳಸಂಚಿನ ಕಾರಣದಿಂದಾಗಿ ವಿಶ್ವದಾದ್ಯಂತ ಹ… ಬಡತನ, ನಿರುದ್ಯೋಗಗಳಿಂದ … ಸತ್ತವರನ್ನೂ ಈತ ಮಾಡಿದ ಪರ… ಕೊಲೆಗಳೆಂದೇ ಪರಿಭಾವಿಸಿದರೆ ಒ… ತನ್ನ ಎಂಟು ವರ್ಷಗಳ ಆಡ… ವಧಿಯಲ್ಲಿ ಈತ ಕೊಂದಿರುವ ಅ… ಯಕರ ಸಂಖ್ಯೆ ಅದೆಷ್ಟು ಲಕ್ಷಗಳ… ತವೆಯೋ? ಭಯೋತ್ಪಾದನೆ ನಿ… ಕ್ಕಾಗಿಯೇ ಆತನ ದೇಶ ಸ್ಥಾಪಿಸಿ… **Federal Bureau** … **Investigation** ಭಯೋತ್ಪಾ… ಯನ್ನು ಈ ರೀತಿ ವ್ಯಾಖ್ಯಾನಿಸುತ್ತದೆ: **Terroris… the unlawful use of force or viole… against persons or property … intimidate or coerce a government, … civilian population, or any segm… thereof, in furtherance of political … social objectives.** ಇದರ ಪ್ರಕಾರ … ಹೋಗುವುದಾದರೂ ಜಾರ್ಜ್ ಡಬ್ಲ್ಯೂ ಬುಷ್ ವಿ… ನಂಬರ್ ಒನ್ ಭಯೋತ್ಪಾದಕನಾಗುತ್ತಾನೆ. ಇಂತಹ ಭ… ಭಯೋತ್ಪಾದಕನಿಗೆ ಕೇವಲ ಎರಡು ಬೂಟನೇಟನ… ಸಾಕಾಗುತ್ತದೆಯ?

ವಿಶ್ವದ ಆರು ನೂರು ಕೋಟಿ ಜನರಲ್ಲಿ ಬ… ಮತ್ತಾತನ ಬೆಂಬಲಿಗರನ್ನು ಹೊರತುಪ… ಉಳಿದವರೆಲ್ಲರೂ ಒಂದಲ್ಲಾ ಒಂದು ರೀತಿಯಲ್ಲಿ ಬ… ದೌರ್ಜನ್ಯಕ್ಕೆ ಬಲಿಯಾದವರೇ ಆಗಿದ್ದಾರೆ. ಅವರೇ… ತಮ್ಮ ಒಂದೊಂದೇ ಬೂಟುಗಳನ್ನು ಎಸೆದು ಕೊಂ… ಅದು ಆತ ಮಾಡಿದ ಪಾಪಕ್ಕೆ ಕಡಿಮೆಯೇ. ಮಂತ… ಅಲ್ ಜೈದಿ ತನ್ನ ಕರ್ತವ್ಯವನ್ನು ನಿಭಾಯಿಸಿ… ಉಳಿದಿರುವುದು ಮಿಕ್ಕವರ ಸರದಿಯಷ್ಟೆ.





ಚುನಾವಣೆ ಮತ್ತು ಒಂದು ಸುಂದರ ದ್ವೀಪದ ಕತೆ



ಕಂಡಹಾಗೆ

■ ಗೌರಿ ಲಂಕೇಶ್

ನೀಲಿ ಆಕಾಶ, ಸುತ್ತಲೂ ದಟ್ಟ ನೀಲಿ ಬಣ್ಣದ ಸಮುದ್ರ, ವರ್ಷಪೂರ್ತಿ ಆಹ್ಲಾದಕರ ಹವಾಮಾನವನ್ನು ಹೊಂದಿರುವ ಆ ದ್ವೀಪ ಎಷ್ಟು ಸುಂದರವಾಗಿದೆ ಎಂದರೆ ಚಾರ್ಲ್ಸ್ ಸ್ವಿನ್‌ಬರ್ನ್ ಎಂಬ 19ನೇ ಶತಮಾನದ ಕವಿ ಅದನ್ನು "ಸಮುದ್ರದ ಅಲೆಗಳಿಂದ ಸುತ್ತುವರಿದಿರುವ ಸುಂದರ ಜಗತ್ತು" ಎಂದು ವರ್ಣಿಸಿದ್ದ. ಆಧುನಿಕ ಜಗತ್ತಿನಿಂದ ಇವತ್ತಿಗೂ ದೂರವೇ ಉಳಿದಿರುವ ಆ ದ್ವೀಪ ತನ್ನ ಪ್ರಾಕೃತಿಕ ರಮ್ಯತೆಯಿಂದ ಸಾವಿರಾರು ಪ್ರವಾಸಿಗರನ್ನು ಆಕರ್ಷಿಸುತ್ತದೆ.

ಆ ದ್ವೀಪ ಏಷ್ಯಾದ ಅಥವಾ ಆಫ್ರಿಕಾದ ಯಾವುದೋ ಮೂಲೆಯಲ್ಲಿಲ್ಲ. ಬದಲಾಗಿ ಬ್ರಿಟನ್ ಮತ್ತು ಫ್ರಾನ್ಸ್ ನಡುವೆ ಇಂಗ್ಲಿಷ್ ಚಾನೆಲ್‌ನಲ್ಲಿದೆ. ಸುಮಾರು 1,350 ಎಕರೆಯಷ್ಟು ವಿಸ್ತಾರವಾದ ಈ ದ್ವೀಪ ಕಳೆದ 450 ವರ್ಷಗಳಿಂದ ಊಳಿಗಮಾನ್ಯ ವ್ಯವಸ್ಥೆಯನ್ನೇ ಹೊಂದಿದ್ದು ಇಂದಿಗೂ ಅಲ್ಲಿ ಡಾಂಬರು ರಸ್ತೆಗಳಿಲ್ಲ, ಬೀದಿ ದೀಪಗಳಿಲ್ಲ, ಮೋಟಾರ್ ಸೈಕಲ್‌ಗಳಾಗಲಿ ಕಾರ್‌ಗಳಾಗಲಿ ಇಲ್ಲವೇ ಇಲ್ಲ. ಅಲ್ಲಿನ 600 ಜನಸಂಖ್ಯೆಯಲ್ಲಿ ಹೆಚ್ಚಿನವರು ಇವತ್ತಿಗೂ ಗೇಣಿ ಆಧಾರದ ಮೇಲೆ ವ್ಯವಸಾಯ ಮಾಡುತ್ತಾ ಬದುಕನ್ನು ಸಾಗಿಸುತ್ತಿದ್ದಾರೆ.

ಇಂತಹ ಸುಂದರ, ನೆಮ್ಮದಿಯ ದ್ವೀಪದ ಮೇಲೆ ಬಂಡವಾಳಶಾಹಿಗಳ ನೇತೃತ್ವದಲ್ಲಿ ಪ್ರಜಾಪ್ರಭುತ್ವ ಎಂಬ ವ್ಯವಸ್ಥೆ ಇತ್ತೀಚೆಗೆ ದಾಳಿ ಮಾಡಿದೆ. ಪರಿಣಾಮವಾಗಿ ಅಲ್ಲಿನ ಬಹಳಷ್ಟು ಜನ ನಿರುದ್ಯೋಗಿಗಳಾಗಿ ಅನಿಶ್ಚಿತ ಭವಿಷ್ಯವನ್ನು, ನೆಮ್ಮದಿ ಇಲ್ಲದ ಬದುಕನ್ನು ಎದುರಿಸುವಂತಾಗಿದೆ.


ಈ ದ್ವೀಪದ ಹೆಸರು ಸಾರ್ಕ್. ಇದು ಬ್ರಿಟನ್ ಸರ್ಕಾರಕ್ಕೆ ಸೇರದೆ ಬ್ರಿಟಿಷ್ ರಾಜವಂಶದ ನೇರ ಸುಪರ್ದಿಯಲ್ಲಿದೆ. 1572 ರಲ್ಲಿ ಈ ದ್ವೀಪವನ್ನು ಮೊದಲನೆ ಎಲಿಜಬೆತ್ ರಾಣಿ ಒಂದು ವಂಶಕ್ಕೆ ಬಳುವಳಿಯಾಗಿ ನೀಡಿದಳು. ಅಂದಿನಿಂದ ಇವತ್ತಿನ ತನಕ ಬ್ರಿಟಿಷ್ ರಾಜವಂಶಕ್ಕೆ ಪ್ರತಿ ವರ್ಷ 1.72 ಪೌಂಡ್‌ಗಳನ್ನು (ಸುಮಾರು 140 ರೂಪಾಯಿಗಳು) ಶುಲ್ಕವಾಗಿ ನೀಡುತ್ತಿರುವ ಆ ವಂಶ ದ್ವೀಪವನ್ನು 40 ತುಂಡುಗಳಾಗಿ ವಿಂಗಡಿಸಿ ಅವುಗಳನ್ನು ಸ್ಥಳೀಯ ರೈತರಿಗೆ ಗುತ್ತಿಗೆ ಆಧಾರದ ಮೇಲೆ ನೀಡುತ್ತಿತ್ತು. ಆದರೆ ನಮ್ಮಲ್ಲಿರುವಂತೆ ಜಾತಿ ವ್ಯವಸ್ಥೆಯಾಗಲಿ, ಶೋಷಣೆಯಾಗಲಿ ಅಲ್ಲಿ ಇಲ್ಲವಾದ್ದರಿಂದ ಜನ ಬೇಸಾಯ ಮಾಡುತ್ತಾ ನೆಮ್ಮದಿಯಿಂದಿದ್ದರು.

ಈ ದ್ವೀಪಕ್ಕೆ ಹದಿನೈದು ವರ್ಷಗಳ ಹಿಂದೆ ಶನಿಗಳಂತೆ ವಕ್ಕರಿಕೊಂಡಿದ್ದು ಡೇವಿಡ್ ಮತ್ತು ಫ್ರೆಡರಿಕ್ ಬಾರ್ಕ್ಲೆ ಎಂಬ ಅವಳಿ-ಜವಳಿ ಸಹೋದರರು. ಸಾರ್ಕ್ ಹತ್ತಿರವೇ ಇರುವ ಮತ್ತು ಸಾರ್ಕ್‌ನ ಹಾಲಿ ಮಾಲೀಕ ಮೈಕಲ್ ಬೋಮಾ ಎಂಬಾತನ ಅಧಿಕಾರದಡಿ ಬರುವ ಬ್ರೆಖೊ ಎಂಬ 80 ಎಕರೆಯ ಪುಟ್ಟ ದ್ವೀಪವನ್ನು 1993 ರಲ್ಲಿ ಬಾರ್ಕ್ಲೆ ಸಹೋದರರು ಖರೀದಿಸಿದರು. ಆ ದ್ವೀಪದಲ್ಲಿ ಕೋಟೆಯಂತಹ ಅರಮನೆಯನ್ನು ಕಟ್ಟಿಸಿಕೊಂಡ ವೃದ್ಧ ಬಾರ್ಕ್ಲೆ ಸಹೋದರರು ಅಲ್ಲಿ ತಮಗೆ ಬೇಕಿರುವ ಹೆಲಿಪ್ಯಾಡ್, ಈಜುಕೊಳ, ಸುಂದರವಾದ ಹೂತೋಟ ನಿರ್ಮಿಸಿಕೊಂಡು ಜೀವಿಸಲಾರಂಭಿಸಿದರು. ಲಂಡನ್‌ನ ಐಷಾರಾಮಿ ರೀಜ್ಜ್ ಹೋಟೆಲ್ ಮತ್ತು ಪ್ರತಿಷ್ಠಿತ ಟೆಲಿಗ್ರಾಫ್ ಪತ್ರಿಕೆ ಸೇರಿದಂತೆ ಹಲವಾರು ರಿಯಲ್ ಎಸ್ಟೇಟ್‌ಗಳ ಮಾಲೀಕರಾಗಿರುವ, ಜಗತ್ತಿನಲ್ಲೆ 27 ಶ್ರೀಮಂತರಾಗಿರುವ ಬಿಲಿಯನೇರ್ ಬಾರ್ಕ್ಲೆ ಸಹೋದರರು ಸಾರ್ಕಿ (ಸಾರ್ಕ್ ದ್ವೀಪದ ಜನರನ್ನು ಹಾಗೆಂದು ಕರೆಯುತ್ತಾರೆ)ಗಳೊಂದಿಗೆ ಯಾವ ಸಂಪರ್ಕವನ್ನೂ ಹೊಂದದೆ ತಮ್ಮ ಪಾಡಿಗೆ ತಾವಿದ್ದರು. ಆದರೆ ತಮ್ಮ ಬ್ರೆಖೊ ದ್ವೀಪಕ್ಕಾಗಿ ಸಾರ್ಕ್‌ನ ಮಾಲೀಕ ಬೊಮಾರಿಗೆ ಪ್ರತೀ ವರ್ಷ ಲಕ್ಷಾಂತರ ಪೌಂಡ್‌ಗಳ ತೆರಿಗೆ ನೀಡಬೇಕಿದ್ದು ಅವರಿಗೆ ಹೊಟ್ಟೆ ಉರಿ ತಂದಿತು.

ಆಗ ಅವರು ಸಾರ್ಕ್ ದ್ವೀಪದ ಮೇಲೆ ಸಮರ ಸಾರಿದರು. ಮೊದಲು ತಮ್ಮ ಮಾಲೀಕತ್ವದ ಬ್ರೆಖೊ ದ್ವೀಪವು ಸಾರ್ಕ್ ಮಾಲೀಕ ಬೊಮಾಗೆ ಸೇರದೆ [illegible]ದಾಗಿರುವುದರಿಂದ ತಾವು ತೆರಿಗೆ ನೀಡುವ ಅಗತ್ಯವಿಲ್ಲವೆಂದು ನ್ಯಾಯಾಲಯದ ಮುಂದೆ ವಾದಿಸಿದರು.

ಅತಿ ಶ್ರೀಮಂತರಾದ ಅವರ ವಿರುದ್ಧ ನ್ಯಾಯಾಲಯದಲ್ಲಿ ವಾದವಿವಾದ ನಡೆಸುವಷ್ಟರಲ್ಲಿ ಸಾರ್ಕ್ ಆಡಳಿತಕ್ಕೆ ಸಾಕು ಸಾಕಾಯಿತು. ಆನಂತರ ಸಾರ್ಕ್‌ನಲ್ಲಿನ ಊಳಿಗಮಾನ್ಯ ವ್ಯವಸ್ಥೆಯಿಂದ ತಮ್ಮ ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತಿದೆಯೆಂದೂ, ಆ ವ್ಯವಸ್ಥೆಯ ಬದಲಾಗಿ ಪ್ರಜಾಪ್ರಭುತ್ವ ವ್ಯವಸ್ಥೆ ಬರಬೇಕೆಂದೂ ಆಗ್ರಹಿಸಲಾರಂಭಿಸಿದರು.

ಪರಿಣಾಮವಾಗಿ ಸಾರ್ಕ್‌ನಲ್ಲಿ ಬದಲಾವಣೆಗಳು ಪ್ರಾರಂಭವಾದವು. ಊಳಿಗಮಾನ್ಯ ಪದ್ಧತಿಯನ್ನು ರದ್ದು ಮಾಡಿ ಉಳುವವನೇ ಒಡೆಯ ಎಂಬ ನೀತಿಯನ್ನು (1999 ರಲ್ಲಿ!) ಜಾರಿಗೆ ತರಲಾಯಿತು. ಹಾಗೆಯೇ ಸಾರ್ಕ್ ಮೇಲಿನ ಮೈಕೆಲ್ ಬೊಮಾರ 'ಒಡೆತನವನ್ನು' ರದ್ದು ಮಾಡಿ ಆತನಿಗೆ ವಾರ್ಷಿಕ ಸ್ಟೈಂಡ್ ಜೊತೆಗೆ 'ಸಾಂಕೇತ



ಪ್ರತಿನಿಧಿ'ಯ ಸ್ಥಾನವನ್ನು (ಒಂಥರಾ ನಮ್ಮ ರಾಜ್ಯಪಾಲರಂತೆ) ನೀಡಲಾಯಿತು.

ಎರಡು ವರ್ಷಗಳ ಹಿಂದೆ ಸಾರ್ಕ್‌ನಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಬೇಕೆ ಎಂದು ಜನಮತ ಪಡೆಯಲಾಯಿತು. ಜನ ಕೂಡ ಅದನ್ನು ಆಶಿಸಿದ್ದರಿಂದ ಸಾರ್ಕ್‌ಗೆ ಹೊಸ ಸಂವಿಧಾನವನ್ನು ರಚಿಸಿ ಕಳೆದ ವಾರ ಆ ದ್ವೀಪದಲ್ಲಿ ಪ್ರಥಮ ಬಾರಿಗೆ ಪ್ರಜಾತಾಂತ್ರಿಕ ಚುನಾವಣೆಗಳು ನಡೆದವು.


ಇದೆಲ್ಲ ಆರಂಭದಲ್ಲಿ ಜನಪರವಾಗಿ ಕಂಡರೂ ಅದರ ಹಿಂದೆ ಬಾರ್ಕ್ಲೆ ಸಹೋದರರ ಹುನ್ನಾರ ಅಡಗಿತ್ತು. ಯಾಕೆಂದರೆ ಚುನಾವಣೆಗಳು ನಡೆಯುವ ಮುನ್ನ, ಕಳೆದ ಒಂದೂವರೆ ವರ್ಷಗಳಿಂದ, ಬಾರ್ಕ್ಲೆ ಸಹೋದರರು ಸಾರ್ಕ್‌ನಲ್ಲಿನ ಹಲವಾರು ಆಸ್ತಿಗಳನ್ನು ಖರೀದಿಸಲಾರಂಭಿಸಿದರು. ಆ ದ್ವೀಪದಲ್ಲಿರುವ 40 ತುಂಡು ಭೂಮಿಗಳಲ್ಲಿ ಅತಿ ಮೌಲ್ಯಯುತವಾದವುಗಳನ್ನು ತಮ್ಮದಾಗಿಸಿಕೊಂಡರು. ಮಾತ್ರವಲ್ಲ, ಪ್ರವಾಸಿಗರು ತಂಗುವ ಏಳು ಹೋಟೆಲ್‌ಗಳಲ್ಲಿ ನಾಲ್ಕನ್ನು, ಅದರಲ್ಲಿರುವ ರೆಸ್ಟೋರೆಂಟ್‌ಗಳನ್ನು, ಪ್ರವಾಸಿಗರನ್ನೇ ಅವಲಂಬಿಸಿರುವ ಇತರೆ ಅಂಗಡಿ-ಮಳಿಗೆಗಳನ್ನು ಖರೀದಿಸಿದರು. ಈ ಎಲ್ಲ ಜಾಗೆಗಳಲ್ಲಿ ಅಗ್ಗ ದರದಲ್ಲಿ ವಹಿವಾಟು ನಡೆಸಿ ಸ್ಥಳೀಯರ್‍ಯಾರೂ ಸ್ವತಂತ್ರವಾಗಿ ಯಾವುದೇ ವ್ಯಾಪಾರ ನಡೆಸದಂತೆ ನೋಡಿಕೊಂಡರು. ಇದೆಲ್ಲದರಿಂದಾಗಿ ಸಾರ್ಕ್‌ನ 600 ಜನರಲ್ಲಿ 150 ಕ್ಕೂ ಹೆಚ್ಚು ಜನ ತಮ್ಮ ಜೀವನೋಪಾಯಕ್ಕೆ ಬಾರ್ಕ್ಲೆ ಸಹೋದರರನ್ನೇ ಅವಲಂಬಿಸುವಂತಾಯಿತು.

ಈ ಮಧ್ಯೆ ಸಾರ್ಕಿಗಳಿಗೆ ಬಾರ್ಕ್ಲೆ ಸಹೋದರರು ಆಮಿಷಗಳನ್ನು ಒಡ್ಡಲಾರಂಭಿಸಿದರು. ತಾವು ಬರುವ 15 ವರ್ಷಗಳಲ್ಲಿ ಕನಿಷ್ಠ 75 ಮಿಲಿಯನ್ ಪೌಂಡ್‌ಗಳನ್ನು ಸಾರ್ಕ್ ದ್ವೀಪದಲ್ಲಿ ಹೂಡುತ್ತೇವೆಂದೂ, ಅಲ್ಲಿಗೆ ಡಾಂಬರು ರಸ್ತೆ, ಬೀದಿದೀಪಗಳನ್ನು ಪರಿಚಯಿಸುತ್ತೇವೆಂದೂ, ಕಾರ್ ಮತ್ತು ರೈಲುಮಾರ್ಗಗಳು ಅಗತ್ಯವೆಂದೂ, ಅನಾರೋಗ್ಯಗೊಂಡವರಿಗೆ ತುರ್ತು ವೈದ್ಯಕೀಯ ಸೇವೆ ಒದಗಿಸಲು ಸಾರ್ಕ್‌ಗೆ ಒಂದು ಹೆಲಿಪ್ಯಾಡ್ ಬೇಕೆಂದೂ, ತಮ್ಮ ಕಲ್ಪನೆಯ ಈ 'ಅಭಿವೃದ್ಧಿ' ಯೋಜನೆಯಿಂದಾಗಿ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಸಾರ್ಕ್‌ಗೆ ಬರುವುದರಿಂದ ಸ್ಥಳೀಯ ಸಾರ್ಕಿಗಳೂ ಅಭಿವೃದ್ಧಿ ಹೊಂದುತ್ತಾರೆಂದೂ ಪ್ರತಿಪಾದಿಸಲಾರಂಭಿಸಿದರು.

ಆದರೆ ಇದನ್ನೆಲ್ಲ ಕೇಳಿ ಸಾರ್ಕಿಗಳು ದಂಗಾದರು. ಕಾರ್‌ಗಳಿಲ್ಲದ ತಮಗೆ ಡಾಂಬರು ರಸ್ತೆ ಯಾಕೆ? ಗ್ರಾಮೀಣ ಜೀವನ ಸಾಗಿಸುತ್ತಿರುವವರಿಗೆ ಬೀದಿ ದೀಪ ಯಾಕೆ? ಸ್ಥಳೀಯರಿಗಿಂತಲೂ ತಮ್ಮ ಆಸ್ತಿಪಾಸ್ತಿಗಳ ಮೇಲೆ ನಿಗಾ ಇಡಲು ಬಾರ್ಕ್ಲೆ ಸಹೋದರರಿಗೆ ಹೆಲಿಪ್ಯಾಡ್ ಅಗತ್ಯವಿದೆ; ಅವರ 'ಅಭಿವೃದ್ಧಿ' ಯೋಜನೆಗಳಿಂದಾಗಿ ತಮ್ಮ ಜೀವನಕ್ರಮ ಮತ್ತು ನೆಮ್ಮದಿ ಹಾಳಾಗುತ್ತದೆ ಎಂದು ಸಾರ್ಕಿಗಳು ಭಾವಿಸಿದರು.

ಇದೇ ಡಿಸೆಂಬರ್ ಮೊದಲನೆ ವಾರ ನಡೆದ ಮತದಾನಕ್ಕೆ ಮುನ್ನ ಬಾರ್ಕ್ಲೆ ಸಹೋದರರು ಪ್ರಕಟಿಸುವ 'ಸಾರ್ಕ್ ನ್ಯೂಸ್' ಎಂಬ ಬಿಟ್ಟಿ ಪತ್ರಿಕೆಯಲ್ಲಿ ಸಾರ್ಕ್ ಮತದಾರರು ಚುನಾವಣೆಯಲ್ಲಿ ಯಾರನ್ನು ಗೆಲ್ಲಿಸಬೇಕು, ಯಾರನ್ನು ಸೋಲಿಸಬೇಕು ಎಂಬ ಪಟ್ಟಿಯನ್ನೇ ಪ್ರಕಟಿಸಿದ್ದರು. ಸಹಜವಾಗಿಯೇ ಬಾರ್ಕ್ಲೆ ಸಹೋದರರು ಬೆಂಬಲಿಸಿದ್ದ 20 ಅಭ್ಯರ್ಥಿಗಳೆಲ್ಲರೂ ಅವರು 'ಅಭಿವೃದ್ಧಿ' ಯೋಜನೆಯ ಪ್ರತಿಪಾದಕರಾಗಿದ್ದರು.

ಆದರೆ ಸಾರ್ಕ್ ಮತದಾರರು ಬಾರ್ಕ್ಲೆ ಸಹೋದರರ 'ಅಭಿವೃದ್ಧಿ ಆಮಿಷ'ಗಳಿಗೆ ಬಲಿಯಾಗಲಿಲ್ಲ; ಅವರ ಯೋಜನೆಗಳಿಗೆ ಮನ್ನಣೆ ನೀಡಲಿಲ್ಲ, ಬದಲಾಗಿ ಸಾರ್ಕ್‌ನ 474 ಮತದಾರರು ತಮ್ಮನ್ನು ಪ್ರತಿನಿಧಿಸಲಿರುವ ಸಂಸತ್ತಿಗೆ ಆಯ್ಕೆ ಮಾಡಿದ 28 ಸದಸ್ಯರಲ್ಲಿ ಒಬ್ಬನೇ ಒಬ್ಬ ಬಾರ್ಕ್ಲೆ ಬೆಂಬಲಿತ ಅಭ್ಯರ್ಥಿ ಇಲ್ಲದಂತೆ ನೋಡಿಕೊಂಡರು. ಅಷ್ಟೇ ಅಲ್ಲ, ಸಾರ್ಕ್‌ನಲ್ಲಿ ಬಾರ್ಕ್ಲೆ ಸಹೋದರರ ವಹಿವಾಟನ್ನು ನೋಡಿಕೊಳ್ಳುತ್ತಿರುವ, ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಕೆವಿನ್



ಡೆಲಾನಿ ಎಂಬಾತ ಹೀನಾಯವಾಗಿ ಸೋಲುವಂತೆ ನೋಡಿಕೊಂಡರು.

ಸಾರ್ಕ್‌ನಲ್ಲಿನ ಪ್ರಥಮ ಚುನಾವಣಾ ಫಲಿತಾಂಶವನ್ನು ನೋಡಿ ಬಾರ್ಕ್ಲೆ ಸಹೋದರರು ಕ್ರೋಧಗೊಂಡರು. ಸಾರ್ಕಿಗಳ ವಿರುದ್ಧ ತಿರುಗಿಬಿದ್ದರು. ರಾತ್ರೋರಾತ್ರಿ ಸಾರ್ಕ್ ದ್ವೀಪದಲ್ಲಿದ್ದ ತಮ್ಮ ಹೋಟೆಲ್, ರೆಸ್ಟೋರೆಂಟ್, ಪಬ್ ಮತ್ತು ಕಟ್ಟಡ ನಿರ್ಮಾಣ ಕಂಪನಿಯನ್ನು ಮುಚ್ಚಿದರು. ಆ ಮೂಲಕ 150 ಕ್ಕೂ ಹೆಚ್ಚು ಸಾರ್ಕಿಗಳು ನಿರುದ್ಯೋಗಿಗಳಾಗುವಂತೆ ನೋಡಿಕೊಂಡರು.

ಇದೆಲ್ಲದರಿಂದ ಒಂದಂತೂ ಸ್ಪಷ್ಟವಾಗುತ್ತದೆ: ಪ್ರಜಾಪ್ರಭುತ್ವದ ಮುಖ್ಯ ಅಂಗವಾಗಿರುವ ಚುನಾವಣೆಗಳ ಮೂಲಕ ಇಡೀ ಸಾರ್ಕ್ ದ್ವೀಪವನ್ನೇ ತಮ್ಮ ವಶಕ್ಕೆ ಪಡೆದುಕೊಳ್ಳಲು ಬಾರ್ಕ್ಲೆ ಸಹೋದರರು ಪ್ರಯತ್ನಿಸಿದರು. ಆದರೆ ಅದು ಸಾಧ್ಯವಾಗದಿದ್ದಾಗ ಮತದಾರರನ್ನೇ ಬ್ಲ್ಯಾಕ್‌ಮೇಲ್ ಮಾಡಲು ಹೊರಟಿದ್ದಾರೆ.

ಅದಕ್ಕೆ ಕಾರಣ ಇದೆ. ಮೊದಲು ತಮ್ಮ ಮಾಲೀಕತ್ವದಲ್ಲಿರುವ ಬ್ರೆಖೊ ದ್ವೀಪದ ಮೇಲೆ ಸಾರ್ಕ್‌ನ ಅಧಿಪತ್ಯವನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಿ ಸೋತಿದ್ದ ಬಾರ್ಕ್ಲೆ ಸಹೋದರರು ಈಗ ತಮ್ಮ ಹಣದ ಮೂಲಕ ಅನಧಿಕೃತವಾಗಿ ಸಾರ್ಕ್ ಅನ್ನು ತಮ್ಮ ವಶಕ್ಕೆ ಪಡೆದುಕೊಳ್ಳಲು ಮುಂದಾಗಿದ್ದಾರೆ. ಶತಯುಗತಾಯ ಸಾರ್ಕ್ ಭವಿಷ್ಯದಲ್ಲಿ ತಮ್ಮ ಮಾತು ನಡೆಯಲೇಬೇಕೆಂದು ಹಠ ತೊಟ್ಟಿರುವ ಅವರು ತಮ್ಮ ಪ್ರತಿನಿಧಿಯಾದ ಕೆವಿನ್ ಡೆಲಾನಿ ಮತ್ತು ತಮ್ಮ ಬೆಂಬಲ ಹೊಂದಿರುವ ಇನ್ನೊಬ್ಬರನ್ನು ಸಂಸತ್ತಿಗೆ ನಾಮ ನಿರ್ದೇಶನ ಮಾಡಬೇಕೆಂದೂ, ಇಲ್ಲವಾದರೆ ಸಾರ್ಕ್‌ನಲ್ಲಿ ನಿರುದ್ಯೋಗ ಶಾಶ್ವತವಾಗುವಂತೆ ನೋಡಿಕೊಳ್ಳುತ್ತೇವೆಂದೂ, ಮುಂದೆ ತಾವು ಆ ದ್ವೀಪದಲ್ಲಿ ಬಂಡವಾಳ ಹೂಡುವುದಿಲ್ಲವೆಂದೂ ಘೋಷಿಸಿದ್ದಾರೆ.

ಆದರೆ ಇದಕ್ಕೆ ಪ್ರತ್ಯುತ್ತರವಾಗಿ ಸಾರ್ಕಿಗಳು 'ನೀವು ಬರುವುದಕ್ಕೆ ಮುನ್ನ ನಾವು ಚೆನ್ನಾಗಿಯೇ ಇದ್ದೆವು. ಆದ್ದರಿಂದ ಈಗಿನ ನಿರುದ್ಯೋಗ ಸಮಸ್ಯೆಯನ್ನು ಹೇಗಾದರು ಮಾಡಿ ನಾವೇ ಬಗೆಹರಿಸಿಕೊಳ್ಳುತ್ತೇವೆ. ಆದರೆ ಯಾವುದೇ ಕಾರಣಕ್ಕೂ ನಮ್ಮ ದ್ವೀಪಕ್ಕೆ ಕಾರ್‌ಗಳು, ಹೆಲಿಕಾಪ್ಟರ್‌ಗಳು ಬಾರದಂತೆ, ನಮ್ಮ ಗ್ರಾಮೀಣ ಸೌಂದರ್ಯದ ದ್ವೀಪವನ್ನು ನಿಮ್ಮ ಕಲ್ಪಿತ ಆಟಿಕೆಯ ಊರಾಗದಂತೆ ನೋಡಿಕೊಳ್ಳುತ್ತೇವೆ" ಎಂದು ಸೆಡ್ಡು ಹೊಡೆದಿದ್ದಾರೆ.

ಪ್ರಜಾಪ್ರಭುತ್ವದೊಂದಿಗಿನ ಪ್ರಥಮ ಭೇಟಿಯಲ್ಲಿಯೇ ಸಾರ್ಕ್ ದ್ವೀಪದಲ್ಲಾಗಿರುವ ರಾದ್ಧಾಂತಗಳ ಬಗ್ಗೆ ಹೇಳುತ್ತಿರುವುದಕ್ಕೆ ಕಾರಣಗಳಿವೆ. ಇನ್ನು ಕೆಲವೇ ದಿನಗಳಲ್ಲಿ ರಾಜ್ಯದ ಏಳು ಕಡೆ ಉಪಚುನಾವಣೆಯ ಮತದಾನ ನಡೆಯಲಿದೆ.

ನಮಗೆಲ್ಲಾ ಗೊತ್ತಿರುವಂತೆ ಕಳೆದ ಬಾರಿ ಚುನಾವಣೆಗಳಲ್ಲಿ ತನಗೆ ಅಗತ್ಯವಾದಷ್ಟು ಬೆಂಬಲ ಸಿಗದಿದ್ದಾಗ ಬಿಜೆಪಿ ಮೊದಲು ಆರು ಜನ ಸ್ವತಂತ್ರ ಅಭ್ಯರ್ಥಿಗಳ ಮೊರೆ ಹೋಗಿತ್ತು. ಆನಂತರ ಕೋಟ್ಯಂತರ ರೂಪಾಯಿ ಸುರಿಸಿ ಆಪರೇಷನ್ ಕಮಲದಲ್ಲಿ ಬೇರೆ ಪಕ್ಷಗಳ ಶಾಸಕರನ್ನೇ ಖರೀದಿಸಿತ್ತು. ಆ ಮೂಲಕ ಜನಾದೇಶಕ್ಕೆ ಅವಮಾನವೆಸಗಿತ್ತಲ್ಲದೆ ಈಗ ಮತ್ತೆ ಉಪಚುನಾವಣೆಯನ್ನು ಎದುರಿಸುವಂತೆ ಮಾಡಿದೆ.

ಬಾರ್ಕ್ಲೆ ಸಹೋದರರಿಗೆ ಹೇಗೆ ಸಾರ್ಕ್ ಜನ ನೀಡಿದ ಜನಾದೇಶ ಸಹಿಸಲಾಗಲಿಲ್ಲವೋ, ಹಾಗೆಯೇ ಬಿಜೆಪಿಗೂ ಕರ್ನಾಟಕದ ಜನ ನೀಡಿದ ಜನಾದೇಶದ ಬಗ್ಗೆ ಕಿಂಚಿತ್ತೂ ಮರ್ಯಾದೆ ಇಲ್ಲ ಎಂಬುದು ಸಾಬೀತಾಗಿದೆ. ಹಾಗಿರುವಾಗ ಜನರ ಮಾತಿಗೆ ಗೌರವ ಕೊಡದ ಬಿಜೆಪಿಯನ್ನು ಜನ ಯಾಕೆ ಬೆಂಬಲಿಸಬೇಕು? ಬದಲಾಗಿ ಈ ಉಪಚುನಾವಣೆಯಲ್ಲಿ ಎಲ್ಲಾ ಬಿಜೆಪಿ ಅಭ್ಯರ್ಥಿಗಳನ್ನು ಸೋಲಿಸುವ ಮೂಲಕ ತಮ್ಮ ಸ್ವಾಭಿಮಾನವನ್ನು ಪ್ರದರ್ಶಿಸಬೇಕಲ್ಲವೆ?, ಸಾರ್ಕ್ ಜನರಂತೆ ದಿಟ್ಟತನವನ್ನು ಮೆರೆಯಬೇಕಿದೆಯಲ್ಲವೇ?

ಇನ್ನೊಂದು ಸಂಗತಿ: ತಮ್ಮ ಹಣ ಬಲದಿಂದಲೇ ಸಾರ್ಕ್ ಮೇಲೆ ಹಿಡಿತ ಸಾಧಿಸಲು ಹೊರಟಿರುವ ಬಾರ್ಕ್ಲೆ ಸಹೋದರರಿಗೂ ಗಣಿ ಕಳ್ಳ ಜನಾರ್ದನ ರೆಡ್ಡಿ ಮತ್ತು ಶ್ರೀರಾಮುಲು ಗ್ಯಾಂಗಿಗೂ ಅಷ್ಟೇನು ವ್ಯತ್ಯಾಸವಿಲ್ಲ. ಅಲ್ಲಿ ಬಾರ್ಕ್ಲೆ ಸಹೋದರರು ಸಾರ್ಕ್ ಅನ್ನು ತಮ್ಮ ಆಟಿಕೆ ವಸ್ತುವನ್ನಾಗಿಸಿಕೊಂಡಿದ್ದರೆ ಇಲ್ಲಿ ಇಡೀ ಕರ್ನಾಟಕವನ್ನು ಈ ಗಣಿ ಕಳ್ಳರು ತಮ್ಮ ವಶಕ್ಕೆ ತೆಗೆದುಕೊಳ್ಳಲು ಹೊರಟಿದ್ದಾರೆ. ಅವರ ತಾಳಕ್ಕೆ ಬಿಜೆಪಿ ಎಂಬ 'ರಾಷ್ಟ್ರ ಪ್ರೇಮಿಗಳ' ಪಕ್ಷ ಕುಣಿಯುತ್ತಿದೆ: ಜನಾದೇಶವನ್ನು ವ್ಯಂಗ್ಯ ಮಾಡುತ್ತಿದೆ.

ಪ್ರಜಾಪ್ರಭುತ್ವದ ಅಂಗವಾದ ಚುನಾವಣೆಯ ಮೂಲಕ ನಮ್ಮ ರಾಜ್ಯವನ್ನೇ ಹರಾಜು ಹಾಕುತ್ತಿರುವ ಬಿಜೆಪಿಗೆ ಜನ ಪಾಠ ಕಲಿಸಬೇಕಿದೆ. ಇಲ್ಲವೆಂದರೆ ಶಾಸಕರ ಖರೀದಿ ಮತ್ತು ಜನಾದೇಶಕ್ಕೆ ಆಗುವ ಅವಮಾನವನ್ನು ತಡೆಯಲಾಗುವುದಿಲ್ಲ, ಬಿಜೆಪಿಗಳಿಂದ ನಡೆಯುತ್ತಿರುವ ರಾಜ್ಯದ ಲೂಟಿಯನ್ನು ನಿಯಂತ್ರಿಸಲಾಗುವುದಿಲ್ಲ.

ಬಿಜೆಪಿಗಳಿಗೆ ಜನ ಪಾಠ ಕಲಿಸುತ್ತಾರೆ ಎಂಬ ಆಶಯದೊಂದಿಗೆ....

■

ಮದ್ದೂರು: ತಮ್ಮಣ್ಣನಿಗೆ ಮುಳುವು - ಕಲ್ಪನಾಗೆ ಗೆಲುವ


ಆಪರೇಷನ್ ಕ'ಮಲ'ದ ಮೂಲಕ ಪಡೆದು ಕೊಂಡಿರುವ 7 ಕ್ಷೇತ್ರಗಳಿಗಿಂತ ಮದ್ದೂರಿನಲ್ಲಿ ಗೆಲುವು ಸಾಧಿಸುವುದೇ ಮುಖ್ಯ ಎಂದು ಬಜೆಪಿಯು ಭಾವಿಸಿದೆ. ಅದಕ್ಕೆಂದು ಮಾಡಬಾರದ ಎಲ್ಲಾ ರೀತಿಯ ಹರಕತ್ತುಗಳಿಗೆ ಅದು ಮುಂದಾಗಿದೆ. ಮದ್ದೂರು ಕ್ಷೇತ್ರವಿಡೀ ಓಡಾಡಿದರೆ ಸ್ಪಷ್ಟವಾಗುತ್ತಿರುವ ಒಂದು ಅಂಶವೆಂದರೆ, ಇಲ್ಲಿ ಕಲ್ಪನಾ ಸಿದ್ದರಾಜು ತನ್ನ ದಿವಂಗತ ಪತಿ ಗಿಂತಲೂ ಹೆಚ್ಚು ಲೀಡ್‌ನಲ್ಲಿ ಗೆಲ್ಲಲು ಬಜೆಪಿಯ ಅಕ್ರಮಗಳೇ ಸಹಾಯ ಮಾಡುತ್ತಿವೆ. ಎಲ್ಲಕ್ಕಿಂತ ಮುಖ್ಯವಾಗಿ ಬಜೆಪಿ ನಡೆಸಿದ ಜಾತಿ ಸಮಾವೇಶಗಳ ಕಾರಣದಿಂದ ಒಕ್ಕಲಿಗರು ಹಿಂದಿಗಿಂತಲೂ ಹೆಚ್ಚಾಗಿ ಜೆಡಿಎಸ್‌ನಲ್ಲಿ ಧ್ರುವೀಕರಣವಾಗುತ್ತಿದ್ದಾರೆ. ತಮ್ಮಣ್ಣರ ದುಡ್ಡು ಹೆಚ್ಚೆಚ್ಚು ಹರಿದಾಡಿದ ಹಾಗೆಲ್ಲಾ ಮದ್ದೂರಿನ ಮಾನವಂತ ಜನರು ಅಸಹ್ಯಪಟ್ಟುಕೊಳ್ಳುತ್ತಿದ್ದಾರೆ. ಪ್ರಸ್ತುತ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಜೆಡಿಎಸ್‌ನ ಕಲ್ಪನಾ ಸಿದ್ಧರಾಜು ಅತ್ಯಧಿಕ ಮತಗಳ ಲೀಡ್‌ನಲ್ಲಿ ಗೆಲ್ಲುವುದು, ಎಷ್ಟೇ ದುಡ್ಡು ಹರಿಸಿದರೂ ಬಜೆಪಿಯ ತಮ್ಮಣ್ಣ ಎರಡನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳುವುದು ಹಾಗೂ ಕಾಂಗ್ರೆಸ್‌ನ ಗುರುಚರಣ್ ಹೆಚ್ಚೆಂದರೆ ಠೇವಣಿ ಉಳಿಸಕೊಂಡು ಸಮಾಧಾನ ಪಟ್ಟುಕೊಳ್ಳುವುದು ಹೆಚ್ಚೂಕಡಿಮೆ ಗ್ಯಾರಂಟಿಯಾಗಿರುವ ವಿಚಾರಗಳಾಗಿವೆ.


ಕಲ್ಪನಾ ಸಿದ್ದರಾಜು

ಚುನಾವಣೆಗೆ ಇನ್ನೊಂದೇ ವಾರ ಇರುವಾಗಲೇ ಮಂಚೇಗೌಡರ ಮಗ ಜಿ.ಪಂ. ಸದಸ್ಯ ಸ್ವರೂಪ್‌ಚಂದ್ ತಮ್ಮಣ್ಣರ ಜೊತೆ ಸೇರಿಕೊಂಡಿದ್ದರೆ ದೊಡ್ಡ ಮಗ ಮಾಜಿ ಶಾಸಕ ಮಹೇಶ್‌ಚಂದ್ ಗುರುಚರಣ್‌ಗೆ ಬೆಂಬಲ ನೀಡಿದ್ದಾನೆ. ಆದರೆ, ಇವರ ಹಿಂದೆ ಹತ್ತಿಪ್ಪತ್ತು ಓಟುಗಳೂ ಇಲ್ಲವಾದ್ದರಿಂದ ಇವರ ಬೆಂಬಲವೇನೂ ನಿರ್ಣಾಯಕವಲ್ಲ. ಕಳೆದ 15 ದಿನಗಳಲ್ಲಿ 25 ಸಾವಿರದಿಂದ 10 ಲಕ್ಷದವರೆಗೆ ಚಿಲ್ಲಿ ಹತ್ತಾರು ಜನರನ್ನು ಕಾಂಗ್ರೆಸ್, ದಳದಿಂದ ತಮ್ಮಣ್ಣ ಖರೀದಿಸಿದ್ದಾರೆ. ಪುಡಿ ಪುಢಾರಿಗಳನ್ನು ಕರೆತಂದು ಹಾರ ಹಾಕಿ ಪತ್ರಿಕೆಯವರನ್ನು ಕರೆದು ಫೋಟೋ ತೆಗೆಸಿಕೊಳ್ಳುತ್ತಿರುವ ತಮ್ಮಣ್ಣ ಒಂದು ದಿನಕ್ಕೆ ಕನಿಷ್ಠ 50 ಲಕ್ಷವನ್ನಾದರೂ ಖರ್ಚು ಮಾಡುತ್ತಿದ್ದಾರೆ. ವೀರಣ್ಣಗೌಡರ ಸಾಕುಮಗ ತೋಟದ ನಾಗೇಶನಂತಹ ನಿರಾಶ್ರಿತರು ಮಾತ್ರ ಬಜೆಪಿಗೆ ಸಪೋರ್ಟ್ ಮಾಡುತ್ತಿರುವುದು. ಆದರೆ ಇತ್ತೀಚಿನವರೆಗೂ ತಮ್ಮಣ್ಣರ ಜೊತೆಗೇ ಇದ್ದ ತಾ.ಪಂ. ಅಧ್ಯಕ್ಷೆ ರಾಧಾ ಗೋವಿಂದೇಗೌಡ ಪ್ರತಿನಿತ್ಯ ಕಲ್ಪನಾ ಸಿದ್ದರಾಜು ಜೊತೆ ತಿರುಗುತ್ತಿದ್ದಾರೆ.

ರೋಡ್ ಶೋಗಳಲ್ಲಿ, ಪತ್ರಿಕೆಗಳಲ್ಲಿ, ಟಿವಿಚಾನೆಲ್‌ಗಳಲ್ಲಿ ಮಾತ್ರ ಬಜೆಪಿಯ ಅಬ್ಬರಕ್ಕೆ ಮಿಕ್ಕವರಾರೂ ಸಾಟಿ ಇಲ್ಲ. ಸೀಮೆಎಣ್ಣೆ ಖ್ಯಾತಿಯ ಸಿ.ಟಿ.ರವಿಯೂ ಸಹ ಟಿವಿಯಲ್ಲಿ ಸುಷ್ಮಾ ಸ್ವರಾಜ್ ರೀತಿ ಜಾಹೀರಾತು ನೀಡುತ್ತಿದ್ದಾನೆ. 'ಮಂಡ್ಯ ಜಿಲ್ಲೆಗೆ ಮುಖ್ಯ ಮಂತ್ರಿಯ ನೆರವು ಬೇಕೆಂದರೆ ನೀವು ತಮ್ಮಣ್ಣ ಅವರಿಗೇ ಓಟು ಹಾಕಬೇಕು. ಅದಕ್ಕೊಂದೇ ನಾನು ಚಿಕ್ಕಮಗಳೂರಿನಿಂದ ಇಲ್ಲಿಯವರೆಗೆ ಬಂದಿದ್ದೇನೆ' ಎಂದು ಸ್ಥಳೀಯ ಟಿವಿ ಜಾಹೀರಾತುವಿನಲ್ಲಿ ಮಾತಾಡುತ್ತಿರುವ ರವಿಯ ಪರಿಸ್ಥಿತಿಯೂ ಕೆಟ್ಟದಾಗಿದೆ. ಪಾಪ ಕ್ಷೇತ್ರದ ಇನ್‌ಚಾರ್ಜ್ ಎಂದು ಸಿ.ಟಿ.ರವಿಯನ್ನು ಕಳಿಸಿ ವೈನ್‌ಸ್ಟೋರ್, ಮಿಲ್ಟ್ರಿ ಹೋಟೆಲ್‌ಗಳ ಕೂಪನ್ ಹರಿದು ಕೊಡಲು ಆತನನ್ನು ಹಚ್ಚಿರುವುದು ಮಾತ್ರ ಬಜೆಪಿಯ ಹತಾಶೆಗೆ ಹಿಡಿದ ಕನ್ನಡಿಯಂತಿದೆ.

ಇಲ್ಲಿ ಗೆಲ್ಲಲೇಬೇಕೆಂಬ ಹಠದಲ್ಲಿ ಬಜೆಪಿಯು ವೀರಶೈವರು, ಕುರುಬರು, ಎಸ್‌ಸಿ-ಎಸ್‌ಟಿ ಸಮುದಾಯಗಳ ಸಮಾವೇಶ, ಮಹಿಳೆಯರ ಸಮಾವೇಶ ಇತ್ಯಾದಿಗಳನ್ನು ಶುರು ಹಚ್ಚಿಕೊಂಡಿದ್ದಾರೆ. ದಲಿತರಲ್ಲೇ ಮಾದಿಗರು, ಹೊಲೆಯರು ಎಂದು ಪ್ರತ್ಯೇಕ ಸಭೆಗಳೂ ನಡೆದಿವೆ. ಕಳೆದ ಚುನಾವಣೆಯಲ್ಲಿ ಬಿಎಸ್‌ಪಿ ಟಿಕೆಟ್ ಪಡೆದು ಹನೂರಿನಿಂದ ಸ್ಪರ್ಧಿಸಿ ಸೋತಿದ್ದ ಪರಿಮಳಾ ನಾಗಪ್ಪ ಮತ್ತು ಚಾಮರಾಜನಗರದಲ್ಲಿ ಸೋತ ಚೆಂಕಿ ಮಹದೇವುಗಳನ್ನು ಇಲ್ಲಿ ಪ್ರಚಾರಕ್ಕೆ ಕರೆಸಿದ್ದಾರೆ. ಪರಿಮಳಾ ನಾಗಪ್ಪ ಟಿವಿಯಲ್ಲೇ 'ನಮ್ಮ ವೀರಶೈವ ಸಮಾಜದವರು ಬಜೆಪಿಗೇ ಓಟು ಕೊಡಬೇಕು' ಎಂದು ಹೇಳಿದ್ದು ಇಲ್ಲಿನ ಜನತೆಯನ್ನು ಕೆರಳಿಸಿದೆ. ಹಾಗೊಂದು ವೇಳೆ ಶೇ.8ರಷ್ಟಿರುವ ಲಿಂಗಾಯತರು ಬಜೆಪಿಗೆ ಪೂರಾ ಓಟು ಕೊಟ್ಟರೂ, ಶೇ.35ರಷ್ಟಿರುವ ಒಕ್ಕಲಿಗರು ಜೆಡಿಎಸ್‌ಗೆ ಸಾಲಿಡ್ಡಾಗಿ ನಿಲ್ಲುವ ಲಕ್ಷಣ ಕಾಣುತ್ತಿದೆ. ಎಲ್ಲಾ ಅಭ್ಯರ್ಥಿಗಳೂ ಒಕ್ಕಲಿಗರೇ ಆಗಿದ್ದು, ಒಕ್ಕಲಿಗರ ಮತಗಳು ಎಲ್ಲರಿಗೂ ಹಂಚಿಕೆಯಾಗುವ ಸಾಧ್ಯತೆಯೇ ಹೆಚ್ಚಿತ್ತು. ಆದರೆ ಯಾವಾಗ ಬಜೆಪಿಯ ನಾಯಕರು ಈ ಜಾತಿ ರಾಜಕಾರಣ ಶುರುವಿಟ್ಟರೋ ಒಕ್ಕಲಿಗರೊಳಗೆ 'ಏನೇ ಆದ ನಮ್ಮದೂ ಅಂತ ಇರೋದು ಜೆಡಿಎಸ್ ಮಾತ್ರ ಅ ಎಂಬ ಭಾವನೆ ಬಲವಾಗುತ್ತಿದೆ. ಇದು ಒಳ್ಳೆಯದ ಕೆಟ್ಟದಕ್ಕೋ ಹೇಳಲು ಬರುವುದಿಲ್ಲವಾದರೂ, ಇದ ತಮ್ಮಣ್ಣರಿಗೆ ನಡುಕ ಶುರುವಾಗಿರುವುದಂತೂ. ಹಾಗಾಗಿಯೇ "ಲಿಂಗಾಯತ ನಾಯಕರನ್ನು ಕರೆಸಿ ಪ್ರ ಮಾಡುವುದು ಬೇಡ, ಸಿ.ಟಿ.ರವಿ ಮಲೆನಾಡಿನ ಬ್ರಾಹ್ಮಣ ವಟುವ ಕಾಣುವುದರಿಂದ ನನಗೇ ತೊಂ ಎಂದು ತಮ್ಮಣ್ಣ ಬಜೆಪಿ ನಾಯ ಹೇಳಿದ್ದಾರೆಂದು ಬಜೆಪಿಯ ವ ದಲ್ಲಿ ಕೇಳಿಬಂದ ಮಾತು.


ಡಿ.ಸಿ.ತಮ್ಮಣ್ಣ

ಹಾಗಾಗೇ ಆರ್.ಅಶೋಕ್ ಇಲ್ಲಿಗೆ ಕರೆತರಲಾಯಿತಾದರೂ, ಸ್ಥಿತಿ ನೋಡಿದ ಅಶೋಕ್ " ತುರುವೇಕೆರೆಯಲ್ಲಿ ಕಾನ್ಸ್‌ಟೆ ಮಾಡಬೇಕು" ಎಂದು ಅತ್ತ ಓಡಿದರು. "ಈ ಚುನಾವಣೆ ತ ರಿಗೆ ಪ್ರತಿಷ್ಠೆಯ ಪ್ರಶ್ನೆ ಅಲ್ಲ, ಯನ್ನು ಗೆಲ್ಲಿಸುವುದು ಮಧು ಗೌಡರ ಕರ್ತವ್ಯ" ಎಂದು ನಾ ಮಣಿಗಳು ಹೇಳುತ್ತಲೇ ಇದ್ದರೂ, ಜಿ.ಮಾದೇಗೌ ಮಾತ್ರ ಮನೆ ಬಿಟ್ಟು ಕದಲುತ್ತಲೇ ಇಲ್ಲ. ಮಧು ಇದ್ದ ಒಂದು ತಂಡ ಜೆಡಿಎಸ್‌ಗೆ ಬಹಿರಂಗವಾಗೇ ಮಾಡುತ್ತಿದೆ. ಪ್ರಭಾವಿ ಮುಖಂಡ ಲಿಂಗೇ ಮರಿಮಾದೇಗೌಡ, ಎ.ಸಿ.ಬಲ್ಲೇಗೌಡ, ಮುಟ್ಟನ ವೆಂಕಟೇಶ ಇವರೆಲ್ಲಾ ಕಲ್ಪನಾ ಜೊತೆ ಇದ್ದರೆ, ಮಧ ಎಡಗೈಯಂತಿದ್ದ ನ.ಲಿ.ಕೃಷ್ಣ ಗುರುಚರಣ್ ಹೋಗಿದ್ದಾರೆ.

ಆರಭಾವಿ: ಬಾಲಚಂದ್ರ ಅರ್ಧ ಚಂದ್ರ ಆಗುವನೆ

ಉಪಚುನಾವಣೆಯಿಂದ ಬಿಸಿಯೇರುತ್ತಿರುವ ಆರಭಾವಿ ಅಕ್ಷರಶಃ ರಣರಂಗವಾಗಿಬಿಟ್ಟಿದೆ. ಬಜೆಪಿಯಿಂದ ಕಣಕ್ಕಿಳಿದಿರುವ ಬಾಲಚಂದ್ರ ಜಾರಕಿಹೊಳಿಯ ತೋಳ್ಬಲದ ಪ್ರದರ್ಶನದಿಂದಾಗಿ ಅವನ ವಿರುದ್ಧ ಆಕ್ರೋಶ ವಿದ್ದರೂ ಯಾರೂ ದನಿಯೆತ್ತದಂತಹ ಪರಿಸ್ಥಿತಿ ನಿರ್ಮಾಣವಾಗಿಬಿಟ್ಟಿದೆ. ಕಳೆದ ಸಂಚಿಕೆಯಲ್ಲಿ ಬಾಲಚಂದ್ರನ ಬಾನಗಡಿಗಳನ್ನು ಬಯಲಿಗೆಳೆದ 'ಲಂಕೇಶ್' ವರದಿ ಜನರಲ್ಲಿ ಒಂದಿಷ್ಟು ಮನೋಬಲ ಹೆಚ್ಚಿಸುವಲ್ಲಿ ಯಶಸ್ವಿಯಾಗಿದ್ದು ಬಾಲಚಂದ್ರನ ವಿರುದ್ಧ ಹಾದಿಬೀದಿಯಲ್ಲಿ ಜನ ಮಾತನಾಡುತ್ತಿದ್ದಾರೆ. ಪರಿಣಾಮವಾಗಿ ಬಾಲಚಂದ್ರ ಬರುವ ಚುನಾವಣೆಯಲ್ಲಿ ಅರ್ಧ ಚಂದ್ರನಾಗುವ ಎಲ್ಲಾ ಲಕ್ಷಣಗಳು ಗೋಚರಿಸಲಾರಂಭಿಸಿವೆ.

ಚುನಾವಣಾ ಕಣದಲ್ಲಿ ಬಜೆಪಿಯಿಂದ ಬಾಲಚಂದ್ರ ಜಾರಕಿಹೊಳಿ, ಕಾಂಗ್ರೆಸ್‌ನಿಂದ ವಿವೇಕರಾವ್ ಪಾಟೀಲ್ ಹಾಗೂ ಜೆಡಿಎಸ್‌ನಿಂದ ಅರವಿಂದ ದಳವಾಯಿ ಸೆಣಸಾಟಕ್ಕಿಳಿದಿದ್ದಾರೆ. ಈ ಚುನಾವಣೆಯಲ್ಲಿ ಗೆಲ್ಲಬೇಕಿರುವುದು ಪ್ರತಿಯೊಬ್ಬರಿಗೂ ಮಹತ್ವವೇ ಆಗಿದೆ. ಅದರಲ್ಲೂ ವಿಶೇಷವಾಗಿ ಉಪಚುನಾವಣೆಗೆ ಕಾರಣವಾದ ಬಜೆಪಿಗೆ ಇದೊಂದು ಸ್ವಪ್ರತಿಷ್ಠೆಯ ಪ್ರಶ್ನೆಯಾಗಿದ್ದರಿಂದ ಒಂದೆಡೆ ಬೀದಿ ರೌಡಿ ಕಂ ಆರೋಗ್ಯ ಸಚಿವ ಶ್ರೀರಾಮುಲುವಿನ ರೌಡಿಗಳು, ಮತ್ತೊಂದೆಡೆ ಗಣಿ ದುಡ್ಡು ಈಗಾಗಲೇ ಕ್ಷೇತ್ರದಾದ್ಯಂತ ನುಸುಳಿಬಿಟ್ಟಿವೆ.

ಅಭಿವೃದ್ಧಿಗಾಗಿಯೇ ತಾನು ಜೆಡಿಎಸ್ ತೊರೆದು ಬಜೆಪಿಗೆ ಬಂದು ಚೆಡ್ಡಿತೊಟ್ಟಿಕೊಂಡಿದ್ದೇನೆಂದು ಭಾಜಾ ಭಜಂತ್ರಿಗಳೊಂದಿಗೆ ಬೊಂಬಡಾ ಹೊಡೆಯುತ್ತಿರುವ ಬಾಜಾ ಅಲಿಯಾಸ್ ಬಾಲಚಂದ್ರ ಜಾರಕಿಹೊಳಿ ಅಸಲಿಗೆ ಕ್ಷೇತ್ರದ ಅಭಿವೃದ್ಧಿಗೆ ಮಂಗನಂತೆ ಪಕ್ಷ ಹಾರಿದನೋ ಅಥವಾ ತನ್ನ ಸ್ವಂತ ಜೇಬು ತುಂಬಿಸಿಕೊಳ್ಳಲು ಚೆಡ್ಡಿತೊಟ್ಟುಕೊಂಡನೋ ಎಂಬುದನ್ನು ಈಗಾಗಲೇ 'ಲಂಕೇಶ್' ಕಳೆದ ಸಂಚಿಕೆಯಲ್ಲೇ ವಿವರವಾಗಿ ವರದಿ ಮಾಡಿದೆ. 'ಬಳಕೆ ಬ್ರಹ್ಮಚಾರಿ', 'ಉಂಡು ಉಪವಾಸಿ' ಎಂದೇ ಕ್ಷೇತ್ರದಾದ್ಯಂತ ಹೆಸರುವಾಸಿಯಾಗಿರುವ ಈತ ಅಧಿಕಾರವಿದ್ದಷ್ಟು ದಿನ ಕ್ಷೇತ್ರದ ಅಭಿವೃದ್ಧಿಗೆ ಎಷ್ಟರಮಟ್ಟಿಗೆ ಕಡಿದು ಗುಡ್ಡೆ ಹಾಕಿದ್ದಾನೆಂಬುದು, ತನ್ನ ಸ್ವಂತ ಜೇಬು ಎಷ್ಟರ ಮಟ್ಟಿಗೆ ತುಂಬಿಸಿಕೊಂಡಿದ್ದಾನೆಂಬುದು ಎಲ್ಲರಿಗಿಂತ ಹೆಚ್ಚಾಗಿ ಆ ಕ್ಷೇತ್ರದ ಜನರಿಗೆ ಚೆನ್ನಾಗಿ ಗೊತ್ತಿದೆ. ಕೆಲವು ವರ್ಷಗಳ ಹಿಂದೆ ಕೊಳಕು ಸಾರಾಯಿ ಮಾರುವದನ್ನೆ ದಂಧೆ ಮಾಡಿಕೊಂಡಿದ್ದ ಬಾಜಾ ಈ ಹೊತ್ತು ಕೋಟ್ಯಾಧಿಪತಿ ಕುಳವಾಗಿ ಬೆಳೆದಿರುವುದೇ ಆತ ಹೊಡೆದಿರುವ ಲೂಟಿಗೆ ಸಾಕ್ಷಿಯಾಗಿ ನಿಂತಿದೆ.


ಬಾಲಚಂದ್ರ ಜಾರಕಿಹೊಳಿ

ರಾಜಕಾರಣಿಯಾದವನಿಗೆ ಹಣ ಮತ್ತು ಅಧಿಕಾರದಾಸೆ ಇದ್ದೇ ಇರುತ್ತದೆ. ತಾವು ಮೇಯುವುದರ ಜೊತೆಗೆ ತೋರಿಕೆಗಾದರೂ ತಮ್ಮ ಕ್ಷೇತ್ರಕ್ಕೂ ಒಂದಿಷ್ಟು ಕೆಲಸ ಮಾಡಿಸುತ್ತಾರೆ. ಆದರೆ ಬಾಜಾ ಹಾಗಲ್ಲ, ಏನೇ ಅಧಿಕಾರವಿದ್ದರೂ ತಾನೇ ಅನುಭವಿಸಬೇಕು, ಎಷ್ಟೇ ಹಣವಿದ್ದರೂ ತಾನೇ ನುಂಗಿ ನೀರು ಕುಡಿಯಬೇಕು ಎಂಬ ಜಾಯಮಾನದವನು. ಈತನ ಕ್ಷೇತ್ರದ ಮೇಲೆ ಕಣ್ಣು ಹಾಯಿಸಿದರೆ ಈ ಸತ್ಯ ಇನ್ನಷ್ಟು ಚೆನ್ನಾಗಿ ಅರ್ಥವಾಗುತ್ತದೆ. ಗ ಮಂತ್ರಿ ಶ್ರೀರಾಮುಲುನ ಕೃಪಾಕಟಾಕ್ಷದಿಂದ ಮಂ ಸಿಕ್ಕಮೇಲಾದರೂ ಆರಭಾವಿ ಕ್ಷೇತ್ರಕ್ಕೆ ಒಂದಿಷ್ಟು ಅಭ ಯೋಜನೆಗಳನ್ನು ಮಂಜೂರು ಮಾಡಿಸಬಹುದಿತ್ತು; ಬದ್ದಿರುವ ರಸ್ತೆಗಳಿಗೆ, ಕೊಳೆತು ನಾರುತ್ತಿರುವ ಚರಂಡಿ ದಶಕಗಳಿಂದ ಹದಗೆಟ್ಟು ನಿಂತಿರುವ ರೈತರ ನೀರ ಕಾಲುವೆಗಳಿಗೆ ಹೊಸ ರೂಪು ಕೊಡಬಹುದಿತ್ತು; ಅಭಿವೃದ್ಧಿ ಮಾಡಲು ಸಾಧ್ಯವಿಲ್ಲದಿದ್ದರೂ ಕನಿಷ್ಠ ಕ್ಷೇ ಜನರಿಗೆ ಕುಡಿಯಲು ಶುದ್ಧ ನೀರನ್ನಾದರೂ ಒದಗಿ ಯೋಜನೆ ರೂಪಿಸಬಹುದಿತ್ತು. ಆದರೆ ಖ ಮೇಯುವುದರಲ್ಲೇ ಅರ್ಧ ಟೈಮು ಕಳೆಯುವ ಉಳಿದರ್ಧ ಟೈಮನ್ನು ತನ್ನಣ್ಣ ಸತೀಶ್ ಜಾರಕಿ ಯೊಂದಿಗೆ ಕಾಲುಕೆದರಿ ಜಗಳ ಮಾಡುವುದ ಕಳೆಯುತ್ತಾನೆಂದರೆ ಕ್ಷೇತ್ರದ ಅಭಿವೃದ್ಧಿಯ ಯೋಚಿಸುವುದಕ್ಕೆ ಸಮಯವಾದರೂ ಹೇಗೆ ಹೇಳಿ? ಈಗ ಆರಭಾವಿ ಕ್ಷೇತ್ರದ ಜನರೆದುರು ಮು ಕೈಮುಗಿದುಕೊಂಡು ಮತಯಾಚಿಸಲು ಬಂದಿದ್ದಾನೆ. ಏನು ಮಹಾ ಘನಂದಾರಿ ಕೆಲಸ ಮಾಡಿದ್ದಾ ಈತನಿಗೆ ಜನ ಓಟು ಹಾಕಬೇಕು? ಕ್ಷೇತ್ರದಲ್ಲಿ ಓಡಾಡಿದರೆ ಸಾಕು ಯಾವುದೋ ಕೊಳಚೆ ಪ್ರದೇ ಓಡಾಡಿದಂಥ ಅನುಭವವಾಗುತ್ತದೆ. ಕ್ಷೇತ್ರವನ್ನು ಈ ಉದ್ಧಾರ ಮಾಡಿದ್ದಕ್ಕೆ ಇವನಿಗೆ ಓಟು ಕೊಡಬೇಕೆ

ಘಟಪ್ರಭಾ ಕಾಲುವೆಯ ಅಭಿವೃದ್ಧಿಗಾಗಿ ಸರ್ಕಾರ 16 ಕೋಟಿ ರೂಪಾಯಿ ಮಂಜೂರಾಗಿತ್ತು. ಕಾ ಯಾದರೂ ಅಭಿವೃದ್ಧಿಯಾಗಿದ್ದಿದ್ದರೆ ನೂರಾರು ಕುಟುಂಬಗಳಾದರೂ ಉದ್ಧಾರವಾಗುತ್ತಿದ್ದವು. ಕಾಲು ಅಭಿವೃದ್ಧಿಗಾಗಿ ಬಂದ ಅಷ್ಟೂ ಹಣವನ್ನು ಸಂಪೂರ್ಣವಾಗಿ ನುಂಗಿ ನೀರು ಕುಡಿದಿದ್ದಾನೆ. ಮಹತ್ಕಾರ್ಯಕ್ಕಾಗಿ ಈತನಿಗೆ ಓಟು ಕೊಡಬೇಕೆ?

ಈ ಕ್ಷೇತ್ರದಲ್ಲಿ ಶೇ.30ರಷ್ಟು ಜನ ಉಪ್ಪಾರ ಜನ ಸೇರಿದ್ದಾರೆ. ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದ ಸಮುದಾಯವದು. ಆ ಕಾರಣಕ್ಕಾ ಉಪ್ಪಾರರು ತಮ್ಮನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇ ಬೇಡಿಕೆಯಿಟ್ಟಿದ್ದರು. ಇದರ ಬಗ್ಗೆ ಕ್ಯಾಬಿನೆಟ್‌ನಲ್ಲಿ ಯಾಗಿ ಆ ಬೇಡಿಕೆಗೆ ಅಂಗೀಕಾರ ದೊರೆಯುವ ಅದಕ್ಕೆ ಪ್ರಬಲ ವಿರೋಧ ಒಡ್ಡಿದವನು ಆಗ ಸ ಕಲ್ಯಾಣ ಇಲಾಖೆಯ ಸಚಿವನಾಗಿದ್ದ ಇದೇ ಬಾಲ ಜಾರಕಿಹೊಳಿ. ತಮ್ಮ ಸಮುದಾಯದ ನ್ಯಾಯಬದ್ಧ ಕಿತ್ತುಕೊಂಡು ದ್ರೋಹ ಬಗೆದದ್ದಕ್ಕಾಗಿ ಉಪ್ಪಾರರು ಓಟು ಕೊಡಬೇಕೆ?

ಆರಭಾವಿಯ ಮತದಾರರು ಓಟು ಹಾಕುವುದಕ್ಕೆ ಮತಗಟ್ಟೆಗೆ ಹೋಗುವ ಮುನ್ನ ಒಂದಿಷ್ಟು ಯೋಚಿಸಬೇಕಿದೆ. ಅದರಲ್ಲೂ ಬಾಲಚಂದ್ರ ಜಾರಕಿಹೊಳಿಗೆ ಓಟು ಹಾಕಬೇಕೆಂದುಕೊಂಡವರಂತೂ ಒಂದಿಷ್ಟು ಹೆಚ್ಚು ಯೋಚಿಸಬೇಕಿದೆ. ಯಾಕೆಂದರೆ, ಈತ ತನ್ನವರು, ಬೇರೆಯವರು, ತನ್ನ ಜಾತಿಯವರು, ಬೇರೆ ಜಾತಿಯವರು ಎಂದು ಯಾವ ತಾರತಮ್ಯ ಮಾಡದೇ ಎಲ್ಲರಿಗೂ ಮೋಸ ಮಾಡಿರುವ ವ್ಯಕ್ತಿ.ಎಲ್ಲರನ್ನೂ ಗೋಳು ಹೊಯ್ದುಕೊಂಡಿರುವ ಕ್ರೂರಿ. ಈ ಕೆಳಗಿನ ಒಂದೆರಡು ಉದಾಹರಣೆಗಳನ್ನೇ ನೋಡಿ.

ಕೌಜಲಗಿ ಗ್ರಾಮದಲ್ಲಿ ಶರಣಪ್ಪ ಹುರಕಡ್ಲಿ ಎಂಬ ಬಡ ಮೇಸ್ತ್ರಿ ಮನೆಗೆ ನುಗ್ಗಿ

ಈತ ಯಾರನ್ನೂ ಬಿಟ್ಟವನಲ್ಲ!

ಅವರ ಮನೆಯವರೆಲ್ಲರನ್ನೂ ಬಾಲಚಂದ್ರನ ಗೂಂಡಾಗಳು ಮನಬಂದಂತೆ ಥಳಿಸಿದ್ದರು. ಇದರಿಂದ ಭಯಭೀತಗೊಂಡ ಅವರು ನೇಣಿಗೆ ಕೊರಳೊಡ್ಡಿ ಆತ್ಮಹತ್ಯೆ ಮಾಡಿಕೊಂಡರು. ಈ ಹೊತ್ತು ಅವರ ಕುಟುಂಬ ಬೀದಿಯಲ್ಲಿ ಅನಾಥವಾಗಿ ಬಿದ್ದಿದೆಯೆಂದರೆ ಅದಕ್ಕೆ ಬಾಲಚಂದ್ರ ಜಾರಕಿಹೊಳಿಯ ದೌರ್ಜನ್ಯವೇ ಕಾರಣ.

ಪೆಟ್ರೋಲ್ ಬಂಕ್‌ಗೆ ಬೆಂಕಿ ಹಚ್ಚಲು ಬಂದಿದ್ದ ಎಂದು ಶಿವಾನಂದ ಲೋಕಣ್ಣನವರ ಎಂಬುವವರ ಮೇಲೆ ಸುಳ್ಳು ಕಂಪ್ಲೇಟ್ ಕೊಟ್ಟು ಅವರನ್ನು ಜೈಲಿಗಟ್ಟಿದ್ದು, ಬಸವಣ್ಯಪ್ಪ ಕಂಬಾರ ಎಂಬುವವರನ್ನು ನಡುಬೀದಿಯಲ್ಲಿ ಕೈಕಾಲು ಮುರಿಯುವ ಹಾಗೆ ಹೊಡೆದದ್ದು, ಶಿವಾನಂದ ಹತ್ತಿ ಎಂಬುವವರ ಮೇಲೆ ರೇಷನ್ ಅಂಗಡಿಯ ಗೋಧಿ ಕಳ್ಳತನದ ಆರೋಪ ಹೊರಿಸಿ ಅವರನ್ನು ನಡುಬೀದಿಯಲ್ಲಿ ಅರಬೆತ್ತಲೆ ಮೆರವಣಿಗೆ ಮಾಡಿಸಿದ್ದು, ಗೋಕಾಕ್‌ನ ಎಸ್.ಜಿ.ರೌತನಾಳ ಎಂಬುವವರ ಪ್ರಸಿದ್ಧ ಬಟ್ಟೆ ಅಂಗಡಿಯನ್ನು ಹಾಡುಹಗಲೇ ಲೂಟಿ ಮಾಡಿದ್ದು, ತನ್ನ ಘಟಪ್ರಭಾ ಷುಗರ್ಸ್ ಸಕ್ಕರೆ ಕಾರ್ಖಾನೆಯಲ್ಲಿ ಕಳೆದ 16 ವರ್ಷದಿಂದ ಸೇವಕನಂತೆ ದುಡಿಯುತ್ತಿದ್ದ ಉಪ್ಪಾರ ಜನಾಂಗದ ವಿಠ್ಠಲ ಚೆಲ್ಲಿ ಎಂಬ ಕಾರ್ಮಿಕ ಆತ್ಮಹತ್ಯೆ ಮಾಡಿಕೊಳ್ಳುವ ಹಾಗೆ ಚಿತ್ರಹಿಂಸೆ ಕೊಟ್ಟಿದ್ದು, ಇದೇ ಉಪ್ಪಾರ ಜನಾಂಗದ ದುಂಡಪ್ಪ ಚೌಕಾಸಿ ಎಂಬುವವರ ಮೇಲೆ ಅನವಶ್ಯಕವಾಗಿ 307 ಕೇಸು ಜಡಿದು ಅವರನ್ನು ಜೈಲಿಗಟ್ಟಿದ್ದು, ಕುರುಬ ಸಮುದಾಯದ ಲಕ್ಷ್ಮಣ್ ತೋಳಿನವರ ಮೇಲೆ ಬರೊಬ್ಬರಿ ಇಪ್ಪತ್ತೈದು ಕೇಸುಗಳನ್ನು ಹಾಕಿಸಿ ಅವರನ್ನು ಹಿಗ್ಗಾಮುಗ್ಗಾ ಥಳಿಸಿದ್ದು... ಇದೇ ಬಾಲಚಂದ್ರ ಜಾರಕಿಹೊಳಿಯ ಸಾಧನೆಗಳು!



ಮೊನ್ನೆ ಮೊನ್ನೆ ನಾಗನೂರ ಗ್ರಾಮದಲ್ಲಿ ಬಾಲಚಂದ್ರನ ಗೂಂಡಾಗಳು ಜಾತ್ರೆಗೆ ಬಂದ ಲಿಂಗಾಯತ ಮಹಿಳೆಯರ ಮೇಲೆ ಭಂಡಾರ ಹಾಕಿ ಅಸಭ್ಯವಾಗಿ ವರ್ತಿಸಿದರು. ಅದನ್ನು ಪ್ರತಿಭಟಿಸಿದ ಮಹಿಳೆಯರ ಮೇಲೆ ಅಟ್ರಾಸಿಟಿ ಕೇಸು ಜಡಿಯುವುದಾಗಿ ಬೆದರಿಕೆಯೊಡ್ಡಿದರು. ಆದರೂ ಆ ಮಹಿಳೆಯರು ದೂರು ನೀಡಲು ಹೋದರೆ ಬಾಲಚಂದ್ರನ ಡಿವೈಎಸ್‌ಪಿ ಜಾನವಾಡ, ಸರ್ಕಲ್ ಇನ್ಸ್‌ಪೆಕ್ಟರ್ ಕಟ್ಟಿಮನಿ ದೂರಿನ ಪ್ರತಿಯನ್ನೇ ಹರಿದುಹಾಕಿದರು. ಅದೆಲ್ಲ ಬಿಡಿ. ಲಿಂಗಾಯತ ಸಮುದಾಯದ ಮಠ ಶೂನ್ಯಸಂಪಾದನೆಯ ಮುರುಘರಾಜೇಂದ್ರ ಸ್ವಾಮಿಗಳಿಗೆ ಅಟ್ರಾಸಿಟಿ ಕೇಸು ಹಾಕುವ ಬೆದರಿಕೆಯೊಡ್ಡುತ್ತಾನೆಂದರೆ ಬಾಲಚಂದ್ರ ಜಾರಕಿಹೊಳಿ ಎಷ್ಟರಮಟ್ಟಿಗೆ ಕೊಬ್ಬಿದ್ದಾನೆಂದು ಯಾರಾದರೂ ಯೋಚಿಸಬಹುದು. ಈತನ ದೌರ್ಜನ್ಯಕ್ಕೆ ಒಳಗಾದವರು ಕೇವಲ ಲಿಂಗಾಯತರು, ಉಪ್ಪಾರರು, ಕುರುಬರು ಮಾತ್ರವಲ್ಲ, ದಲಿತರೂ ಇದ್ದಾರೆ.

ಇಷ್ಟೆಲ್ಲಾ ದೌರ್ಜನ್ಯಗಳ ಹೀನ ಚರಿತ್ರೆ ಹೊಂದಿರುವ ಬಾಲಚಂದ್ರ ಜಾರಕಿಹೊಳಿಗೆ ಓಟು ಹಾಕಿದರೆ ಆತನ ದೌರ್ಜನ್ಯ ಅಟ್ಟಹಾಸಗಳಿಗೆ ಅಧಿಕೃತ ಪರ್ಮಿಷನ್ ಕೊಟ್ಟಂತಾಗುತ್ತದೆ.

ಸಿದ್ದರಾಜು ಬಗ್ಗೆ ಮೊದಲಿಂದಲೂ ಅಭಿಮಾನವಿರುವ ಮದ್ದೂರು ಮತಕ್ಷೇತ್ರದಲ್ಲಿ ಮೂರನೇ ಒಂದು ಭಾಗವಿರುವ ಹಿಂದುಳಿದ ಜನಾಂಗಗಳು ಮತ್ತು ಗಣನೀಯ ಪ್ರಮಾಣದಲ್ಲಿರುವ ಮುಸ್ಲಿಮರು ಬಿಜೆಪಿಯನ್ನು ಸೋಲಿಸಬಲ್ಲ ಕ್ಯಾಂಡಿಡೇಟ್ ಆಗಿರುವ ಕಲ್ಪನಾಗೆ ಮತ ನೀಡುವುದು ಖಚಿತವಾಗಿದೆ. ಆದರೆ ಒಂದೊಂದು ಭಾಗದ ಜವಾಬ್ದಾರಿ ಹೊತ್ತಿರುವ ಜಿಲ್ಲೆಯ ಜೆಡಿಎಸ್ ಶಾಸಕರುಗಳು ಕಲ್ಪನಾ ಪರವಾಗಿ ಅಷ್ಟಾಗಿ ಕೆಲಸ ಮಾಡುತ್ತಿಲ್ಲ. ಕೆ.ಎಂ.ದೊಡ್ಡಿಯ ಜವಾಬ್ದಾರಿ ಹೊತ್ತಿರುವ ಪುಟ್ಟರಾಜು ಒಂದೆರಡು ದಿನ ಕಾಣಿಸಿಕೊಂಡು ಮಿಕ್ಕಂತೆಲ್ಲ ಎಂದಿನಂತೆ ಪಾಂಡವಪುರದಲ್ಲಿ ಕಾರ್ಯಕ್ರಮಗಳನ್ನು ಮಾಡಿಕೊಂಡು ಕಾಲಕಳೆಯುತ್ತಿದ್ದಾರೆ. ಮಂಡ್ಯ ಶಾಸಕ ಎಂ.ಶ್ರೀನಿವಾಸ್‌ಗೆ ಚಾಮನಹಳ್ಳಿ ಜಿ.ಪಂ ಕ್ಷೇತ್ರದವರು ಫೋನ್ ಮಾಡಿದರೆ ಕಿವಿಗೊಡುತ್ತಿದ್ದಾರೆ ಎಂಬುದು ಇಲ್ಲಿನ ಕಾರ್ಯಕರ್ತರ ಅಳಲು. ಒಕ್ಕಲಿಗರು ಹೇಗೂ ನಮಗೇ ಓಟು ಹಾಕುತ್ತಾರೆ ಎಂಬ ಕಾನ್ಫಿಡೆನ್ಸ್‌ನಲ್ಲಿ ಸುಖಾಸುಮ್ಮನೆ ಓಡಾಡಿಕೊಂಡಿದ್ದಾರೆ. ಇದ್ದುದರಲ್ಲಿ ಟಿಕೆಟ್ ಆಕಾಂಕ್ಷಿಯಾಗಿದ್ದ ಹೊನ್ನಲಗೆರೆ ರಾಮಕೃಷ್ಣ ಮಾತ್ರ ಬಿರುಸಾಗಿ ಕೆಲಸ ಮಾಡುತ್ತಿದ್ದಾರೆ.


ಗುರುಚರಣ್


ಗುರುಚರಣ್ ಟಿಕೆಟ್ ಪಡೆದುಕೊಂಡಿದ್ದು, ಮುಂದಿನ ಸಾರಿ ಗೆಲ್ಲಲು ಮಾತ್ರ ಎಂಬುದು ಕಾಂಗ್ರೆಸ್‌ನವರೇ ಹೇಳುವ ಮಾತು. ಸ್ವತಃ ಎಸ್.ಎಂ.ಕೃಷ್ಣರೇ ಕಲ್ಪನಾ ಸಿದ್ದರಾಜುಗೆ ಹಣ ನೀಡಿ ಬೆಂಬಲ ಕೊಟ್ಟಿದ್ದಾರೆ ಎಂಬುದು ಈಗ ಮದ್ದೂರಿನಲ್ಲಿ ಎದ್ದಿರುವ ವದಂತಿ. ಕ್ಷೇತ್ರದಾದ್ಯಂತ ಓಡಾಡುತ್ತಿರುವ ಗುರುಚರಣ್ ಮತ್ತು ಜೆಡಿಎಸ್ ಕಡೆಯಿಂದಲೂ ಹಣ ಹಂಚುತ್ತಿದ್ದಾರಾದರೂ, ತಮ್ಮಣ್ಣರ ಪ್ರವಾಹದ ಮುಂದೆ ಇವರದ್ದು ಏನೇನೂ ಅಲ್ಲ.

ಇದುವರೆಗೆ ಚುನಾವಣಾಧಿಕಾರಿಯವರು ಚುನಾವಣಾ ಅಕ್ರಮಗಳಿಗೆ ಸಂಬಂಧಿಸಿದ ಕೇಸುಗಳೂ ಹೆಚ್ಚಾಗೆ ಬಿದ್ದಿರುವುದು ಬಿಜೆಪಿಯ ಮೇಲೇ. ಆಡಳಿತಾರೂಢ ಬಿಜೆಪಿಯ ಮೇಲೆ 10 ಕೇಸುಗಳು ಬಿದ್ದಿದ್ದರೆ, ಕಾಂಗ್ರೆಸ್ ಮತ್ತು ಜನತಾದಳಗಳ ಮೇಲೆ ತಲಾ ಒಂದೊಂದು ಕೇಸು ಬಿದ್ದಿದೆ. ಬಿಜೆಪಿಯ ಕಾರ್ಯಕರ್ತನೊಬ್ಬ ಸೀರೆ ಸ್ವಾಕ್ ಮಾಡಿ ಸಿಕ್ಕಿಹಾಕಿಕೊಂಡಿದ್ದಾನೆ. ಕೆ.ಎಂ.ದೊಡ್ಡಿ, ತೊಪ್ಪನಹಳ್ಳಿ, ಮಾದನಾಯ್ಕನಹಳ್ಳಿಗಳಲ್ಲಿ ಬಿಜೆಪಿಯವರು ಸಂಗ್ರಹಿಸಿದ್ದ ಅಕ್ರಮ ಮದ್ಯ ಅಬಕಾರಿ ಪೊಲೀಸರ ವಶವಾಗಿದೆ. ಆದರೆ ಇದು ಯಾರದ್ದೋ ಗೊತ್ತಿಲ್ಲ ಎಂದು ಅಬಕಾರಿ ಜಿಲ್ಲಾಧಿಕಾರಿ ಮಂಜುನಾಥ್ ಹೇಳುತ್ತಿದ್ದಾರೆ. ಸಚಿವ ಬಾಲಚಂದ್ರ ಜಾರಕಿಹೊಳಿಯ ಹತ್ತಿರದ ಸಂಬಂಧಿಯಾಗಿರುವುದರಿಂದಲೇ ಈತ ನೇರವಾಗಿ ಬಿಜೆಪಿಯನ್ನು ಹೆಸರಿಸುತ್ತಿಲ್ಲ ಎಂಬುದು ಅವರ ಮೇಲಿನ ಆರೋಪ.

ಇವೆಲ್ಲಾ ಹೇಗೇ ಇದ್ದರೂ ಸದ್ಯಕ್ಕೆ ಕಲ್ಪನಾ ಸಿದ್ದರಾಜು ಮತ್ತು ತಮ್ಮಣ್ಣರ ನಡುವಿನ ನೇರ ಸ್ಪರ್ಧೆಯಿದೆ. ತಮ್ಮಣ್ಣರ ಹಣದಿಂದ ಕೊಳ್ಳಬಹುದಾದವರೆಲ್ಲರನ್ನೂ ಕೊಂಡಿರುವುದರಿಂದ ಸದ್ಯಕ್ಕೆ ಪತ್ರಿಕೆಗಳಲ್ಲಿ ಅವರ ಆರ್ಭಟ ಹೆಚ್ಚು ಕಾಣುತ್ತಿದೆ. ಕಲ್ಪನಾರನ್ನು ಗೆಲ್ಲಿಸುವ ಮೂಲಕ ಸಿದ್ದರಾಜುವಿಗೆ ಹಿಂದೆ ತಾವು ಮಾಡಿದ್ದ ಅನ್ಯಾಯಕ್ಕೆ ಪಶ್ಚಾತ್ತಾಪವೂ ಆಗುತ್ತೆ ತಮ್ಮಿಂದ ಸಹಾಯ ಪಡೆದು ದ್ರೋಹವೆಸಗಿದ ತಮ್ಮಣ್ಣರನ್ನು ಹಣಿದ ಹಾಗೂ ಆಗುತ್ತದೆ ಎಂದುಕೊಂಡಂತಿರುವ ದೇವೇಗೌಡರು ಸೋಮವಾರದಿಂದ ಇಲ್ಲಿನ ಹಳ್ಳಿಗಳನ್ನು ಸುತ್ತಲಿದ್ದಾರೆ. ಇಲ್ಲಿನ ಮತದಾರರ ಮೇಲೆ ಇಂದಿಗೂ ಪ್ರಭಾವ ಉಳಿಸಿಕೊಂಡಿರುವ ದೇವೇಗೌಡರ ಹಠ ನೋಡಿದರೆ ಈ ಕ್ಷೇತ್ರ ಜೆಡಿಎಸ್ ಕೈಯಲ್ಲೇ ಉಳಿಯುವ ಲಕ್ಷಣಗಳೇ ಹೆಚ್ಚು.

■ ಲಕ್ಷ್ಮಣ್ ಚೀರನಹಳ್ಳಿ


ಈ ಹಿಂದೆ ಜೆಡಿಎಸ್‌ನಲ್ಲಿದ್ದಾಗ ತಾನು ಪಕ್ಷದಿಂದ ಪಕ್ಷಕ್ಕೆ ಹಾರುವ ಮಂಗನಲ್ಲ, ಜೆಡಿಎಸ್‌ನಲ್ಲಿಯೇ ಶಾಶ್ವತವಾಗಿರುತ್ತೇನೆ, ಕುಮಾರಣ್ಣನ ಕೈ ಬಲಪಡಿಸುತ್ತೇನೆ ಎಂದೆಲ್ಲಾ ಭೊಗಳೆ ಬಿಟ್ಟಿದ್ದ ಬಾಜಾ ಎರಡು ತಿಂಗಳೊಳಗಾಗಿ ಬಿಜೆಪಿಗೆ ಹಾರಿ ತಾನೂ ಒಬ್ಬ ಮಂಗನೇ ಎಂದು ಸಾಬೀತುಮಾಡಿಕೊಂಡಿದ್ದಾನೆ. ಆತ ಆಡಿದ ಮಂಗಾಟದಿಂದಾಗಿ ಅರಭಾವಿ ಕ್ಷೇತ್ರದ ಜನ ಚುನಾವಣೆಗಳನ್ನು ಮತ್ತೆ ನೋಡಬೇಕಾಗಿ ಬಂದಿದೆ.


ಸತೀಶ್ ಜಾರಕಿಹೊಳಿ

ಬಾಜಾನ ಗೂಂಡಾಗಿರಿಯನ್ನು ಮೀರಿ ಅವನನ್ನು ಸದೆಬಡಿಯುವುದಕ್ಕಾಗಿ ಕಾಂಗ್ರೆಸ್ ವಿವೇಕರಾವ್ ಪಾಟೀಲ್‌ನನ್ನು ಕಣಕ್ಕಿಳಿಸಿದೆ. ಈ ಹಿಂದೆ ಬಾಲಚಂದ್ರನ ವಿರುದ್ಧ ಸೆಡ್ಡು ಹೊಡೆದು ಅಲ್ಪ ಅಂತರದಲ್ಲಿ ಸೋತಿದ್ದ ವಿವೇಕರಾವ್ ಪಾಟೀಲ್ ಹಿಂದೆ ನಿಷ್ಠಾವಂತ ಕಾರ್ಯಕರ್ತರ ದೊಡ್ಡ ದಂಡೇ ಇದೆ. ಒಂದೆರಡು ಬಾರಿ ಪಕ್ಷ ಹಾರಿದ್ದಾರಾದರೂ ಭ್ರಷ್ಟಾಚಾರ, ಲಂಚಗುಳಿತನಗಳಿಂದ ಮೈಕೈ ಹೊಲಸು ಮಾಡಿಕೊಂಡವರಲ್ಲ. ಅದೂಅಲ್ಲದೇ ಅವರು ಕುರುಬರ ಜಾತಿಗೆ ಸೇರಿರುವುದರಿಂದ ಕ್ಷೇತ್ರದಲ್ಲಿ ಎರಡನೇ ಅತಿದೊಡ್ಡ ಸಮುದಾಯವಾಗಿರುವ ಕುರುಬ ಮತಗಳು ಅವರಿಗೆ ಸಾಲಿಡ್ಡಾಗಿ ಬೀಳುವ ಸಾಧ್ಯತೆಯಿದೆ.


ಸತೀಶ್ ಜಾರಕಿಹೊಳಿ

ವಿವೇಕರಾವ್ ಪಾಟೀಲ್‌ಗೆ ಬಹಿರಂಗ ಬೆಂಬಲ ನೀಡದ ಪರಿಸ್ಥಿತಿಯಲ್ಲಿರುವವರು ಲಿಂಗಾಯತರು. ಅದರಲ್ಲೂ ಪ್ರಬಲವಾಗಿರುವ ಪಂಚಮಸಾಲಿಗಳು. ಈ ಸಮುದಾಯವನ್ನು ಬಿಜೆಪಿಯ ಬಾಲಚಂದ್ರನೆಡೆಗೆ ಸೆಳೆಯಲು ಬೆಳಗಾವಿಯ ಪ್ರಭಾಕರ ಕೋರೆ ಮತ್ತು ಬಿಜಾಪುರದ ಶಾಸಕ ಅಪ್ಪು ಪಟ್ಟಣಶೆಟ್ಟಿ ಅರಭಾವಿಯಲ್ಲಿ ಠಿಕಾಣಿ ಹೂಡಿದ್ದಾರೆ. ಕೋರೆ ಕೂಡ ಬಾಲಚಂದ್ರನಂತೆ ಬಿಜೆಪಿಗೆ ಹಾರಿದವನು. ಈತನಿಗೆ ಬೆಳಗಾವಿಯಲ್ಲಿ ಕೆಎಲ್‌ಇ ಎಂಬ ಸುಲಿಗೆಕೋರ ಶಿಕ್ಷಣ ಸಂಸ್ಥೆಗಳ ಒಡೆತನವಿದೆ. ಅಧಿಕಾರ ಚಲಾಯಿಸಲು ರಾಜ್ಯಸಭಾ ಸದಸ್ಯತ್ವವಿದೆ. ಹಡಬೆ ದುಡ್ಡಂತೂ ಕೊಳೆತೀರದಷ್ಟಿದೆ. ಇನ್ನು ಬಿಜಾಪುರದ ಅಪ್ಪು ಪಟ್ಟಣಶೆಟ್ಟಿಯ ಹಿಂದೆ ಅಧಿಕಾರದ ಜೊತೆಗೆ ಭಜರಂಗಿ ಹುಡುಗರ ಹಿಂಡು ಇದೆ. ಈಗಾಗಲೇ ಅಖಾಡದಲ್ಲಿರುವ ಶ್ರೀರಾಮುಲು ಗ್ಯಾಂಗ್‌ನೊಂದಿಗೆ ಭಜರಂಗೀ ಗೂಂಡಾಗಳೂ ಸೇರ್ಪಡೆಯಾಗಲಿವೆ.


ಅರವಿಂದ ದಳವಾಯಿ

ಇನ್ನೊಂದೆಡೆಗೆ ರಾಜ್ಯದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಸರ್ಕಾರದ ಬೆಂಬಲದೊಂದಿಗೆ ಅಧಿಕಾರ ದುರುಪಯೋಗ ಪಡಿಸಿಕೊಳ್ಳುತ್ತಿದ್ದಾನೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ವಿಜಯಕುಮಾರ್ ಪ್ರತೀ ಸ್ತ್ರೀಶಕ್ತಿ ಸಂಘಟನೆಗಳಿಗೆ, ಅಂಗನವಾಡಿ ಕಾರ್ಯಕರ್ತೆಯರಿಗೆ ಸಕತ್ ಪಾರ್ಟಿ ಕೊಟ್ಟು, ಹತ್ತು ಸಾವಿರ ರೂಪಾಯಿ ಕಟ್ಟುಗಳನ್ನು ಅವರ ಕೈಯಲ್ಲಿಟ್ಟು ಚುನಾವಣಾ ಪ್ರಚಾರಕ್ಕಿಳಿಸಿದ್ದಾನೆ. ಜೊತೆಗೆ ಬಾಲಚಂದ್ರನ ಬಾಡಿಗಾರ್ಡ್ ನಂತಿರುವ ಪೊಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ ಕಟ್ಟೀಮನಿ ತನ್ನ ಇಲಾಖೆಯ ಜೀಪನ್ನೇ ಬಾಲಚಂದ್ರನ ಚುನಾವಣಾ ಪ್ರಚಾರಕ್ಕೆ ಬಿಟ್ಟಿದ್ದಾನೆ. ಇನ್ನು ತಹಶೀಲ್ದಾರ್ ಕೂಡ ತಾನೇನು ಕಡಿಮೆಯಿಲ್ಲವೆಂಬಂತೆ ಇಲಾಖೆಯ ಜೀಪುಗಳನ್ನು ಬಾಲಚಂದ್ರನ ಪರ ಪ್ರಚಾರಕ್ಕೆ ಕಳುಹಿಸಿಕೊಟ್ಟಿದ್ದಾನೆ.

ಅಸಲಿಗೆ ಜನ ತನ್ನನ್ನು ಗೆಲ್ಲಿಸುತ್ತಾರೆಂಬ ಭರವಸೆಯಿದ್ದಿದ್ದರೆ ಬಾಲಚಂದ್ರ ಇಷ್ಟೆಲ್ಲಾ ಸರ್ಕಸ್ ಮಾಡಬೇಕಾದ ಅವಶ್ಯಕತೆಯೇ ಇರಲಿಲ್ಲ. ಕ್ಷೇತ್ರಕ್ಕಾಗಿ ಒಂದೂ ಕೆಲಸ ಮಾಡದೇ ತಾನೊಬ್ಬನೇ ತಿಂದು ತೇಗಿರುವ ಸತ್ಯ ಜನರಿಗೆ ಗೊತ್ತಿದೆ. ಅವನನ್ನು ಸಕ್ರಿಯ ರಾಜಕಾರಣದಿಂದ ಶಾಶ್ವತವಾಗಿ ಮನೆಗಟ್ಟುವ ತಯಾರಿಯನ್ನವರು ಮಾಡಿಯೇ ಇದ್ದಾರೆ. ಅದಕ್ಕಾಗಿಯೇ ಭಯಬಿದ್ದ ಬಾಜಾ ಹೇಗಾದರೂ ಮಾಡಿ ಗೆಲ್ಲಲೇಬೇಕೆಂದು ಶತಗತಾಯ ಪ್ರಯತ್ನ ಮಾಡುತ್ತಿರುವುದು.

ಇನ್ನು ಜೆಡಿಎಸ್‌ನಿಂದ ಅಖಾಡಕ್ಕಿಳಿದಿರುವ ಅರವಿಂದ ದಳವಾಯಿ ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬ ಪರಿಸ್ಥಿತಿ ನಿರ್ಮಾಣವಾಗಿದೆ. ಈತ ಅಸಿಸ್ಟೆಂಟ್ ಕಮೀಷನರ್ ಹುದ್ದೆಗೆ ರಾಜೀನಾಮೆ ಕೊಟ್ಟು ರಾಜಕೀಯಕ್ಕಿಳಿದಿದ್ದಾನಾದರೂ ಆ ಅಧಿಕಾರ ಶಾಹಿ ಗತ್ತು ಮಾತ್ರ ಬಿಟ್ಟಿಲ್ಲ. ಹಾಗಾಗಿ ಹೆಚ್ಚೆಂದರೆ ಈತ ಠೇವಣಿ ಉಳಿಸಿಕೊಳ್ಳುವುದಕ್ಕೆ ಯಶಸ್ವಿಯಾಗ ಬಹುದಷ್ಟೆ.

ಸಾರಾಂಶೀಕರಿಸಿ ಹೇಳುವುದಾದರೆ, ಅರಭಾವಿಯಲ್ಲಿ ಕಾಂಗ್ರೆಸ್‌ನ ವಿವೇಕರಾವ್ ಪಾಟೀಲ್ ಮತ್ತು ಬಿಜೆಪಿಯ ಬಾಲಚಂದ್ರ ಜಾರಕಿಹೊಳಿ ನಡುವೆಯೇ ನೇರ ಕದನವಿದೆ. ಬಾಲಚಂದ್ರನ ಬಾನಗಡಿಗಳು, ತಾರಾತಿಗಡಿಗಳು ಜನಮನದಲ್ಲಿ ಅಚ್ಚಳಿಯದಂತೆ ಮೂಡಿರುವುದರಿಂದ ಬಾಲಚಂದ್ರ ಓಟುಗಳ ಮೇಲೆ ನಕಾರಾತ್ಮಕ ಪ್ರಭಾವ ಬೀರಲಿದೆ. ಇದರಿಂದ ವಿವೇಕರಾವ್ ಪಾಟೀಲ್‌ಗೆ ಅನುಕೂಲವಾಗಲಿದೆ.

■ ಮೇಘರಾಜ್

ಹುಕ್ಕೇರಿ: ಕತ್ತಿಯ ರೌಡಿಸಂ ಕುತ್ತಾಗಲಿದೆಯೆ?


ಉಮೇಶ್ ಕತ್ತಿ

ಇಂತಹ ಒಂದು ಸಾಧ್ಯತೆಯನ್ನು ತಳ್ಳಿಹಾಕಲಾಗುವುದಿಲ್ಲ. ಚುನಾವಣೆಯು ಕಾವೇರಿರುವ ಹುಕ್ಕೇರಿಯ ಬೀದಿಗಳಲ್ಲಿ ಜನ ಕಾಂಗ್ರೆಸ್‌ನ ಜಯಪ್ರಕಾಶ್ ನಲವಡೆಯನ್ನಾಗಲೀ ಅಥವ ಜೆಡಿಎಸ್‌ನ ಬಸವರಾಜ್ ಮಟಗಾರನನ್ನಾಗಲೀ ಗೆಲ್ಲಿಸುವುದಕ್ಕಿಂತ ಬಿಜೆಪಿಯಿಂದ ಸ್ಪರ್ಧಿಸಿರುವ ಉಮೇಶ್ ಕತ್ತಿಯನ್ನು ಸೋಲಿಸುವುದೇ ಪ್ರಧಾನ ಆದ್ಯತೆ ಮಾಡಿಕೊಂಡಿರುವಂತಿದೆ. ಅದಕ್ಕೆ ಉಮೇಶ್ ಕತ್ತಿ ಕ್ಷೇತ್ರದಲ್ಲಿ ನಡೆಸುತ್ತಿರುವ ಪಾಳೇಗಾರಿಕೆಯಿಂದೇ ಪ್ರಧಾನ ಕಾರಣ ಎಂದರೆ ತಪ್ಪಾಗಲಾರದೇನೋ?

ಅಸಲಿಗೆ ಉಮೇಶ್ ಕತ್ತಿ ಬೆಳೆದು ಪ್ರವರ್ಧಮಾನಕ್ಕೆ ಬಂದಿದ್ದೇ ಕತ್ತು ಕೊಯ್ಯುವ ಕೆಲಸಗಳಿಂದ. ಬೆಳ್ಳುಬ್ಬಿಗೆ ಆತ ಮಾಡಿದ ದ್ರೋಹ ಇತ್ತೀಚಿನ ಉದಾಹರಣೆಯಾದರೆ ಸಕ್ಕರೆ ಫ್ಯಾಕ್ಟರಿ ಬಿಸಿನೆಸ್‌ನಲ್ಲಿ ಆತ ಎಸಗಿದ ದ್ರೋಹಗಳಿಗೆ ಲೆಕ್ಕವಿಲ್ಲ. ಒಂದೇ ಉದಾಹರಣೆಯನ್ನು ನೋಡಿ. ಅತ್ಯುತ್ತಮ ಸ್ಥಿತಿಯಲ್ಲಿದ್ದ ಹಿರಣ್ಯಕೇಶವ ಸಕ್ಕರೆ ಕಾರ್ಖಾನೆಗೆ ಬಸವನಗೌಡ ಪಾಟೀಲ್ ಎಂಬ ಸಭ್ಯಸ್ಥ ಛೇರ್ಮನ್ ಆಗಿದ್ದರು. ಅವರೊಂದಿಗೆ ಒಡನಾಟ ಬೆಳೆಸಿಕೊಂಡ ಕತ್ತಿ ಅದ್ಹೇಗೋ ಗಂಡಾಗುಂಡಿ ಮಾಡಿ ಫ್ಯಾಕ್ಟರಿಯ ಡೈರೆಕ್ಟರ್ ಆದ. ಆದಾದ ನಾಲ್ಕು ವರ್ಷದಲ್ಲಿಯೇ ತನ್ನನ್ನು ಡೈರೆಕ್ಟರ್ ಮಾಡಿದ ಬಸವನಗೌಡ ಪಾಟೀಲ್ ಅವರನ್ನೇ ಫ್ಯಾಕ್ಟರಿಯಿಂದ ಹೊರಹಾಕಿ ಛೇರ್ಮನ್ ಆಗಿಬಿಟ್ಟ. ಬಸವನಗೌಡರ ಛೇರ್ಮನ್‌ಗಿರಿಯಲ್ಲಿ ಫ್ಯಾಕ್ಟರಿ ಚೆನ್ನಾಗಿ ನಡೆದು ವೀರಶೈವ ಬ್ಯಾಂಕ್‌ನಲ್ಲಿ ಐದು ಕೋಟಿ ಠೇವಣಿಯಿತ್ತು. ಅದನ್ನೆಲ್ಲಾ ಲಪಟಾಯಿಸಿದ್ದಲ್ಲದೇ ಒಂದೇ ವರ್ಷದಲ್ಲಿ ಫ್ಯಾಕ್ಟರಿಯ ದುರಸ್ತಿ, ಅದೂಇದೂ ಅಂತ ಇಪ್ಪತ್ತೈದು ಕೋಟಿ ಸಾಲ ಮಾಡಿಟ್ಟ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ, ಲಾಭದಲ್ಲಿ ನಡೆಯುತ್ತಿದ್ದ ಫ್ಯಾಕ್ಟರಿಯನ್ನು ಒಂದೇ ವರ್ಷದಲ್ಲಿ ಸಾಲಗಾರ ಕಾರ್ಖಾನೆಯನ್ನಾಗಿ ಮಾಡಿದ ಎಂದರೆ ಕತ್ತಿ ಅದೆಷ್ಟು ಹಣ ನುಂಗಿ ನೀರು ಕುಡಿದಿರಬೇಕು?

ಉಮೇಶ್ ಕತ್ತಿಯ ದ್ರೋಹ ಅಲ್ಲಿಗೇ ನಿಲ್ಲಲಿಲ್ಲ. ತನ್ನದೇ ಮಾಲೀಕತ್ವದಲ್ಲಿ ಬೇರೊಂದು ಫ್ಯಾಕ್ಟರಿ ಮಾಡಬೇಕೆಂದು ಹೊಂಚು ಹಾಕುತ್ತಲೇ ಇದ್ದ. ಕೋ-ಜಾ ಸರ್ಕಾರದ ಅವಧಿಯಲ್ಲಿ ಬಲವಂತವಾಗಿ ಷೇರುಗಳನ್ನೆತ್ತಿ ವಿಶ್ವನಾಥ ಷುಗರ್ಸ್ ಎಂಬ ತನ್ನದೇ ಫ್ಯಾಕ್ಟರಿಯನ್ನು ತೆರೆದು ಅದನ್ನು ತನ್ನ ತಮ್ಮನ ಉಸ್ತುವಾರಿಗೆ ಬಿಟ್ಟ. ಆಗ ಶುರುವಾಗಿದ್ದು ಇನ್ನೊಂದು ಹಂತದ ಲೂಟಿ. ತನ್ನ ನೇತೃತ್ವದಲ್ಲಿರುವ ಹಿರಣ್ಯಕೇಶವ ಸಕ್ಕರೆ ಕಾರ್ಖಾನೆಯ ಬೆಲೆಬಾಳುವ, ಸುಸ್ಥಿತಿಯಲ್ಲಿರುವ ಯಂತ್ರಗಳನ್ನೆಲ್ಲಾ ತಮ್ಮನ ವಿಶ್ವನಾಥ್ ಷುಗರ್ಸ್‌ಗೆ ವರ್ಗಾಯಿಸಿದ; ಹಿರಣ್ಯಕೇಶವ ಕಾರ್ಖಾನೆಗೆ ಬರುತ್ತಿದ್ದ ಉತ್ತಮ ಗ್ರೇಡ್ ಕಬ್ಬು ವಿಶ್ವನಾಥ್ ಷುಗರ್ಸ್‌ಗೆ ಹೋಗುವಂತೆ ವ್ಯವಸ್ಥೆ ಮಾಡಿದ. ಹೀಗೆ ತನ್ನ ಸ್ವಂತ ಛೇರ್ಮನ್‌ನಿಂದಲೇ ಲೂಟಿಗೊಳಗಾದ ಹಿರಣ್ಯಕೇಶವ ಷುಗರ್ಸ್‌ಗೆ ಹೊಸ ಯಂತ್ರಗಳನ್ನು ಖರೀದಿಸುವ, ಅದನ್ನು ಪುನಶ್ಚೇತನಗೊಳಿಸುವ ನೆಪವೊಡ್ಡಿ ಮತ್ತೆ ಐವತ್ತು ಕೋಟಿಗಳ ಸಾಲ ಎತ್ತಿದ. ಅಂದರೆ, ಒಂದೆಡೆ ಹಿರಣ್ಯಕೇಶವ ಕಾರ್ಖಾನೆಯ ಹೆಸರಿನಲ್ಲಿ ಸಾಧ್ಯವಾದಷ್ಟೂ ಸಾಲ ಎತ್ತಿ ದಿವಾಳಿ ಮಾಡುವುದು ಹಾಗೂ ಅದೇ ಸಮಯದಲ್ಲಿ ತಮ್ಮನ ವಿಶ್ವನಾಥ್ ಕಾರ್ಖಾನೆ ಪ್ರವರ್ಧಮಾನಕ್ಕೆ ಬರುವಂತೆ ನೋಡಿಕೊಳ್ಳುವುದು - ಹೇಗಿದೆ ಕತ್ತಿಯ ಬ್ಲೇಡ್?

ಹೋಗಲಿ ತಮ್ಮ ಸಕ್ಕರೆ ಕಾರ್ಖಾನೆಗೆ ಕಬ್ಬು ತರುವ ರೈತರಿಗೆ ಸರಿಯಾಗಿ ಬಿಲ್ಲು ಕೊಡುತ್ತಿದ್ದಾನಾ ಎಂದರೆ ಅದೂ ಇಲ್ಲ. ವರ್ಷಗಟ್ಟಲೇ ದುಡ್ಡು ಕೊಡದೇ ರೈತರನ್ನು ಈತ ಗೋಳು ಹೊಯ್ದುಕೊಂಡಷ್ಟು ಪ್ರಾಯಶಃ ಮತ್ತ್ಯಾರು ಮಾಡಿರಲಾರರು. ಬೇಸತ್ತ ರೈತರು ಬೇರೆ ಕಾರ್ಖಾನೆಗಳಿಗೆ ಕಬ್ಬುಗಳನ್ನು ಒಯ್ಯಲಾರಂಭಿಸಿದರೆ ಇವನೇ ಗೂಳಿಯಂತೆ ಮೇಯಿಸಿದ ತನ್ನ ಸೋದರ ಸಂಬಂಧಿಗಳು ಮಾರ್ಗ ಮಧ್ಯದಲ್ಲಿಯೇ ಕಬ್ಬು ತುಂಬಿದ ರೈತರ ಟ್ರಾಕ್ಟರ್‌ಗಳನ್ನು, ಲಾರಿಗಳನ್ನು ತಡೆದು ತಮ್ಮ ಕಾರ್ಖಾನೆಗೆ ಕರೆದುಕೊಂಡು ಹೋಗುತ್ತಾರೆ. ಇಂಥ ದಬ್ಬಾಳಿಕೆ ಹುಕ್ಕೇರಿ ಬಿಟ್ಟು ಬೇರೆ ಎಲ್ಲಾದರೂ ಇದೆಯೆ? ಇದು ಕತ್ತಿ ದೌರ್ಜನ್ಯದ ಒಂದು ಪುಟ್ಟ ಸ್ಯಾಂಪಲ್. ಕೆದಕುತ್ತಾ ಹೋದರೆ ಈತ ಬೆಳಗಾಂವ್ ಡಿಸಿಸಿ ಬ್ಯಾಂಕ್‌ನಲ್ಲಿ ಡೈರೆಕ್ಟರ್, ಛೇರ್ಮನ್ ಆಗಿದ್ದಾಗ ಮಾಡಿದ ಅವ್ಯವಹಾರಗಳು, ಜೆಡಿಎಸ್ ಶಾಸಕನಾಗಿ ಮಾಡಿದ ಅಧಿಕಾರದ ದುರುಪ ಯೋಗಗಳು, ಇವನ ಸೋದರರು ಮಾಡುತ್ತಿರುವ ರೌಡಿಸಂ - ಹೀಗೆ ಬರೆಯುತ್ತಾ ಹೋದರೆ ಅದೇ ಒಂದು ದ್ರೋಹ-ದೌರ್ಜನ್ಯಗಳ ರಾಮಾಯಣವಾಗುತ್ತದೆ.

ಹುಕ್ಕೇರಿ ವಿಧಾನಸಭಾ ಕ್ಷೇತ್ರದಲ್ಲಿ ನಲ್ವತ್ತೂರು ಸಾವಿರದಷ್ಟಿರುವ ಪಂಚಮಸಾಲಿಗಳೇ ಯಾವುದೇ ಚುನಾವಣೆಯಲ್ಲಿ ನಿರ್ಣಾಯಕ ಪಾತ್ರ ನಿರ್ವಹಿಸುತ್ತಾರೆ. ಉಮೇಶ್ ಕತ್ತಿ ಪಂಚಮಸಾಲಿಯಲ್ಲ, ಕೇವಲ ಏಳು ಸಾವಿರದಷ್ಟಿರುವ ಬಣಜಿಗ ಸಮುದಾಯಕ್ಕೆ ಸೇರಿದವನು. ಆದರೂ ತಾನೂ ಒಬ್ಬ ಲಿಂಗಾಯತ ಎಂದು ಪೋಜು ಕೊಡುತ್ತಾ ಪಂಚಮಸಾಲಿಗಳನ್ನು ಬುಟ್ಟಿಗೆ ಹಾಕಿಕೊಳ್ಳುವುದಕ್ಕೆ ಹೆಣಗಾಡುತ್ತಿದ್ದಾನೆ. ಉಮೇಶ್ ಕತ್ತಿ ಎಂಬ ಬಣಜಿಗ ಬಿಜೆಪಿ ಪಾಲಾಗುತ್ತಿದ್ದಂತೆ ಬೆಳ್ಳುಬ್ಬಿ ಎಂಬ ಪಂಚಮಸಾಲಿ ನಾಯಕ ಬಲಿಯಾಗಿ ಹೋದರು. ಇದು ಲಿಂಗಾಯತರಲ್ಲಿ ಹಿಡಿಯಷ್ಟಿರುವ ಬಣಜಿಗರು ಲಿಂಗಾಯತರಲ್ಲೇ ಬಹುದೊಡ್ಡ ಉಪಪಂಗಡವಾಗಿರುವ ಪಂಚಮಸಾಲಿಗಳ ವಿರುದ್ಧ ಅವ್ಯಾಹತವಾಗಿ ನಡೆಸುತ್ತಾ ಬಂದಿರುವ ಅನ್ಯಾಯದ ಮುಂದುವರೆದ ಭಾಗವಾಗಿತ್ತಷ್ಟೆ. ಪಂಚಮಸಾಲಿಗಳಿಗೆ ಉಮೇಶ್ ಕತ್ತಿ ಮಾಡಿದ ಅನ್ಯಾಯಕ್ಕೆ ಈ ಚುನಾವಣೆಯಲ್ಲಿ ಅವರು ಪ್ರತೀಕಾರ ತೀರಿಸಿಕೊಳ್ಳುವುದಿಲ್ಲವೆ? ತಾನೂ ಲಿಂಗಾಯತ ಎಂದಾಕ್ಷಣ ಈತ ಪಂಚಮಸಾಲಿಗಳಿಗೆ ಮಾಡಿದ ದ್ರೋಹವನ್ನು ಮರೆತುಬಿಡುತ್ತಾರೆಯೆ? ಯಾರ್‍ಯಾರು ಪಂಚಮಸಾಲಿ ಉಪಪಂಗಡವನ್ನು ಸಂಘಟಿಸುವ ಮೂಲಕ ಬಣಜಿಗ ಕತ್ತಿಗೆ ಪೆಟ್ಟು ನೀಡಲು ಪ್ರಯತ್ನಿಸಿದ್ದಾರೋ ಅಂತಹ ಎಲ್ಲಾ ಪಂಚಮಸಾಲಿ ಲೀಡರುಗಳನ್ನು ಆತ ಒಬ್ಬರಾದಮೇಲೊಬ್ಬರಂತೆ ನಿರ್ನಾಮ ಮಾಡಿದ್ದಾನೆ. ಅದೆಲ್ಲಾ ಪಂಚಮಸಾಲಿಗಳಿಗೆ ಗೊತ್ತಿಲ್ಲವೆ? ಈ ಚುನಾವಣೆಯೇ ಅದಕ್ಕೆ ಉತ್ತರ ನೀಡುತ್ತದೆ.

ಉಮೇಶ್ ಕತ್ತಿ ವಿರುದ್ಧ ಜನರಿಗಿರುವ ಅಸಮಾಧಾನವನ್ನು ಕಾಂಗ್ರೆಸ್-ಜೆಡಿಎಸ್‌ಗಳು ವ್ಯವಸ್ಥಿತವಾಗಿ ಬಳಸಿಕೊಂಡರೆ ಕತ್ತಿ ಮನೆ ದಾರಿ ಹಿಡಿಯುವುದು ಗ್ಯಾರಂಟಿ. ಕಾಂಗ್ರೆಸ್‌ನಿಂದ ಕಣಕ್ಕಿಳಿದಿರುವ ಜಯಪ್ರಕಾಶ್ ನಲವಡೆ ಹಿಂದಿನಿಂದಲೂ ರಾಜಕೀಯ ಮನೆತನದಲ್ಲಿದ್ದವರು. ಹಣಬಲ ಮತ್ತು ತೋಳ್ಬಲದಲ್ಲಿ ಕತ್ತಿಗಿಂತ ಕಡಿಮೆಯೇ ಆದರೂ ಒಂದಿಷ್ಟು ಜನಬೆಂಬಲ ಸಂಪಾದಿಸಿಕೊಂಡಿದ್ದಾರೆ. ಈ ಚುನಾವಣೆಯಲ್ಲಿ ಕತ್ತಿಗೆ ಪೆಟ್ಟು ಕೊಡುವುದಕ್ಕೇನಾದರೂ ಪಂಚಮಸಾಲಿಗಳು ನಿರ್ಣಯಿಸಿದರೆ ಕಾಂಗ್ರೆಸ್‌ನ ಕೈ ಮೇಲೇಳುತ್ತದೆ.

ಇನ್ನು ಜೆಡಿಎಸ್‌ನಿಂದ ನಿಂತಿರುವ ಮಟಗಾರ ಒಂದು ಕಾಲದಲ್ಲಿ ಕತ್ತಿಯ ಬಲಗೈ ಬಂಟನಾಗಿದ್ದವನೇ. ಹಾಗಾಗಿ ಕತ್ತಿಯ ದ್ರೋಹ, ವಂಚನೆಗಳು ಇವನಿಗೂ ಸ್ವಲ್ಪಮಟ್ಟಿಗೆ ಅಂಟಿಕೊಂಡಿವೆ. ಜಾತಿಯಲ್ಲಿ ಪಂಚಮಸಾಲಿಯಾದರೂ ಕೆಲಸಕ್ಕೆ ಬಾರದ ವ್ಯಕ್ತಿ ಎಂಬ ಅಭಿಪ್ರಾಯ ಜನರಲ್ಲಿ ಮನೆ ಮಾಡಿದೆ. ಅದೂಅಲ್ಲದೇ, ಅನಾರೋಗ್ಯದಿಂದ ಬಳಲುತ್ತಿರುವ ಈತ ಚುನಾವಣಾ ಪ್ರಚಾರಕ್ಕಾಗಿ ಮನೆಬಿಟ್ಟು ಹೊರಬಂದಿದ್ದೇ ಕಡಿಮೆ. ಹಾಗಾಗಿ ಚುನಾವಣೆಯಲ್ಲಿ ಈತ ಠೇವಣಿ ಉಳಿಸಿಕೊಂಡರೆ ಅದೇ ದೊಡ್ಡದು.

■ ಮೇಘರಾಜ್

ಕಳ್ಳನಿಗೆ ಕಚ್ಚೆಹರುಕನ ಬೆಂಬಲ

ಉಮೇಶ್ ಕತ್ತಿಯನ್ನು ಹೇಗಾದರೂ ಮಾಡಿ ಗೆಲ್ಲಿಸಲೇಬೇಕೆಂದು ಹಠಕ್ಕೆ ಬಿದ್ದು ಪ್ರಚಾರ ಮಾಡುತ್ತಿರುವ ಮಹಾನುಭಾವರಲ್ಲಿ ನಿಡಸೂಶಿಯ ಚಂದ್ರಶೇಖರ ಶಿವಾಚಾರ್ಯ ಸ್ವಾಮಿ ಕೂಡ ಒಬ್ಬ. ಇದು ಕೇಳುವುದಕ್ಕೆ ಅಂದವಾಗಿರುವ ಹೆಸರಾದರೂ ಈತ ಮಾಡುತ್ತಿರುವುದೆಲ್ಲಾ ಕಚ್ಚೆ ಹರುಕ ಕೆಲಸಗಳನ್ನೆ. ಈ ಮಹಾಸ್ವಾಮಿ ಮಠದ ಲಕ್ಷಾಂತರ ರೂಪಾಯಿಗಳನ್ನು ಸ್ವಾಹ ಮಾಡಿದ್ದಾಗ ಭಕ್ತರೆಲ್ಲಾ ಒಗ್ಗಟ್ಟಾಗಿ ಇವನನ್ನು ಅಟಕಾಯಿಸಿಕೊಂಡಿದ್ದರು. ಆಗ ಇವನ ಬೆಂಬಲಕ್ಕೆ ನಿಂತು ರಕ್ಷಿಸಿದವನೇ ಉಮೇಶ್ ಕತ್ತಿ. ಈಗ ಆ ಋಣವನ್ನು ತೀರಿಸಬೇಕಲ್ಲವೆ?

ಚಂದ್ರಶೇಖರ ಸ್ವಾಮಿಯಿರುವ ತನಕ ಮಠಕ್ಕೆ ಮಾನವಂತರು ಹೋಗಲಾರದ ಪರಿಸ್ಥಿತಿ ನಿರ್ಮಾಣವಾಗಿದೆ. ಮಠದ ಭಕ್ತೆಯೊಬ್ಬಳನ್ನೇ ಲೈಂಗಿಕವಾಗಿ ಹಿಂಸಿಸಿದ್ದ ಈ ಸ್ವಾಮಿಯ ವಿರುದ್ಧ ಜನ ಬಂಡೆದ್ದು ನಿಂತಿದ್ದರು. ಅದೊಂದು ದೊಡ್ಡ ಮಟ್ಟದ ರಾದ್ಧಾಂತವಾದಾಗ ಭಕ್ತರ ಚಪ್ಪಲಿಯೇಟಿನಿಂದ ಬಚಾವಾಗುವುದಕ್ಕಾಗಿ ಈತ ಭೂಗತನಾಗಿಬಿಟ್ಟಿದ್ದ. ಈಗ ನೋಡಿದರೆ ಉಮೇಶ್ ಕತ್ತಿಯ ಪರವಾಗಿ ಬೀದಿಗಿಳಿದು ಮತಯಾಚಿಸುತ್ತಿದ್ದಾನೆ.

ಇವನನ್ನು ಸ್ವಾಮಿ ಎನ್ನಬೇಕೆ ಅಥವ ಬಿಜೆಪಿ ರಾಜಕಾರಣಿ ಎನ್ನಬೇಕೇ ಅಥವಾ ಕಚ್ಚೆಹರುಕನೆನ್ನಬೇಕೆ?

ಮಧುಗಿರಿ: ಬಿಜೆಪಿ ನೋಟು ಜೆಡಿಎಸ್‌ಗೆ ಓಟು

ಮಧುಗಿರಿಯ ಯುದ್ಧ ಕಣದಲ್ಲಿ ಕಂಡುಬರುತ್ತಿರುವ ದೃಶ್ಯಾವಳಿಗಳು ಅತ್ಯಂತ ಮನೋರಂಜಕವಾಗಿವೆ. ಅದರ ಪೈಕಿ ತೀರಾ ಲೇಟೆಸ್ಟ್ ಸುದ್ದಿ ಏನೆಂದರೆ ಬಿಜೆಪಿ ನಾಯಕ ಡಾ. ಜಯರಾಂರ ಅಳಿಯ ಚಂದ್ರು ಎಂಬ ಹಿಂದೂ ವೀರನು ಎಲೆಕ್ಷನ್ ಖರ್ಚಿಗೆಂದು ಸರಬರಾಜಾಗಿದ್ದ 60 ಲಕ್ಷ ರೂಪಾಯಿಗಳನ್ನು ಎತ್ತಿಕೊಂಡು ಓಡಿಹೋಗಿದ್ದಾನೆ!

ಶಿವಮೊಗ್ಗ ನಿವಾಸಿಯಾದ ಚಂದ್ರು ಚೆನ್ನಿಗಪ್ಪನ್ನ ಗೆಲ್ಲಿಸೋ ಜವಾಬ್ದಾರಿ ತನ್ನದೇ ಅಂತ ಹೇಳಿಕೊಂಡು ಮಧುಗಿರಿಯಲ್ಲಿ ಕಾಣಿಸಿಕೊಂಡಿದ್ದ. ಈತನ ಮಾವ ಡಾ. ಜಯರಾಂ ಕಳೆದ ಬಾರಿ ಬಿಜೆಪಿ ಕ್ಯಾಂಡಿಡೇಟಾಗಿದ್ದರಿಂದ ಅವರ ಫ್ಯಾಮಿಲಿಗೆ ಪಾರ್ಟಿ ನಾಯಕರ ಜೊತೆ ಸಂಬಂಧ ಚೆನ್ನಾಗಿತ್ತು, ಹಾಗಾಗಿ ದುಡ್ಡು ಹೆಂಡದ ಹಂಚಿಕೆಯಲ್ಲಿ ಚಂದ್ರು ಕೈಹಾಕುತ್ತಿದ್ದ. ಅದೇ ಛಾನ್ಸ್ ಬಳಸಿಕೊಂಡು ಮೊನ್ನೆ ತನ್ನ ಕೈಗೆ ತಲುಪಿದ್ದ 60 ಲಕ್ಷ ರೂಪಾಯಿ ಸಮೇತ ಹಿಂದೂವೀರನಾದ ಚಂದ್ರು ಓಡಿಹೋಗಿದ್ದಾನೆ. ಚಂದ್ರು ಎಡಗೈ-ಬಲಗೈನಂತಿದ್ದ ಸುನೀಲ ಹಾಗೂ ಬಿ.ಪಿ. ನಾರಾಯಣರೆಂಬ ಇನ್ನಿಬ್ಬರು ಹಿಂದೂ ಭಂಟರೆ ವಿಚಾರವನ್ನು ಮಧುಗಿರಿ ತುಂಬಾ ಟಾಂಟಾಂ ಹಾಕುತ್ತಿದ್ದಾರೆ.

60 ಲಕ್ಷರೂ. ಕದ್ದ ಬಿಜೆಪಿ ಕಾರ್ಯಕರ್ತ

ಇಲ್ಲಿ ನಾವು ನೋಡಬೇಕಿರುವುದು ಬರೀ ಕಳ್ಳತನ ವಿಚಾರ ಮಾತ್ರ ಅಲ್ಲ, ಒಬ್ಬ ಲೋಕಲ್ ಪುಡಿ ನಾಯಕನ ಕೈಲೇ 60 ಲಕ್ಷದ ತನಕ ಹಣ ಓಡಾಡುತ್ತಿದೆ ಅಂದರೆ ಚೆನ್ನಿಗಪ್ಪನಿಗಾಗಿ ಬಿಜೆಪಿಗಳು ಅದಿನ್ನೆಷ್ಟು ಹಣ ಚೆಲ್ಲುತ್ತಿರಬಹುದು ಹೇಳಿ.

ಬಿಜೆಪಿ ಗರ್ಭಗುಡಿಯವರೇ ಹೇಳುತ್ತಿರುವ ಪ್ರಕಾರ ಯಡ್ಡಿಯೂರಪ್ಪ ಪ್ರತಿ ಕ್ಷೇತ್ರಕ್ಕೂ 20 ಕೋಟಿಯಂತೆ ಹಣ ಕಳುಹಿಸಿದ್ದಾರಂತೆ. ಬೇರೆಡೆ ಏನು ಕತೆಯೋ ಆದರೆ ಮಧುಗಿರಿಯಲ್ಲಂತೂ ಹತ್ತಾರು ಕೋಟಿ ರೂ. ಹರಿಯುತ್ತಿರುವುದು ಎದ್ದು ಕಾಣುತ್ತಿದೆ.

ಬಿಜೆಪಿಗೆ ಇಲ್ಲಿ ಕೆಲಸ ಮಾಡಬಲ್ಲ ಸ್ಥಳೀಯ ಕಾರ್ಯಕರ್ತರೇ ಸಿಗುತ್ತಿಲ್ಲ. ಹಾಗಾಗಿ ಪ್ರತಿ ದಿನ ಬೆಂಗಳೂರಿನಿಂದ 40 ಗಾಡಿಗಳಲ್ಲಿ ಬಿಜೆಪಿ ಕಾರ್ಯಕರ್ತರು ಬಂದು ಹೋಗುತ್ತಿದ್ದಾರೆ. ಜಯನಗರ ಶಾಸಕ ವಿಜಯಕುಮಾರ್ ಒಂದು ದಿನ ಕಾರ್‌ಗಳು ಹಾಗೂ ಕಾರ್ಯಕರ್ತರನ್ನು ಅರೇಂಜ್ ಮಾಡಿದರೆ ಇನ್ನೊಂದು ದಿನ ಪಿ.ಸಿ. ಮೋಹನ್, ಮಗದೊಂದು ದಿನ ಕಟ್ಟಾನಾಯ್ಡು ಹೀಗೆ ನಡಿದಿದೆ ಬಿಜೆಪಿ ಪ್ರಚಾರ. ಇದರ ಜೊತೆಗೆ ಚಿತ್ರದುರ್ಗ, ಶಿರಾ, ಕೊರಟಗೆರೆಗಳಿಂದಲೂ ಬಿಜೆಪಿಗಳು ನಿತ್ಯ ಮಧುಗಿರಿ ಪ್ರವಾಸ ಮಾಡುತ್ತಿದ್ದಾರೆ.

ಚೆನ್ನಿಗಪ್ಪನಂತೂ ಮನೆಮನೆಗೂ ಹೋಗಿ ಒಂದು ಪಾಂಪ್ಲೆಟ್ಟು ಜೊತೆಗೆ ಸಾವಿರ ರೂಪಾಯಿ ನೋಟು ಕೊಟ್ಟು ಹೋಗುತ್ತಿದ್ದಾನೆ. ಮಧುಗಿರಿಯ ಇನ್ನೊಂದು ವಿಶೇಷ ಏನೆಂದರೆ ಖುದ್ದು ಪೊಲೀಸ್ ಜೀಪ್‌ಗಳೇ ಬಿಜೆಪಿ ಪರವಾಗಿ ಲಿಕ್ಕರ್ ಸರಬರಾಜು ಮಾಡುತ್ತಿವೆ. ಎಲೆಕ್ಷನ್ ಖರ್ಚಿನ ಲೆಕ್ಕ ತಪ್ಪಿಸಲು ಶಂಕರ ಮಠದೊಳಗೆ ಪ್ರತಿದಿನ ಒಂದು ಸಾವಿರ ಕಾರ್ಯಕರ್ತರಿಗೆ ಊಟ ಹಾಕಿಸುತ್ತಾ ಎಚ್. ನರಸಿಂಹಯ್ಯ ಸಭಾಭವನದಲ್ಲಿ ವಸತಿ ಏರ್ಪಾಡು ಮಾಡಿಕೊಂಡಿದ್ದಾರೆ. ಯಾರಾದರೂ ಬಂದು ಯಾರು ಈ ಜನ ಅಂತ ಕೇಳಿದರೆ 'TV 9 ನವರು' ಎಂಬ ರೆಡಿಮೇಡ್ ಉತ್ತರ ಸಿಗುತ್ತಿದೆ. ಕಾಂಗ್ರೆಸ್ ರಾಜಣ್ಣರಿಗೆ ಈ ಬಾರಿ ಬ್ಯಾಡ್ ಲಕ್ ಕಾದಿರುವಂತಿದೆ. ಒಂದು ವೇಳೆ ಅನಿತಾ ಕುಮಾರಸ್ವಾಮಿ ಸ್ಪರ್ಧಿಸದೆ ಹೋಗಿದ್ದರೆ ರಾಜಣ್ಣ ಗೆಲ್ಲುವುದು ಗ್ಯಾರಂಟಿಯಿತ್ತು, ಆದರೆ ಪರಿಸ್ಥಿತಿ ಈಗ ಅದಲುಬದಲಾಗಿದೆ. ಅನಿತಾ ಹಾಗೂ ಚೆನ್ನಿಗಪ್ಪಗೆ ಹೋಲಿಸಿದರೆ ಕಾಂಗ್ರೆಸ್‌ನ ರಾಜಣ್ಣರಿಗೆ ಹಣದ ಬಲ ಕಡಿಮೆ. ಹಾಗಾಗಿ ಕಾರ್ಯಕರ್ತರ ಉತ್ಸಾಹ ಇಳಿದಿದೆ, ಜೊತೆಗೆ ಲೋಕಲ್ ಲೀಡರ್‌ಗಳೆಲ್ಲಾ ಥೇಟ್ ಕೋತಿಗಳಂತೆ ಬೇರೆ ಪಕ್ಷದತ್ತ ನೆಗೆಯುತ್ತಿದ್ದಾರೆ. ತೀರಾ ಇತ್ತೀಚೆಗೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀನಿವಾಸಮೂರ್ತಿ ಹಾಗೂ ಜಿಲ್ಲಾ ಪಂಚಾಯ್ತಿ ಸ ಕೃಷ್ಣಾರೆಡ್ಡಿ ಬಿಜೆಪಿ ಸೇರಿದ್ದಾರೆ. ಇದೊಂದು ಅನುಕೂಲ ಅಂದುಕೊಂಡ ಚೆನ್ನಿಗಪ್ಪನಿಗೆ ಈಗಲೂ ನೆಮ್ಮದಿ ಇಲ್ಲ, ಅವನ ಪುಂಡಪುತ್ರ ಗೌರಿಶಂಕರನ ಕೆಲವು ಹಳ್ಳಿಗಳ ಒಳಕ್ಕೆ ಬರಲು ಜನ ಅವಕಾಶ ಕೊಟ್ಟಿಲ್ಲ, ಈ ಮೋಸಗ ಅಪ್ಪ-ಮಗನ ಮೇಲೆ ಜನರಿಗೆ ಏನೇನೊ ಕೋಪಗಳಿವೆ.

ಅನಿತಾ ಕುಮಾರಸ್ವಾಮಿಗೆ ಇವೆಲ್ಲಾ ಪ್ಲಸ್ ಪಾಯಿಂಟ್‌ಗಳೇ. ಪೈಪೋಟಿ ಅಂತಿಮವಾಗಿ ಅನಿತಾ ಹಾಗೂ ಚೆನ್ನಿಗಪ್ಪ ನಡುವೆ ಎಂಬ ರೂಪ ತಳೆಯುತ್ತಿದೆ. ಒಕ್ಕಲಿಗರ ಓಟುಗಳು ಹಂಚಿಹೋಗದೆ ಅನಿತಾ ಬೀಳುವ ಸಾಧ್ಯತೆಗಳು ಕಾಣುತ್ತಿವೆ. ಇನ್ನು ಕ್ಷೇತ್ರದ ಮಹಿಳೆಯರಂ ಅನಿತಾ ಕೊಡುವುದು ನೂರೇ ರೂಪಾಯಿಯಾದರೂ ಅದನ್ನೇ ಕಣ್ಣಿಗೆ ಕೊಂಡು ತೆಗೆದುಕೊಳ್ಳುತ್ತಿದ್ದಾರೆ. ಈ ಬಾರಿ ಮಧುಗಿರಿಯ ಬಹುತ ಮಹಿಳೆಯರ ಚಿತ್ತ ಅನಿತಾರತ್ತ ವಾಲಿದೆ. ಇನ್ನೊಂದೆಡೆ ಕಾಂಗ್ರೆಸ್ ಕ್ಯಾಂಡಿಡೇ ವೀಕಾಗಿ ಕಾಣುತ್ತಿರುವುದರಿಂದ. ಮುಸ್ಲಿಮರು ಹಾ ಕ್ರಿಶ್ಚಿಯನ್ನರು ಬಿಜೆಪಿ ಗೆಲ್ಲಬಾರದೆಂದು ಸಾಲಿಡ ಜೆಡಿಎಸ್‌ಗೆ ಓಟು ಹಾಕುವ ತೀರ್ಮಾನ ಮಾ ತ್ತಿದ್ದಾರೆ.




ಮಧುಗಿರಿ ತುಂಬಾ ಎಲ್ಲೇ ಹೋದ ಈಗ ಒಂದೇ ಘೋಷಣೆ: ಬಿಜೆಪಿ ನೋ ಜೆಡಿಎಸ್‌ಗೆ ಓಟು! ಈ ಮಧ್ಯೆ 60 ಎತ್ತಿಕೊಂಡು ಓಡಿಹೋಗಿರುವ ಬಿಜೆಪಿ ನಾಂ ಚಂದ್ರು ಇನ್ನೂ ಸಿಕ್ಕಿಲ್ಲ, ಯಡ್ಡಿ ಪಟಾಲಂ ಅವ ಹುಡುಕುತ್ತಲೂ ಇಲ್ಲ.

ಹಡಬೆ ಹಣದಲ್ಲಿ ಎಲೆಕ್ ಮಾಡುವವರಿಗೆ 60 ಲಕ್ಷ ಒಂ ಲೆಕ್ಕವೆ ಹೇಳಿ?

ಚಿಮ್ಮನಕಟ್ಟಿಯ ಬದಾಮಿ ಶುಗರ್ಸ್

ಗೋವಿಂದಾ, ಗೋವಿಂದಾ!



ಮಾಜಿ ಮಂತ್ರಿ ಬಿ.ಬಿ.ಚಿಮ್ಮನಕಟ್ಟಿಯ ಬದಾಮಿ ಶುಗರ್ಸ್ ಮುಳುಗುತ್ತಿದೆ.

ಅದೂ ಕೋಟಿ ಕೋಟಿ ರೈತರ ಹಣದೊಂದಿಗೆ.

ಇದು ಅನಿರೀಕ್ಷಿತವೇನಲ್ಲ.

ತಾನು ಶುಗರ್ಸ್ ಫ್ಯಾಕ್ಟರಿ ಕಟ್ಟಿ ಈ ಭಾಗದ ರೈತರನ್ನು ಉದ್ಧಾರ ಮಾಡುತ್ತೇನೆಂದು ಈತ ಹೊರಟಾಗಲೇ ಇಲ್ಲಿನ ಜನ ಇವನ ರೈತಪರ ಕಾಳಜಿಯ ಬಗ್ಗೆ ಸಂಶಯ ವ್ಯಕ್ತಪಡಿಸಿದ್ದರು. ಯಾಕೆಂದರೆ ತನ್ನ ಕುಟುಂಬ ಮತ್ತು ಬಂಧು ಬಳಗದವರನ್ನು ಹೊರತುಪಡಿಸಿ ಯಾರನ್ನೂ - ಕನಿಷ್ಠ ತನ್ನ ಬೆಂಬಲಿಗರನ್ನೂ - ಉದ್ಧಾರ ಮಾಡುವ ಗೋಜಿಗೆ ಹೋಗದ ವ್ಯಕ್ತಿ ಈತ.


ಅಂದು ಇವನ ಬಣ್ಣದ ಮಾತುಗಳನ್ನು ನಂಬಿ ತಮ್ಮ ಜಮೀನು, ಪ್ಲಾಟುಗಳು, ಇದ್ದಬದ್ದ ಆಸ್ತಿ ಪಾಸ್ತಿಗಳನ್ನೆಲ್ಲ ಅಡ ಇಟ್ಟು ಸಾಲ ತಂದು ಈ ಬದಾಮಿ ಶುಗರ್ಸ್ ಎಂಬ ಟೈಟಾನಿಕ್‌ಗೆ ಸುರಿದಿರುವ ಜನರೆಲ್ಲ ಇಂದು ಬಾಯಿ ಬಾಯಿ ಬಡಿದುಕೊಳ್ಳುತ್ತಿದ್ದಾರೆ; ಇವನ ಮಾತನ್ನು ನಂಬಿದ ತಪ್ಪಿಗೆ ಪರಿತಪಿಸುತ್ತಿದ್ದಾರೆ.

ವಸಾಹತು ಕೇಂದ್ರವನ್ನೇ ನುಂಗಿದ

ಅಪ್ಪಟ ಧನದಾಹಿಯಾದ ಚಿಮ್ಮನಕಟ್ಟಿ ಮೂಲತಃ ಈ ಬದಾಮಿ ಶುಗರ್ಸನ್ನು ಕಟ್ಟುವ ಕಾರ್ಯಕ್ಕೆ ಚಾಲನೆ ನೀಡಿದ್ದೇ ಜನರನ್ನು ವಂಚಿಸುವ ಮೂಲಕ. ಅತ್ಯಂತ ಹಿಂದುಳಿದಿರುವ ಬದಾಮಿ ತಾಲೂಕಾ ಕೇಂದ್ರಕ್ಕೆ ಸರಿಯಾದ ಒಂದು ಮಾರುಕಟ್ಟೆ ಕೂಡ ಇರಲಿಲ್ಲ, ಆಗ ಇಲ್ಲಿನ ಕೆಲ ವ್ಯಾಪಾರಸ್ಥರು ಸೇರಿಕೊಂಡು ಒಂದು ಮಳಿಗೆಯನ್ನಾದರೂ ಕಟ್ಟಬೇಕೆಂದು ಉದ್ದೇಶಿಸಿ ಚಾಲುಕ್ಯ ಕೈಗಾರಿಕಾ ವಸಾಹತು ಕೇಂದ್ರ ಎಂಬ ಸಹಕಾರಿ ಸೊಸೈಟಿಯೊಂದನ್ನು ಕಟ್ಟಿಕೊಂಡರು. ಅವರ ಉದ್ದೇಶ ತಮ್ಮ ಸೊಸೈಟಿಗೊಂದು ಕಟ್ಟಡ ಕಟ್ಟಿಕೊಂಡು ಅದರಡಿ ಮಳಿಗೆಗಳನ್ನು ಕಟ್ಟಿಸಿ ಅವುಗಳನ್ನು ಕಡಿಮೆ ದರದಲ್ಲಿ ವ್ಯಾಪಾರಸ್ಥರಿಗೆ ನೀಡುವುದಾಗಿತ್ತು.

ಆದರೆ ಅವರೆಲ್ಲ ಸೇರಿ ಒಂದು ತಪ್ಪು ಮಾಡಿದರು. ಆಗ ಶಾಸಕನಾಗಿದ್ದ ಚಿಮ್ಮನಕಟ್ಟಿ ಸರಕಾರದಿಂದ ಬರಲಿರುವ ಸೌಲತ್ತುಗಳನ್ನು ಕೊಡಿಸಿ ಏನಾದರೂ ಸಹಾಯ ಮಾಡಬಹುದು ಎಂದು ನಂಬಿ ಇವನನ್ನು ಈ ಸೊಸೈಟಿಗೆ ಅಧ್ಯಕ್ಷನನ್ನಾಗಿ ಮಾಡಿದರು. ಯಾವತ್ತೂ ನರಿ ಬುದ್ಧಿಯನ್ನೇ ಪ್ರದರ್ಶಿಸುತ್ತ ಬಂದಿದ್ದ ಈತ ಅವರ ನಂಬಿಕೆಯನ್ನೇ ಬಳಸಿಕೊಂಡು ಎಲ್ಲರಿಗೂ ಕಡಿಮೆ ದರದಲ್ಲಿ ಮಳಿಗೆಗಳನ್ನು ಕಟ್ಟಿಸಿ ಕೊಡುವುದಾಗಿ, ಅದಕ್ಕೆ ಜಾಗ ಖರೀದಿ ಮಾಡುವುದಾಗಿ ಹೇಳಿ ಎಲ್ಲ ವ್ಯಾಪಾರಸ್ಥರಿಂದ ಹಣ ವಸೂಲಿಗೆ ನಿಂತ. ಇವನನ್ನು ನಂಬಿದ ಸಣ್ಣಪುಟ್ಟ ವ್ಯಾಪಾರಸ್ಥರೆಲ್ಲ ತಲಾ 5000 ದಿಂದ 6000 ರೂಪಾಯಿಗಳವರೆಗೆ ತಂದು ಕೈಗಿಟ್ಟರು. ಹೀಗೆ ಜನರಿಂದ ಲಕ್ಷಾಂತರ ರೂಪಾಯಿ ಸಂಗ್ರಹಿಸಿ ವಸಾಹತು ಕೇಂದ್ರದ ಹೆಸರಲ್ಲಿ ಜಮೀನನ್ನೇನೋ ಖರೀದಿಸಲಾಯಿತು. ಆದರೆ ಹಣ ಕೊಟ್ಟವರು ಕಾದದ್ದೇ ಬಂತು. ದೂ(ದು)ರಾಲೋಚನೆ ಮಾಡಿದ್ದ ಈ ಆಸಾಮಿ ವ್ಯಾಪಾರಸ್ಥರು ಎಷ್ಟೇ ದುಂಬಾಲು ಬಿದ್ದರೂ ಮಳಿಗೆಗಳನ್ನು ಮಾತ್ರ ಕಟ್ಟಿಸಿಕೊಡಲಿಲ್ಲ.

ಅಷ್ಟರಲ್ಲೇ ಈತ ಮಂತ್ರಿಯಾಗಿ ತನ್ನ ಅಧ್ಯಕ್ಷಗಿರಿಯನ್ನು ಐ.ಎಸ್.ಹುನಗುಂದಿ ಎಂಬುವವರಿಗೆ ಬಿಟ್ಟುಕೊಟ್ಟು ಆ ಜಾಗದಲ್ಲಿ ಏನೂ ನಿರ್ಮಾಣವಾಗದಂತೆ ನೋಡಿಕೊಂಡ. ಈತನ ಕಿರುಕುಳದಿಂದ ಬೇಸತ್ತ ಹುನಗುಂದಿ ರಾಜೀನಾಮೆ ನೀಡಿದಾಗ ತನ್ನ ಬೆಂಬಲಿಗನಾದ ಟಿ.ಆರ್.ಗೌಡರನ್ನು ಅಧ್ಯಕ್ಷರನ್ನಾಗಿ ಮಾಡಿ ಮತ್ತೇ ಆ ಜಮೀನಿನ ಮೇಲಿನ ಹಿಡಿತವನ್ನು ಮುಂದುವರೆಸಿದ. ಇವನ ನೀಚತನವನ್ನು ಅರಿತಿದ್ದ ಜನ ನಂತರ ಬಂದ ಚುನಾವಣೆಯಲ್ಲಿ ಇವನನ್ನು ಮನೆಗೆ ಕಳುಹಿಸಿ ಅನಿವಾರ್ಯವಾಗಿ ಎಂ.ಕೆ.ಪಟ್ಟಣಶೆಟ್ಟಿ ಎಂಬ ಕೋಮುವಾದಿಯನ್ನು ಶಾಸಕರನ್ನಾಗಿಸಿದರು.



ಸೋತು ಮೂಲೆ ಸೇರಿದ ನಂತರ ಬರುವ ಹಡಬೆ ಆದಾಯ ನಿಂತು ಹೋಗಿದ್ದರಿಂದ ನೇರ ರೈತರನ್ನೂ, ವ್ಯಾಪಾರಸ್ಥರನ್ನೂ ಒಟ್ಟಿಗೆ ಮುಳುಗಿಸುವ ಸ್ಕೆಚ್ಚೊಂದನ್ನು ಹಾಕಿದ.

ಅದುವೇ ಈ ಬದಾಮಿ ಶುಗರ್ಸ್.

ಈತನ ಕುಟುಂಬದವರು ಮತ್ತು ಹಿಂಬಾಲಕರೇ ನಿರ್ದೇಶಕ ಮಂಡಳಿಯಲ್ಲಿದ್ದ ಬದಾಮಿ ಶುಗರ್ಸ್‌ನ್ನು ಕಟ್ಟುವ ಕೆಲಸ ಆರಂಭವಾಗಿದ್ದು ವ್ಯಾಪಾರಸ್ಥರಿಗೆಂದು ಖರೀದಿಸಿದ್ದ ಚಾಲುಕ್ಯ ವಸಾಹತು ಕೇಂದ್ರದ ಜಮೀನಿನಲ್ಲೇ. ಈ ಕೇಂದ್ರಕ್ಕೆ ಅಧ್ಯಕ್ಷನಾಗಿದ್ದ ಟಿ.ಆರ್.ಗೌಡರನ್ನೇ ಈ ಶುಗರ್ಸ್‌ಗೆ ನಿರ್ದೇಶಕನ್ನಾಗಿ ಮಾಡಿಕೊಂಡ ಚಿಮ್ಮನಕಟ್ಟಿ ಆತನನ್ನು ಬಳಸಿಕೊಂಡು ಕೇಂದ್ರದ ಜಾಗವನ್ನು ಅನಾಮತ್ತಾಗಿ ತನ್ನ ಫ್ಯಾಕ್ಟರಿ ಹೆಸರಿಗೆ ಮಾಡಿಕೊಂಡ. ಅಷ್ಟರಲ್ಲಿ ಈ ವಸಾಹತು ಕೇಂದ್ರದಲ್ಲಿ ತನ್ನನ್ನು ವಿರೋಧಿಸುವ ಯಾರನ್ನೂ ಉಳಿಸಿಕೊಂಡಿರಲಿಲ್ಲವಾದ್ದರಿಂದ ಒಳಗಿನಿಂದ ಯಾವ ಪ್ರತಿರೋಧವೂ ಬರಲಿಲ್ಲ, ಹಣ ಕೊಟ್ಟ ವ್ಯಾಪಾರಸ್ಥರು ಈ ಬಗ್ಗೆ ವಿಚಾರಿಸಿದರೆ ತನ್ನ ಹಿಂಬಾಲಕರ ಮೂಲಕ ಹೆದರಿಸಿ ಬಾಯಿ ಮುಚ್ಚಿಸಿ ಬಿಟ್ಟ.

ರೈತರ ಹೆಸರಿನಲ್ಲಿ ಸಾಲ

ಹೀಗೆ ವ್ಯಾಪಾರಸ್ಥರ ದುಡ್ಡಿನಿಂದ ಖರೀದಿಸಿದ ಜಮೀನನ್ನು ಫ್ಯಾಕ್ಟರಿ ಹೆಸರಲ್ಲಿ ನೋಂದಾಯಿಸಿಕೊಂಡ ನಂತರ 28 ಕೋಟಿಗೆ Estimate ಮಾಡಿ ಫ್ಯಾಕ್ಟರಿ ಮುಗಿಸಿ ಕೊಡಲು ಭಾರಿ ಕೈಗಾರಿಕಾ ಸಚಿವ ಮುರುಗೇಶ ನಿರಾಣಿಯ ಆಪ್ತನಾಗಿರುವ ಶ್ರೀಕಾಂತ ಎಂಬುವವನಿಗೆ ಒಪ್ಪಿಸಿ ಆ ಹಣಕ್ಕಾಗಿ ಎತ್ತುವಳಿ ಆರಂಭಿಸಿದ. ನಿರ್ದೇಶಕರಾಗಿದ್ದ ರಾಜಮಹ್ಮದ ಭಾಗವಾನ, ಟಿ.ಆರ್.ಗೌಡರ, ಆರ್.ಡಿ.ದಳವಾಯಿ, ಟಿ.ಎಸ್.ಹುನಗುಂದಿ, ಲಕ್ಷ್ಮಣ ಕಮತರ ಮುಂತಾದವರ ಜಮೀನು, ಆಸ್ತಿಪಾಸ್ತಿಯನ್ನೆಲ್ಲ ಅಡ ಇಟ್ಟು ತಲಾ ಇಪ್ಪತ್ತೈದು ಲಕ್ಷದಂತೆ ಬೀಳಗಿ ಸಹಕಾರಿ ಬ್ಯಾಂಕ್, ಬಸವೇಶ್ವರ ಸಹಕಾರಿ ಬ್ಯಾಂಕ್, ಡಿಸಿಸಿ ಬ್ಯಾಂಕ್‌ಗಳಲ್ಲಿ ಸಾಲ ಎತ್ತಿದ. ಅಷ್ಟೇ ಅಲ್ಲದೇ ಹಲವಾರು ರೈತರಿಗೆ ಗೊತ್ತೇ ಇಲ್ಲದಂತೆ ಅವರ ಜಮೀನುಗಳ ಮೇಲೆ ಬೇರೆ ಬೇರೆ ಬ್ಯಾಂಕುಗಳಲ್ಲಿ ಸಾಲ ಮಾಡಿದ. ಇದರ ಜೊತೆಗೆ ಬೆಂಗಳೂರಿನ ಗ್ಲೋಬಲ್ ಬ್ಯಾಂಕ್, ಶಿರಸಿ, ಕಾರವಾರ, ಮುಂತಾದ ಬ್ಯಾಂಕುಗಳಿಂದಲೂ ಸಾಲ ತಂದು ಸುರಿದ.

ಆದರೆ ಅಪ್ಪಿ-ತಪ್ಪಿಯೂ ತನ್ನ ಕೈಯಿಂದ ನ ಯಾಪೈಸೆ ಸ್ವಂತ ದುಡ್ಡು ಹಾಕಲಿಲ್ಲ, ಬದಲಿಗೆ ಫ್ಯಾಕ್ಟರಿ ಹೆಸರಲ್ಲಿ ಎತ್ತಿದ ಹಣದಲ್ಲೇ ಸಾಕಷ್ಟು ಹಣ ತಿಂದು ತೇಗಿದ. ಕೊನೆಗೆ ಸಿಕ್ಕ ಸಿಕ್ಕ ಕಾರ್ಖಾನೆಗಳಿಂದ ಹಳೆ ಸಾಮಾನು ತಂದು ಜೋಡಿಸಿ ಫ್ಯಾಕ್ಟರಿ ಆರಂಭಿಸಿದ.

ರೈತರ ಬಿಲ್ ಗುಳುಂ

ಹೇಗೋ ತೆವಳಿಕೊಂಡು ಫ್ಯಾಕ್ಟರಿ ಆರಂಭವಾಯ್ತು. ಅಷ್ಟೇ ಎಂದು ನಿಟ್ಟುಸಿರು ಬಿಟ್ಟ ಈ ಭಾಗದ ರೈತರು ತಾವು ಬೆಳೆಯ ಸಾಂಪ್ರದಾಯಿಕ ಆಹಾರ ಬೆಳೆಗಳನ್ನು ಕೈಬಿಟ್ಟು ಕಬ್ಬು ಬೆಳೆಯಲಾರಂಭಿ ರಕ್ತ-ಬೆವರು ಸುರಿದು ಕಬ್ಬು ಬೆಳೆದು ಫ್ಯಾಕ್ಟರಿಗೆ ಸಾಗಿಸಿ ತಿಂಗಳುಗ ಕಾದರೂ ಬಿಲ್ ಮಾತ್ರ ಬರಲೇ ಇಲ್ಲ, ಕೇಳಿಕೇಳಿ ರೋಸಿಹೋದ ರ ಕಳೆದ ವಿಧಾನಸಭಾ ಚುನಾವಣಾ ಸಂದರ್ಭದಲ್ಲೇ ಇವನ ವಿ ಪ್ರತಿಭಟನೆಗಿಳಿದು ಚುನಾವಣೆಯಲ್ಲಿ ಈತನಿಗೆ ಮಣ್ಣು ತಿನ್ನಿಸಿದರು. ಆಗಲೂ ಬಿಲ್ ಪಾವತಿ ಆಗಲಿಲ್ಲ.

ರೈತರು ತಮ್ಮ ಹೋರಾಟವನ್ನು ಮುಂದುವರೆಸಿ ಒತ್ತಡ ಹೇರತೊಡ ಗೋದಾಮಿನಲ್ಲಿ ಸಕ್ಕರೆ ಇದೆ ಎಂದು ಹೇಳಿ ಡಿಸಿಸಿ ಬ್ಯಾಂಕ್‌ನಿಂದ ಮೇಲೆ ಸಾಲ ಮಾಡಿ ಚೂರುಪಾರು ಬಿಲ್ಲುಗಳನ್ನು ಪಾವತಿಸಿ ಸಾಗಹಾಕ ದರೂ ರೈತರ ಪ್ರತಿರೋಧ ನಿಂತಿಲ್ಲ, ಅಸಲಿ ವಿಚಾರ ಏನೆಂದರೆ ಗೋದಾ ಸಕ್ಕರೆ ದಾಸ್ತಾನು ಇರಲೇ ಇಲ್ಲ, ಸಕ್ಕರೆ ಇದೆ ಎಂದು ಸುಳ್ಳು ಹೇಳಿ ಪಡೆದಿದ್ದಾನೆ. ಸರಿಯಾಗಿ ನೋಡದೇ ಇವನನ್ನು ನಂಬಿ ಸಾಲ ನಿ ಇಬ್ಬರು ಡಿಸಿಸಿ ಬ್ಯಾಂಕ್ ಅಧಿಕಾರಿಗಳು ಸಸ್ಪೆಂಡ್ ಆಗಿ ಮನೆ ಸೇರಿದ್ದಾರ ತಮಗೆ ಬರಬೇಕಾದ 9 ಕೋಟಿಗೂ ಹೆಚ್ಚು ಮೊತ್ತದ ಬಿಲ್‌ಗಾಗಿ ತೀವ್ರ ಹೋರಾಟದ ಹಾದಿ ತುಳಿದಿದ್ದಾರೆ. ಮತ್ತೊಂದೆಡೆ ರೈತರ ಮೇಲೆ ಎತ್ತಿದ ಸಾಲದ ಬಡ್ಡಿ ದಿನೇ ದಿನೇ ಏರತೊಡಗಿದೆ. ಆಸ್ತಿ ಅ ರೈತರಿಗೆ ಸರ್ಕಾರದ ಯಾವುದೇ ಸೌಲಭ್ಯಗಳು ಲಭ್ಯವಾಗುತ್ತಿಲ್ಲ. ಆ ಆಸ್ತಿ ಅಡವಿಟ್ಟ ರೈತರು ತಮ್ಮ ಆಸ್ತಿ ಬಿಡಿಸಿ ಕೊಡುವಂತೆ ಬೆನ್ನು ಬಿ

ಈ ಎಲ್ಲ ಒತ್ತಡಗಳಿಂದ ಕಂಗಾಲಾಗಿರುವ ಚಿಮ್ಮನಕಟ್ಟಿ ಅ ಕೈಕಾಲು ಹಿಡಿದು ಸಮಸ್ಯೆ ಬಗೆಹರಿಸುವಂತೆ ಕೇಳಿಕೊಳ್ಳುತ್ತಿದ್ದಾನೆ. ಏನೂ ಪ್ರಯೋಜನವಾಗಿಲ್ಲ, ಆದ್ದರಿಂದ ಈಗ ಫ್ಯಾಕ್ಟರಿಯನ್ನು ಸಹಭಾಗಿ ನಡೆಸುವುದು ಅಥವಾ ಮಾರಾಟ ಮಾಡಿ ರೈತರ ಬಿಲ್ಲು ಪಾವತಿಸುವ ಹೇಳಿಕೊಂಡು ತಿರುಗುತ್ತಿದ್ದಾನೆ. ಆದರೆ ಇವನ ನಯವಂಚಕತನ, ಹೆಸರಿನಲ್ಲಿ ಮಾಡಿದ ಭಾನಗಡಿಗಳೆಲ್ಲವೂ ಒಂದೊಂದಾಗಿ ಬೀಳುತ್ತಿರುವುದರಿಂದ ಯಾರೂ ಸಹ ಇದರಲ್ಲಿ ಪಾರ್ಟನರ್‌ಶಿಪ್ ಪಡೆ ಮುಂದೆ ಬರುವ ಸಾಧ್ಯತೆ ಇಲ್ಲ, ಹೀಗಾಗಿ ಈ ಚಿಮ್ಮನಕಟ್ಟಿ ರೈತರ ಸುರಿದು ಕಟ್ಟಿದ, ಅದರಲ್ಲಿ ತಾನೂ ಉಂಡು ದುಂಡಗಾದ, ರೈತರ ಬದಾಮಿ ಶುಗರ್ಸ್ ಇಷ್ಟರಲ್ಲೇ ಮುಚ್ಚಿ ಹೋಗಲಿದೆ. ಅದರೊಂದಿಗೆ ಹಾಕಿದ ದುಡ್ಡೂ ಸಹ ಮುಳುಗಲಿದೆ.

■ ಆಲಬಾಳ ಮಹಾಲಿ

ಸಕ್ಕರೆ ರಾಜಕಾರಣದ ಅನೈತಿಕ ಮೈತ್ರಿ

ಬಾಗಲಕೋಟೆ ಜಿಲ್ಲೆಯ ಶುಗರ್ಸ್ ಮಾಫಿಯಾವನ್ನು ಸಂಪೂರ್ಣವಾಗಿ ರಾಜಕಾರಣಿಗಳೇ ನಿಯಂತ್ರಿಸುತ್ತಾರೆ. ಚುನಾವಣೆ ಸಂದರ್ಭದಲ್ಲಿ ಒ ಮೇಲೊಬ್ಬರು ಆರೋಪ ಪ್ರತ್ಯಾರೋಪಗಳಲ್ಲಿ ತೊಡಗಿ ಕಚ್ಚಾಡುತ್ತ ತಮ್ಮ ತಮ್ಮ ಪಕ್ಷ ನಿಷ್ಠೆಯನ್ನು ಪ್ರದರ್ಶಿಸುತ್ತಾರಾದರೂ ಒಳಗೊಳಗೆ ವ್ಯವಹಾರದಲ್ಲಿ ವ ಎಲ್ಲರೂ ಒಂದೇ ಆಗಿರುತ್ತಾರೆ.

ಉದಾಹರಣೆಗೆ ಕಾಂಗ್ರೆಸ್ ಪಕ್ಷದ ಚಿಮ್ಮನಕಟ್ಟಿಯ ಬದಾಮಿ ಶುಗರ್ಸ್‌ನಲ್ಲಿ ಬಿಜೆಪಿ ಮಿನಿಸ್ಟರ್ ಮುರು ನಿರಾಣಿಯ ಪಾಲೂ ಇದೆ. ಆತ ಕೂಡ ಈ ಫ್ಯಾಕ್ಟರಿಯ ನಿರ್ದೇಶಕನಾಗಿದ್ದ. ಇತ್ತೀಚೆಗೆ ತಾನು ರಾಜೀನಾ ನೀಡಿ ತನ್ನ ಪರವಾಗಿ ಮಧು ಯಡ್ರಾಮಿ ಎಂಬ ಆಪ್ತನನ್ನು ನಿರ್ದೇಶಕನನ್ನಾಗಿಸಿದ್ದಾನೆ.

ಎಸ್.ಆರ್.ಪಾಟೀಲ ಎಂಬ ಕಾಂಗ್ರೆಸ್ ಶಾಸಕನ ಫ್ಯಾಕ್ಟರಿಯಾದ ಬೀಳಗಿ ಶುಗರ್ಸ್‌ನಲ್ಲೂ ನಿರಾಣಿ ಪಾಲುದ ಅಚ್ಚರಿ ಎಂದರೆ ಕಳೆದ ವಿಧಾನಸಭಾ ಚುನಾವಣೆಯಲ್ಲಿ ನಿರಾಣಿ ವಿರುದ್ಧ ಇದೇ ಪಾಟೀಲ ಕಾಂಗ್ರೆಸ್ ಪರ ಪ್ರಚಾರ ನಡೆಸಿದ್ದ. ಕಾಂಗ್ರೆಸ್ ಶಾಸಕ ಸಿದ್ದು ನ್ಯಾಮಗೌಡನ ಜಮಖಂಡಿ ಶುಗರ್ಸ್‌ನಲ್ಲಿ ಬಿಜೆಪಿಯ ಸಚಿವ ಲ ಸವದಿಯ ಪಾಲುದಾರಿಕೆ ಇದೆ. ಯಾವುದೇ ಪಕ್ಷದ ಸಿದ್ಧಾಂತವನ್ನು ಮೈಗೂಡಿಸಿಕೊಳ್ಳದ ಈ ಶುಗರ್ ರಾಜಕಾರಣಿಗಳು ವ್ಯವಹಾರದಲ್ಲಿನ ಲಾಭ ಒಂದಾಗಿಯೇ ಇದ್ದು ಚುನಾವಣೆ ಸಂದರ್ಭದಲ್ಲಿ ಮಾತ್ರ ಬೇರೆ ಬೇರೆ ಪಕ್ಷಗಳ ಸಿದ್ಧಾಂತ ಹೇಳಿಕೊಂಡು ಜನರನ್ನು ವಂಚಿಸುತ್ತಿದ್ದಾರೆ. ಇಂಥವರ ಬಗ್ಗೆ ಜ ಆದಷ್ಟು ಜಾಗೃತರಾಗಿರುವುದು ಒಳ್ಳೆಯದು.

ಪ್ರತಿ ಮತಗಟ್ಟೆಗೂ ಕನಿಷ್ಠ ಇಪ್ಪತ್ತೈದು ಲಕ್ಷ. ಹೋಬಳಿಗೊಂದರಂತೆ ಎಲ್ಲಾ ಹೋಬಳಿಗಳಲ್ಲಿ ದಿನಂಪ್ರತಿ ಬಾಡೂಟ. ಪ್ರತಿ ಕಾರ್ಯಕರ್ತನಿಗೂ ಐದಕ್ಕೆ ಸಾವಿರ ರೂಪಾಯಿ ಚಟ ಮತ್ತು ಒಂದು ಓಟಿಗೆ ಐನೂರು ರೂಪಾಯಿಯ ಗರಿಗರಿ ನೋಟು!

ಇದು ತುರುವೇಕೆರೆಯಲ್ಲಿ ಬಜೆಪಿ ಹರಿಸುತ್ತಿರುವ ಹಣದ ಹೊಳೆಗೆ ಕೆಲ ಸ್ಯಾಂಪಲ್ಲುಗಳಷ್ಟೆ. ಸಾರಿಗೆ ಮಂತ್ರಿ ಆರ್. ಅಶೋಕ್ ಜೊತೆ ನಟ ಜಗ್ಗೇಶ್ ನಿಂತು ಏನೆಲ್ಲಾ ಕಸರತ್ತು ಮಾಡಿದರೂ ಬಜೆಪಿ ಅಭ್ಯರ್ಥಿ ಎಂ.ಡಿ. ಲಕ್ಷ್ಮೀನಾರಾಯಣರ ಠಾವಿದೆಸೆ ಕುಂದುತ್ತಿಲ್ಲ. ಹೋದ ಚುನಾವಣೆಯಲ್ಲೇ ಜನ ಈತನ್ನ ಕ್ಯಾಕರಿಸಿ ಕಳಿಸಿದ್ದಾಗಿದೆ. ತನ್ನ ಜಾತಿಯವರು-ಸಂಬಂಧಿಗಳನ್ನು ಬಿಟ್ಟರೆ ಎಂಜಲ ಕೈಯಲ್ಲೂ ಕಾಗೆ ಓಡಿಸುವ ಗಿರಾಕಿ ಅಲ್ಲ; ಎಲ್ಲಿ ಸರ್ಕಾರಿ ಸಾರಾಯಿಗೆ ಕಾಸು ಬಿಚ್ಚಬೇಕಾಗುತ್ತದೋ ಎಂದು ಕಳೆದ ಚುನಾವಣೆಯಲ್ಲಿ ತನ್ನ ಮನೆಯಲ್ಲೇ ಕಳ್ಳಭಟ್ಟಿ ಕಾಯಿಸಿ ಹಂಚಿಸಿದಂಥ ಜಿಪುಣಾಗ್ರೇಸರ ಎಂ.ಡಿ. ಲಕ್ಷ್ಮೀನಾರಾಯಣ ಮಂತ್ರಿ ಕಟ್ಟಾನ ಜೊತೆ ಸೇರಿ ಬೆಂಗಳೂರಿನಲ್ಲಿ ರಿಯಲ್ ಎಸ್ಟೇಟ್ ದಂಧೆ ಮಾಡಿ, ನಿವೇಶನದಾರರಿಗೆ ಪಂಗನಾಮ ಹಾಕಿದ್ದು ಬಿಟ್ಟರೆ ತುರುವೇಕೆರೆಗೆ ಮಾಡಿದ್ದು ಅಷ್ಟರಲ್ಲೇ ಇದೆ.

ಈ ಥರದ ಪ್ರತೀತಿಯನ್ನು ಬೆನ್ನಿಗಿಟ್ಟುಕೊಂಡೇ ಬಜೆಪಿಯ ಟಿಕೆಟ್ ಗಿಟ್ಟಿಸಿದ ಎಂಡಿಎಲ್ ಪರ ಬಜೆಪಿಯ ಯಾವೊಬ್ಬ ಕಾರ್ಯಕರ್ತನಿಗೂ ಒಳ್ಳೆಯ ಅಭಿಪ್ರಾಯವಿಲ್ಲ. ಮುಖ್ಯಮಂತ್ರಿ ಯಡಿಯೂರಪ್ಪ ತುರುವೇಕೆರೆಗೆ ಬಂದು ಸಿಟ್ಟಿಗೆದ್ದಿದ್ದ ಲಿಂಗಾಯತ ನಾಯಕರನ್ನು ಓಲೈಸದೇ ಹೋಗಿದ್ದರೆ, ಸಾರಿಗೆ ಮಂತ್ರಿ ಅಶೋಕ್ ಮತ್ತು ಜಗ್ಗೇಶ್ ನಿಂತು ರೊಕ್ಕ ಬಿಚ್ಚದೇ ಹೋಗುತ್ತಿದ್ದರೆ, ಸೊಗಡು ಶಿವಣ್ಣನಂಥ ಧೂರ್ತರು ಲಿಂಗಾಯತರ ಮಧ್ಯೆ ಪ್ರಕಾಶಿಗೆ ನಿಲ್ಲದೇ ಹೋಗಿದ್ದರೆ ಬಜೆಪಿಯ ಎಂಡಿಎಲ್‌ಗೆ ಜೈಕಾರ ಹಾಕುವುದಕ್ಕೂ ಜನರಿರುತ್ತಿರಲಿಲ್ಲ.

ಜಗ್ಗೇಶ್ ಕಾಂಗ್ರೆಸ್ಸಿಗೆ ಕೈಕೊಟ್ಟು ಬಜೆಪಿಗೆ ಹಾರಿದ್ದರಿಂದ ತುರುವೇಕೆರೆಯ ಕರ್ಮದಂತೆ ಜನ ಉಪಚುನಾವಣೆಗೆ ತಲೆ ಕೊಡಬೇಕಾಗಿದೆ. ಕಳೆದ ಚುನಾವಣೆಯಲ್ಲಿ ಬಜೆಪಿಯ ಎಂಡಿಎಲ್ ವಿರುದ್ಧ ಒಂಭತ್ತು ಸಾವಿರ ಮತಗಳ ಅಂತರದಿಂದ ಗೆದ್ದವರು ನಟ ಜಗ್ಗೇಶ್. ತಾಲ್ಲೂಕಿನ ಎರಡನೇ ಅತಿದೊಡ್ಡ ಸಂಖ್ಯೆಯ ಲಿಂಗಾಯತರೆಲ್ಲ ಬಜೆಪಿಯನ್ನು ಬೆಂಬಲಿಸಿದ್ದಾಗ್ಯೂ ಒಕ್ಕಲಿಗರ ಜಗ್ಗೇಶ್ ಗೆದ್ದರು. 16 ಸಾವಿರದಷ್ಟಿದ್ದ ಕುರುಬರು ಸಾರಾಸಗಟಾಗಿ ಕಾಂಗ್ರೆಸ್ಸನ್ನು ಬೆಂಬಲಿಸಿದ್ದು, ಬಹುಸಂಖ್ಯಾತ ಒಕ್ಕಲಿಗರ ಪೈಕಿ ಕನಿಷ್ಠ ಅರ್ಧದಷ್ಟಾದರೂ ಜಗ್ಗೇಶ್ ಹಿಂದೆ ನಿಂತಿದ್ದು ಮತ್ತು ದಲಿತರು, ಹಿಂದುಳಿದವರೆಲ್ಲ ಕಾಂಗ್ರೆಸ್ಸನ್ನು ಬೆಂಬಲಿಸಿದ್ದರಿಂದ ಜಗ್ಗೇಶ್ ಗೆದ್ದುಬಿಟ್ಟರು.

ಅಷ್ಟೆಲ್ಲಾ ಕಷ್ಟಪಟ್ಟು ಗೆಲ್ಲಿಸಿದ ಜಗ್ಗೇಶ್ ಬಜೆಪಿಗೆ ನೆಗೆದದ್ದು ಇಡೀ ತಾಲ್ಲೂಕಿನ ಮತದಾರರ ಮುಖಕ್ಕೆ ಕ್ಯಾಕರಿಸಿ ಉಗಿದಂತಾಗಿತ್ತು. ಈಗ ಅದೇ ಜಗ್ಗೇಶ್ ಸಾರಿಗೆ ಮಂತ್ರಿ ಅಶೋಕ್ ಜೊತೆ ಹಳ್ಳಿಹಳ್ಳಿ ಸುತ್ತುತ್ತಿದ್ದರೆ ಜನ ಗೇಲಿ ಮಾಡಿ ಬಿಟ್ಟಿ ಜೋಕ್ ಮಾಡುತ್ತಿದ್ದಾರೆಯೇ ಹೊರತು ಮರ್ಯಾದೆಯ ಮಾತೇ ಇಲ್ಲ. ಮಿಕ್ಕಂತೆ ಜಗ್ಗೇಶ್ ಹಿಂದಿರುವ ದಂಡೆಲ್ಲ ರೊಕ್ಕದ ಆಸೆಗೆ ಭೋಪರಾಕ್ ಹೇಳುವ ಪುಂಡರ ಗುಂಪಿನಂತಿದೆ. ಕಾಂಗ್ರೆಸ್ ಅಭ್ಯರ್ಥಿ ಎಚ್.ಬಿ. ನಂಜೇಗೌಡ ಜೆಡಿಎಸ್‌ನ ಎಂ.ಟಿ. ಕೃಷ್ಣಪ್ಪನವರ ಅನುಕೂಲಕ್ಕೆಂದೇ ಕಣಕ್ಕಿಳಿದ ಹರಕೆಯ ಕುರಿಯೆಂಬುದು ದನಕಾಯುವ ಪೋರನಿಗೂ ಗೊತ್ತು. ಹಿಂದೆ ಶಾಸಕನಾಗಿದ್ದು ಹಳ್ಳಿಗೆ ವಿದ್ಯುತ್ತಿಗೆಂದು ಟ್ರಾನ್ಸ್‌ಫಾರ್ಮರ್ ಹಾಕುವುದಕ್ಕೂ ಜನ ಲಂಚ ಸಂಗ್ರಹಿಸಿಕೊಡಬೇಕಿತ್ತು. ಅಧಿಕಾರಿಗಳಿಂದ ವಸೂಲಿ ಮಾಡಿದ್ದೂ ಇತ್ತು. ಒಂದಷ್ಟು ಮಂದಿ ಖದೀಮ ಕಾಂಟ್ರಾಕ್ಟರ್‌ಗಳನ್ನು ಉದ್ಧಾರ ಮಾಡಿದ್ದು ಬಿಟ್ಟರೆ ನಂಜೇಗೌಡರ ಬಗ್ಗೆ ಜನಕ್ಕೆ ದೊಡ್ಡ ನಿರೀಕ್ಷೆಗಳೇನೂ ಇಲ್ಲ.

ಆದರೆ ಜೆಡಿಎಸ್ ಅಭ್ಯರ್ಥಿ ಎಂ.ಟಿ. ಕೃಷ್ಣಪ್ಪ ಹಾಗಲ್ಲ. ಜನರೆದುರೇ ಅಧಿಕಾರಿಗಳನ್ನು ವಾಚಾಮಗೋಚರ ಬಯ್ಯುತ್ತಾರೆ. ಕಾರ್ಯಕರ್ತರನ್ನು ಮಾತಾಡಿಸುವಾಗಲೂ ಒರಟಾಗಿ ಕಾಣಿಸುತ್ತಾರೆ. ಹಾಗಂತ ತುರುವೇಕೆರೆಗೆ ಅವರು ತಂದ ಅಭಿವೃದ್ಧಿಯನ್ನು ಯಾರೂ ಅಲ್ಲಗಳೆಯುತ್ತಿಲ್ಲ. ಕುಮಾರಸ್ವಾಮಿಯ ಆಡಳಿತದಲ್ಲಿ ಕೇವಲ 30 ತಿಂಗಳ ಅವಧಿಯಲ್ಲಿ 320 ಕೋಟಿಯ ಕಾಮಗಾರಿಯ ಲೆಕ್ಕ ಕೊಡುವ ಕೃಷ್ಣಪ್ಪರ ಮಾತನ್ನು ಬದಿಗೊತ್ತಿ ನೋಡಿದರೂ ಯಾವೊಬ್ಬ ಶಾಸಕನೂ ಮಾಡದಷ್ಟು ಕಾಮಗಾರಿಗಳನ್ನು ಕೃಷ್ಣಪ್ಪ ಮಾಡಿಸಿದ್ದಾರೆ. 60 ಲಕ್ಷದ ಖರ್ಚಿನಲ್ಲಿ ಪ್ರವಾಸಿ ಮಂದಿರ, 75 ಲಕ್ಷದ ಕ್ರೀಡಾಂಗಣ, ಒಂದು ಕೋಟಿ ವೆಚ್ಚದಲ್ಲಿ ಹೊಸ ಬಸ್ ನಿಲ್ದಾಣ, 60 ಲಕ್ಷದ ಹೊಸ ಕೋರ್ಟ್ ಕಟ್ಟಡ, 50 ಲಕ್ಷದ ಪಟ್ಟಣ ಪಂಚಾಯ್ತಿ ಕಟ್ಟಡ, ಆರೂಕಾಲು ಕೋಟಿಯ ಕೊಳಚರಂಡಿ ಕಾಮಗಾರಿ, ಸೀಗೆಹಳ್ಳಿ, ತಂಡಗ ಮತ್ತು ತಾಳಿಕೆರೆಗಳ ಪವರ್ ಸ್ಟೇಷನ್ ಇತ್ಯಾದಿಗಳೆಲ್ಲ ಕೃಷ್ಣಪ್ಪ ತಂದ ಅಭಿವೃದ್ಧಿಯ ಮೂಕಸಾಕ್ಷಿಗಳಂತಿವೆ.

ಸ್ಥಳೀಯರಾದ ದಾನಿಗೌಡ, ಮುದ್ದ ಹನುಮೇಗೌಡ, ಭುವನಹಳ್ಳಿ ದೇವರಾಜ್ ಥರದವರೆಲ್ಲ ತಮಗೆ ಕಾಂಟ್ರಾಕ್ಟ್ ಕೊಡಿಸಲಿಲ್ಲ ಎಂದು ಮುನಿಸಿಕೊಂಡಿದ್ದು ಬಿಟ್ಟರೆ ತಾಲ್ಲೂಕಿನ ಹೊರಗಿನವರಿಗೆ ಕೃಷ್ಣಪ್ಪ ಕಾಂಟ್ರಾಕ್ಟ್ ಕೊಡಿಸಿದ್ದಕ್ಕೆ ಜನಸಾಮಾನ್ಯರಲ್ಲಿ ಸಿಟ್ಟೇನಿಲ್ಲ. ಹೀಗೆ ಕೃಷ್ಣಪ್ಪ ವಿರುದ್ಧ ಕಾಂಟ್ರಾಕ್ಟ್ ಸಂಬಂಧಿ ವೈರಕ್ಕಿಳಿದವರ ಪೈಕಿ ಬೆಳ್ಳಿಕಟ್ಟೆ ಮುದ್ದಹನುಮೇಗೌಡ ಮತ್ತು ತಾವರೆಕೆರೆ ದಾನಿಗೌಡ ಕಾಂಗ್ರೆಸ್ ಹೊಕ್ಕರೆ ಭುವನಹಳ್ಳಿ ದೇವರಾಜು ಜಗ್ಗೇಶ್ ಅನುಯಾಯಿಯಾಗಿ ಇವತ್ತಿಗೂ ಬಜೆಪಿಯಲ್ಲಿದ್ದಾನೆ. ಇದರ ಹೊರತಾಗಿ ನೋಡಿದರೆ ಬಜೆಪಿಗೆ ಸರಿಸಮನಾಗಿ ಪೈಪೋಟಿ ಕೊಡುತ್ತಿರುವುದು ಕೃಷ್ಣಪ್ಪನವರೆ.

ಅದಕ್ಕೆ ಮುಖ್ಯ ಕಾರಣ ಬಜೆಪಿ ಅಭ್ಯರ್ಥಿ ಎಂ.ಡಿ. ಲಕ್ಷ್ಮೀನಾರಾಯಣರ ಕುತಂತ್ರ ಮತ್ತು ಸ್ವಜನಪಕ್ಷಪಾತ. ಜಾತಿಯಲ್ಲಿ ದೇವಾಂಗ ಶೆಟ್ಟರ ಲಕ್ಷ್ಮೀನಾರಾಯಣ ಮೂಲತಃ ತುರುವೇಕೆರೆಯ ಮುನಿಯೂರಿನವರು. ಇಡೀ ತುರುವೇಕೆರೆಯಲ್ಲಿ ದೇವಾಂಗ ಶೆಟ್ಟರ ಸಂಖ್ಯೆ ನಾಲ್ಕು ಸಾವಿರಕ್ಕಿಂತಲೂ ಹೆಚ್ಚಿಲ್ಲ. ಪ್ರಾರಂಭದಲ್ಲಿ ಲಕ್ಷ್ಮೀನಾರಾಯಣರ ಬೆನ್ನಿಗೆ ನಿಂತು ಬಜೆಪಿಯನ್ನು ಕಟ್ಟಿದ ಅವರದೇ ಮುನಿಯೂರಿನ ಒಕ್ಕಲಿಗರಾದ ಮನು, ರಮೇಶ್, ತಿಮ್ಮೇಗೌಡ, ಕನ್ನಡ ಕಲಾಸಂಘದ ಶಿವಣ್ಣ, ಕಿರಣ್‌ಕುಮಾರ್ ಮುಂತಾದವರೆಲ್ಲ ಬಜೆಪಿಗೆ ಗುಡ್‌ಬೈ ಹೇಳಿ ಜೆಡಿಎಸ್ ಸೇರಿಕೊಂಡಿದ್ದಾರೆ. ಬಜೆಪಿಯ ನಿಷ್ಠಾವಂತ ಕಾರ್ಯಕರ್ತರಂತಿದ್ದ ಹುತ್ರಿಸಕೆರೆ ಅರುಣ್ ಕುಮಾರ್, ತಿಮ್ಮೇಗೌಡ, ಶಿವರಾಜು ಇತ್ಯಾದಿಗಳೆಲ್ಲ ಎಂಡಿಎಲ್ ಹೆಸರು ಕೇಳಿದರೇನೇ ಒದಿಶಾಪ ಹಾಕುತ್ತಾರೆ.

ಎಂಡಿಎಲ್ ಹುಟ್ಟಾ ಕುತಂತ್ರಿ ಮತ್ತು ಗರಿಬುದ್ಧಿಯ ಆಸಾಮಿ. ನಗುನಗುತ್ತಲೇ ಬತ್ತಿ ಇಟ್ಟನೆಂದರೆ ಗೊತ್ತಾಗುವುದು ಸುಟ್ಟ ನಂತರವೇ. ಪ್ರಾರಂಭದಲ್ಲೇ ಒಕ್ಕಲಿಗರು, ಕುರುಬರು, ಲಿಂಗಾಯತರನ್ನೆಲ್ಲ ಬಳಸಿಕೊಂಡು ಬೆಳೆದ ಎಂಡಿಎಲ್ ಬೆಂಗಳೂರಿನ ಮಹಾನ್ ನೆಲಗಳ್ಳ ಕಂ ಮಂತ್ರಿ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಜೊತೆ ಸೇರಿ 'ರಿಯಲ್ ಎಸ್ಟೇಟ್ ದಂಧೆಗೆ ಕೈಯಿಟ್ಟ. ಬಿಡಿಎಯಿಂದ ನಕ್ಷೆ ಮಂಜೂರಾತಿಯನ್ನೇ ಪಡೆಯದೇ ನಿವೇಶನದಾರರನ್ನು ವಂಚಿಸಿ ಬ್ಯಾಟರಾಯನಪುರದ ಬಳಿಯ ಇಪ್ಪತ್ತೆಕರೆ ಭೂಮಿಗೆ ಒಕ್ಕರಿಸಿದ ಎಂಡಿಎಲ್ ಎಮ್ಮೆಲ್ಲೆಯಾದ ನಂತರ ತನ್ನ ಸಂಬಂಧಿಕರು ಮತ್ತು ಕುಲಬಾಂಧವರನ್ನಷ್ಟೇ ಉದ್ಧಾರ ಮಾಡಿದ.

ಒಂದಲ್ಲ ನಾಲ್ಕು ಗ್ಯಾಸ್ ಏಜೆನ್ಸಿಗಳನ್ನು ತಾನೇ ಬೇನಾಮಿಯಾಗಿ ಗಿಟ್ಟಿಸಿದ್ದೂ ಅಲ್ಲದೇ ತನ್ನ ಛೇಲಾ ಕಂ ಸಂಬಂಧಿ ಲಕ್ಷ್ಮೀರಂಗನಾಥ ರೈಸ್‌ಮಿಲ್ ಮಾಲೀಕ ಚಿದಂಬರನಿಗೊಂದು ಪೆಟ್ರೋಲ್ ಬಂಕ್ ಮಾಡಿಸಿಕೊಟ್ಟ. ಇದು ಎಂಡಿಎಲ್‌ನ ಜಾತಿ ವ್ಯಾಮೋಹಕ್ಕೊಂದು ಪಕ್ಕಾ ಸಾಕ್ಷಿ. ಅಂಥಾ ಕೂಲಿಗಾಗಿ ಕಾಳು ಯೋಜನೆಯ ದುಡ್ಡನ್ನೇ ನುಂಗಿ ನೀರು ಕುಡಿದ ಎಂಡಿಎಲ್ ನಬಾರ್ಡ್‌ನ ಕೊಬ್ಬರಿ ಖರೀದಿ ದಂಧೆಯಲ್ಲೂ ರೈತರಿಗೆ ಟೋಪಿ ಇಟ್ಟ. ಇಷ್ಟೆಲ್ಲ ನುಂಗಿ ಕುಬೇರನಾದ ಎಂಡಿಎಲ್ ತನ್ನನ್ನು ಈ ಸ್ಥಾನಕ್ಕೆ ತಂದ ಲಿಂಗಾಯತರ ಒಬ್ಬೇ ಒಬ್ಬ ನಾಯಕನನ್ನೂ ಬೆಳೆಸಲಿಲ್ಲ.


ಒಕ್ಕಲಿಗರಲ್ಲೋ ಅಥವಾ ಲಿಂಗಾಯತರಲ್ಲೋ ಯಾರಾದರೂ ಬೆಳೆದರೆಂದರೆ ಕೇವಲ ನಾಲ್ಕು ಸಾವಿರದಷ್ಟಿರುವ ದೇವಾಂಗಶೆಟ್ಟರ ಜಾತಿಯ ತನಗೇ ಮುಳುವು. ಇಂಥ ಹುನ್ನಾರದಲ್ಲೇ ಎಂಡಿಎಲ್ ನಗುನಗುತ್ತಲೇ ಉದಯೋನ್ಮುಖ ಲಿಂಗಾಯತ ಮತ್ತು ಒಕ್ಕಲಿಗ ನಾಯಕರಿಗೆ ಬತ್ತಿ ಇಡುತ್ತಲೇ ಬಂದರು. ಇದು ಗೊತ್ತಾಗಿಯೇ ಈ ಬಾರಿಯ ಚುನಾವಣೆಯಲ್ಲಿ ಸಾರಾಸಗಟಾಗಿ ಲಿಂಗಾಯತರೆಲ್ಲ ಉಲ್ಟಾ ಹೊಡೆದಿದ್ದಾರೆ. ಚುನಾವಣೆಯ ಕೊನೇ ಗಳಿಗೆಯ ತನಕ ತಾನು ಈ ಬಾರಿ ನಿಲ್ಲೋದೇ ಇಲ್ಲ, ನನಗೆ ರಾಜಕೀಯವೇ ಬೇಕಿಲ್ಲ ಎನ್ನುತ್ತಿದ್ದವನು ಇದ್ದಕ್ಕಿದ್ದಂತೆ ತನಗೇ ಟಿಕೆಟ್ ಬೇಕೆಂದು ಪಟ್ಟು ಹಿಡಿದಾಗ ಮೊದಲು ರೊಚ್ಚಿಗೆದ್ದದ್ದು ಲಿಂಗಾಯತರು.

ಈ ಬಾರಿ ಬಜೆಪಿ ವತಿಯಿಂದ ಲಿಂಗಾಯತರೊಬ್ಬರಿಗೆ ಟಿಕೆಟ್ ಕೊಡಬೇಕೆಂದು ಎಚ್. ಮಹೇಶ್‌ರಂಥ ಯುವ ನಾಯಕರೇ ಹಠಕ್ಕೆ ಬಿದ್ದರು. ದಂಡಿನ ಶಿವರದ ಶಿವಬಸಪ್ಪನಂಥ ಮತ್ತೊಬ್ಬ ಲಿಂಗವಂತ ನಾಯಕನೂ ಬಜೆಪಿಯ ಬಂಡಾಯ ಅಭ್ಯರ್ಥಿಯಾಗುವ ನಿಟ್ಟನಲ್ಲಿದ್ದ. ಯಾವತ್ತು ಯಡ್ಡಿಯೇ ತುರುವೇಕೆರೆಗೆ ಬಂದು 'ನೋಡಿ, ನನಗೋಸ್ಕರ ಬಜೆಪಿಯನ್ನು ಬೆಂಬಲಿಸಿ. ಲಕ್ಷ್ಮೀನಾರಾಯಣನಿಗೆ ಗೋಲಿ ಹೊಡೀರಿ. ನಿಮಗೆ ಕೆಲಸವಾಗಬೇಕಾ ಡೈರೆಕ್ಟಾಗಿ ನನ್ನನ್ನು ನೋಡಿ' ಎಂದು ಪೂಸಿ ಹೊಡೆದ ನಂತರವೇ ಲಿಂಗಾಯತರ ಕೋಪ ಶಮನವಾಗಿದೆ.


ಸದ್ಯದ ಪರಿಸ್ಥಿತಿಯಲ್ಲಿ ಬಜೆಪಿ ಮುಂದಿದೆ ನಿಜ. ಆದರೆ ಅದು ರೊಕ್ಕದ ಅಬ್ಬರವೇ ಹೊರತು ಜನರ ತುಡಿತವೇನಲ್ಲ. ಹೇಗೂ ಕಾಂಗ್ರೆಸ್ ಅಭ್ಯರ್ಥಿ ನಂಜೇಗೌಡ ಮನೆಗೆ ಮಗನಲ್ಲ ಸುಡುಗಾಡಿಗೆ ಹೆಣವಲ್ಲ ಎಂಬುದು ಜನಕ್ಕೆ ಗೊತ್ತು. ಹೀಗಾಗಿ ಲಕ್ಷ್ಮೀನಾರಾಯಣನನ್ನು ಮಣ್ಣು ಮುಕ್ಕಿಸಬೇಕೆಂದರೆ ಜೆಡಿಎಸ್‌ನ ಕೃಷ್ಣಪ್ಪನೇ ಲಾಯಕ್ಕೆಂಬುದು ಸಾಮಾನ್ಯ ಮತದಾರರ ಬಯಕೆ. ಜೊತೆಗೆ ಯಡ್ಡಿ ಸರ್ಕಾರದ ದುರಾಡಳಿತದ ಬಿಸಿಯೂ ಮತದಾರರನ್ನು ಸುಟ್ಟಿದೆ.

ಬಜೆಪಿಯ ರೊಕ್ಕ, ಹೆಂಡದ ಮುಂದೆ ಸಾಮಾನ್ಯ ಮತದಾರನ ಸಿಟ್ಟಿಗೇನಾದರೂ ಬಲ ಬಂತೆಂದರೆ ಜೆಡಿಎಸ್‌ನ ಎಂ.ಟಿ. ಕೃಷ್ಣಪ್ಪ ಗೆಲ್ಲುತ್ತಾರೆ. ಹಾಗೊಮ್ಮೆ ಎಂಡಿಎಲ್ ಏನಾದರೂ ಗೆದ್ದನೆಂದರೆ ಅದು ಸುರಿದ ದುಡ್ಡು ಮತ್ತು ಹೆಂಡದ ಪ್ರಭಾವವೇ ಹೊರತು ಮತ್ತೇನಲ್ಲ. ಗಂಡಾಗುಂಡಿ ಮಾಡಿಯಾದರೂ ಗೆಲ್ಲಲು ಹೊರಟ ಬಜೆಪಿಗೂ ಕಾಂಗ್ರೆಸ್ಸಿಗೂ ಏನು ವ್ಯತ್ಯಾಸ?


■ ರಾ. ಸೋಮನಾಥ್




ತುರುವೇಕೆರೆ ಜಗ್ಗೇಶ್ ಪಾಪಕ್ಕೆ ಬಿಜೆಪಿಗೆ ಶಿಕ್ಷೆ?



ಕೃಷ್ಣಪ್ಪ



ಲಕ್ಷ್ಮೀನಾರಾಯಣ




ನಂಜೇಗೌಡ

ಜಗ್ಗೇಶ್-ಅಶೋಕ್ ಜೋಡಿಗೆ ಗೂಸಾ

ಚುನಾವಣಾ ನೀತಿ ಸಂಹಿತೆಯನ್ನೇ ಮರೆತ ಬಜೆಪಿ ತುರುವೇಕೆರೆಯಲ್ಲಿ ವಿಚಿತ್ರ ಪ್ರವೃತ್ತಿಯೊಂದನ್ನು ಹುಟ್ಟು ಹಾಕಿದೆ. ಅದು ತುರುವೇಕೆರೆ ಮತ ಕ್ಷೇತ್ರಕ್ಕೆ ಹೊಂದಿಕೊಂಡಂತೆ ತಿಪಟೂರು ಮತ್ತು ಚನ್ನರಾಯಪಟ್ಟಣದ ಗಡಿಗ್ರಾಮಗಳಲ್ಲಿನ ಪ್ರತಿನಿತ್ಯದ ಬಾಡೂಟ! ತುರುವೇಕೆರೆಯ ಗಡಿಗ್ರಾಮವಾದ ಅಣಪನಹಳ್ಳಿಯಲ್ಲಿ ಡಿಸೆಂಬರ್ 16 ರ ಮಂಗಳವಾರ ಆಂಜನೇಯ ಪೂಜಾ ಉತ್ಸವದ ನೆಪದಲ್ಲಿ ಬಜೆಪಿಯ ಏಳುನೂರು ಮಂದಿ ಬೆಂಬಲಿಗರಿಗೆ ಗುಂಡು ತುಂಡಿನ ಪಾರ್ಟಿ ಕೊಟ್ಟದ್ದು ಆರ್. ಅಶೋಕ್ ಮತ್ತು ಜಗ್ಗೇಶ್. ಇದರ ಉಸ್ತುವಾರಿ ವಹಿಸಿದ್ದು ಜಗ್ಗೇಶ್ ಶಿಷ್ಯರಾದ ಗಿರೀಶ್ ಮತ್ತು ಚಂದ್ರಶೇಖರ್ ಎಂಬ ಖದೀಮ ಕಂಟ್ರಾಕ್ಟರ್‌ಗಳು. ನೂರು ಕೇಸ್‌ಗಳಷ್ಟು ವಿಸ್ಕಿ-ರಮ್ಮು, ಐವತ್ತು ಟಗರುಗಳನ್ನು ಕಡಿದದ್ದು ಮತ್ತು ಎಪ್ಪತ್ತು ಕೆ.ಜಿ.ಯಷ್ಟು ಕೋಳಿಗಳನ್ನು ಸುಟ್ಟು ತಿಂದ ಬಜೆಪಿ ಕಾರ್ಯಕರ್ತರ ರಾಮಭಕ್ತಿಯನ್ನು ಪಿಶಾಚಿಗಳಲ್ಲದೇ ಇನ್ಯಾರು ಮೆಚ್ಚಬೇಕು?

ಇದು ಡಿಸೆಂಬರ್ 16 ರ ರಾತ್ರಿಯ ಕಥೆಯಾದರೆ ಆವತ್ತು ಮಧ್ಯಾಹ್ನ ಕಬ್ಬಳಿಯಲ್ಲಿ ಇದಕ್ಕಿಂತಲೂ ಭರ್ಜರಿಯಾದ ಪಾರ್ಟಿ ಕೊಟ್ಟವನು ಜಗ್ಗೇಶ್‌ರ ಮತ್ತೊಬ್ಬ ಭಂಟ ಮದ್ರಾಸ್ ಫೈನಾನ್ಸ್‌ನ ಏಜೆಂಟ್ ಪ್ರಸನ್ನ. ಈತ ಐವತ್ತು ಕುರಿಗಳನ್ನಷ್ಟೇ ಮೂವತ್ತು ಹಂದಿಗಳನ್ನು ಕೊಂದು ರಾಮಭಕ್ತರ ಹಸಿವು ನೀಗಿಸಿದ ಪುಣ್ಯಾತ್ಮ. ಮೂವತ್ತು ಕೇಸ್‌ಗಳಷ್ಟು ಓಲ್ಡ್‌ಮಾಂಕ್ ರಮ್ಮು, ಇಪ್ಪತ್ತು ಬಾಕ್ಸ್‌ಗಳಷ್ಟು ರಾಜಾ ವಿಸ್ಕಿ ಮತ್ತು ಸಲವತ್ತು ಕೇಸ್‌ಗಳಷ್ಟು ಬಿಯರ್‌ಗಳ ಖಾಲಿ ಬಾಟಲಿಗಳು ರಾಶಿಯಾಗಿ ಬಿದ್ದಿದ್ದವು. ಇದನ್ನೆಲ್ಲ ಕಾಂಗ್ರೆಸ್ ನಾಯಕ ಕೃಷ್ಣ ಭೈರೇಗೌಡರೇ ನಿಂತು ಚುನಾವಣಾಧಿಕಾರಿಗೆ ದೂರು ಕೊಟ್ಟರೆ ಆತ ಬಜೆಪಿ ಏಜೆಂಟನಿಗಿಂತಲೂ ಕೀಳಾಗಿ ವರ್ತಿಸುತ್ತಾನೆ.




ಆರ್. ಅಶೋಕ್

ವಿಚಿತ್ರವೆಂದರೆ ಇಷ್ಟೆಲ್ಲಾ ದುರಾಚಾರವೆಸಗಿದ ಅಶೋಕ್-ಜಗ್ಗೇಶ್ ಜೋಡಿ ಚಂದ್ರಶೇಖರಪುರದಿಂದ ಚುನಾವಣಾ ಪ್ರಚಾರ ಮುಗಿಸಿ ಬರುತ್ತಿದ್ದ ಕಾಂಗ್ರೆಸ್ ಕಾರ್ಯಕರ್ತರ ಮೇಲೆಯೇ ದುಂಡಾವರ್ತಿಗೆ ಕೈಯಿಟ್ಟಿದೆ. ಡಿಸೆಂಬರ್ 16 ರಂದು ಅಶೋಕ್-ಜಗ್ಗೇಶ್ ಜೋಡಿ ಕಾಂಗ್ರೆಸ್ ಕಾರ್ಯಕರ್ತರಿಗೆ ಕೊಟ್ಟ ಕಾಟಕ್ಕೆ ರೋಸತ್ತು ಜನರೇ ಜಗ್ಗೇಶ್ ಮತ್ತು ಅಶೋಕ್ ಜೋಡಿಯನ್ನು ಹಿಡಿದು ಬಡಿದಿದ್ದಾರೆ. ಹೀಗೆ ಜನರಿಂದ ಒದೆಸಿಕೊಂಡ ನಾಯಕರಿಬ್ಬರೂ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವರಾಜ್‌ರನ್ನೇ ಪೊಲೀಸರನ್ನು ಛೂಬಿಟ್ಟು ಲಾಕಪ್ಪಿಗೆ ದಬ್ಬಲು ನೋಡಿದ್ದಾರೆ. ಯಾವತ್ತು ಕೃಷ್ಣಭೈರೇಗೌಡರು ಮತ್ತು ಲೋಕಸಭಾ ಸದಸ್ಯ ಬಸವರಾಜು ಪೊಲೀಸ್ ಠಾಣೆಯೆದುರು ಧರಣಿ ಕುಳಿತರೋ ಡಿವೈಎಸ್‌ಪಿ ಪ್ರಭಾಕರ್ ವಿಧಿಯಿಲ್ಲದೇ ಬಾಲ ಮುದುರಿಕೊಂಡಿದ್ದಾರೆ.



ಚಂದ್ರು

ಇಡೀ ಸರ್ಕಾರಿ ಯಂತ್ರವನ್ನೇ ಬಜೆಪಿಯ ಜೀತಕ್ಕೆ ಬಳಸುತ್ತಿರುವ ಕೇಸರಿ ವೀರರಿಗೆ ಮತದಾರರೇ ಪಾಠ ಕಲಿಸಬೇಕಷ್ಟೆ. ■



ಪ್ರೈಸ್ ಕ್ಯಾಚೂ ಸಾ....ರ್, ಬೇಗ ಬನ್ನಿ!

ನಮ್ಮ ಪೊಲೀಸರ ವೃತ್ತಿ ನೈಪುಣ್ಯತೆಗೆ ಒಂದು ಉದಾಹರಣೆಗ ಇದು.

ಅಮೆರಿಕದ ಪಿಶಾಚಿ ನಾಯಕ ಜಾರ್ಜ್ ಬುಷ್‌ಗೆ ಬಾಗ್ದಾದಿನಲ್ಲಿ ಬೂಟಿನೇಟು ಬಿತ್ತಲ್ಲ, ಆ ದೃಶ್ಯಗಳನ್ನು ನೋಡಿ ಯಾರೂ ಬೇಸರ ಪಡಲಿಲ್ಲ. ಬದಲಾಗಿ ಜಗತ್ತಿನ ಬಹುತೇಕ ಜನ 'ಆ ದುಷ್ಟನಿಗೆ ತಕ್ಕ ಸನ್ಮಾನ ಆಯಿತು' ಅಂತಲೇ ಭಾವಿಸಿದರು. ಬೆಂಗಳೂರಿನ ಮೈಕೊ ಕಂಪನಿಯ ನೌಕರ ಜಮೀಲ್ ಅಹಮದ್‌ನೂ ಸಹೋದ್ಯೋಗಿಗಳೊಂದಿಗೆ ಇದೇ ಮಾತಾಡಿದ್ದಾನೆ. ಇದಕ್ಕೆ ಇನ್ಯಾವನೋ ಏನೋ ಪ್ರತಿ ಹೇಳಿರಬೇಕು ಕೊನೆಗೆ ಅಲ್ಲೊಂದು ಗಲಾಟೆಯಾಗಿ ಪೊಲೀಸರು ಬಂದು ಜಮೀಲ್‌ನನ್ನು ಎಳೆದೊಯ್ದರು.

ಆಮೇಲೆ ನಡೆದದ್ದೆಲ್ಲ ಶುದ್ಧ ಅಸಂಬದ್ಧಗಳ ಕಂತೆ.

ಈ ಜಮೀಲ್ ಬಳಿ ಇರಾಕ್, ಅಫಘಾನಿಸ್ತಾನದಲ್ಲಿ ನಡೆಯುತ್ತಿರುವ ಘರ್ಷಣೆಗಳ ಕೆಲ ಪತ್ರಿಕಾ ವರದಿಗಳ ಕಟ್ಟಿಂಗ್ ಇತ್ತಂತೆ. ಅಷ್ಟಕ್ಕೇ ಇವನೊಬ್ಬ ಟೆರರಿಸ್ಟ್ ಇರಬಹುದೆಂದು ಅಲ್ ಖೈದಾ ತಾಲಿಬಾನ್‌ವರೆಗೂ ಲಿಂಕ್ ಇರಬಹುದೆಂದು, ಅಡುಗೋಡಿ ಪೊಲೀಸರು ಶಂಕೆ ಪಟ್ಟರು. ಅಲ್ಲಿನ ಎಸಿಪಿ ರಮೇಶ್ ಚಂದ್ರ 'ಕುಳ್ಳಾ ಏಜೆಂಟ್ 000' ತರದ ಪಿಚ್ಚರ್ ಜಾಸ್ತಿ ನೋಡಿದ್ದರೂಂತ ಕಾಣುತ್ತೆ. ಕೂಡಲೇ ಜಯನಗರ ಡಿಸಿಪಿ ರವಿಗೆ ಫೋನ್ ಮಾಡಿ "ಸಿಕ್ತು ಸಾರ್, ಎಲ್ಲಾ ಸಿಕ್ಕಿಬಿಡ್ತು, ಐಐಎಸ್‌ಸಿ ಅಟ್ಯಾಕ್, ಬೆಂಗಳೂರು ಬಾಂಬ್ ಬ್ಲಾಸ್ಟ್ ಹಿಂದೆ ಯಾರ್‍ಯಾರಿದ್ದಾರೆ ಅನ್ನೋ ಎಲ್ಲಾ ಇನ್‌ಫರ್‌ಮೇಷನ್ ಜಮೀಲ್‌ಗೆ ಗೊತ್ತಿದೆ, ನೀವು ಬೇಗ ಬನ್ನಿ ಸಾರ್' ಅಂದರಂತೆ.

ಯಡ್ಡಿಯ ಮಗ ವಿಜಯೇಂದ್ರನಿಗೆ ಎಂಬತ್ತೈದು ಲಕ್ಷ ಲಂಚ ತಿನ್ನಿಸಿ ಬೆಂಗಳೂರು ದಕ್ಷಿಣ ಡಿಸಿಪಿಯಾಗಿ ಬಂದಿರುವ ಶ್ರೀಮಾನ್ ರವಿಯವರಿಗೂ ಈ ಮಾತು ಕೇಳಿ ಥ್ರಿಲ್ ಆಗಿದೆ. ಇದುವರೆಗೂ ಬಗೆಹರಿಯದಿರುವ ಕೇಸ್‌ಗಳನ್ನು ಬಗೆಹರಿಸಿದ ಕೀರ್ತಿ, ಜೊತೆಗೆ ಮೆಡಲು, ಪ್ರಮೋಷನ್‌ಗಳ ಕನಸು ಕಾಣುತ್ತಾ ಜಮೀಲ್‌ನನ್ನು ಬಸವನಗುಡಿ ಠಾಣೆಗೆ ಎಳೆತರಿಸಿ ತಮ್ಮ ಅಮೋಘ ಇಂಟರಾಗೇಷನ್ ನಡೆಸಿದ್ದಾರೆ. ಇರಲಾರದೆ ಇರುವೆ ಬಿಟ್ಟುಕೊಂಡರು ಅನ್ನುವಂತೆ ಮೇಲಿನ ಅಧಿಕಾರಿ ಗೋಪಾಲ್ ಹೊಸೂರ್‌ರವರಿಗೂ ಫೋನ್ ಮಾಡಿ ತಮ್ಮ ಕಲ್ಪನೆಯ ತನಿಖಾ ವರದಿ ನೀಡಿದ್ದಾರೆ.


ಆದರೆ ಕೊನೆಗೆ ಯಾವ ದಿಕ್ಕಿನಿಂದ ಟೇಪ್ ಇಟ್ಟು ಅಳೆದರೂ ಜಮೀಲ್ 'ಅಮೆರಿಕಾ ಬಗ್ಗೆ ಸಿಟ್ಟಿರುವ ಸಾಮಾನ್ಯ ನಾಗರಿಕನೇ ವಿನಃ ಟೆರರಿಸ್ಟ್ ಅಲ್ಲ' ಎಂಬುದು ಅವರಿಗೆ ಗೊತ್ತಾಗಿದೆ. ಆಮೇಲೆ ಇನ್ನೇನು ಮಾಡಲು ಸಾಧ್ಯ?

ತೆಪ್ಪಗೆ ಜಮೀಲ್‌ನನ್ನು ಬಿಟ್ಟು ಕಳಿಸಿದ್ದಾರೆ.


ಇಲ್ಲಿ ಮೈಕೊ ಕಂಪನಿಯ ಕೆಲವು ಮುಠ್ಠಾಳ ನೌಕರರ ಬಗ್ಗೆಯೂ ಎರಡು ಮಾತು ಹೇಳಬೇಕು.

'ಜಮೀಲ್ ಬಳಿ ಕಂಪ್ಯೂಟರು, ಹಾರ್ಡ್ ಡಿಸ್ಕ್, ಸಿಡಿಗಳೆಲ್ಲಾ ಸಿಕ್ಕಿದೆ' ಅಂತ ಈ ಅವಿವೇಕಿಗಳು ಪ್ರಚಾರ ಮಾಡಿದ್ದಾರೆ. ಕಂಪ್ಯೂಟರ್ ಇದ್ದವರ ಬಳಿ ಹಾರ್ಡ್‌ಡಿಸ್ಕ್, ಸಿಡಿಗಳಿರದೆ ಇನ್ನೇನು ಬೆರಣಿ-ಸಗಣಿ ಇರಲು ಸಾಧ್ಯನಾ?

ಪೊಲೀಸರು ಇಂತಹದ್ದೇ ಚಿಲ್ಲರೆ ತನಿಖೆ, ಅಸಂಬದ್ಧ ಅನುಮಾನಗಳನ್ನು ಜನರಲ್ಲಿ ಬಿತ್ತುತ್ತಾ ಹೋದರೆ ಮುಂದೆ ಇನ್ನಷ್ಟು ನಗೆಪಾಟಲಿಗೀಡಾಗುತ್ತಾರೆ ಅಷ್ಟೆ! ■



ಕೇಸರಿ ಅಮಲಿನಲ್ಲಿ ಕರ್ನಾಟಕ ಪೊಲೀಸ್



ಬಿಜೆಪಿ ಆಡಳಿತದಡಿ ಕರ್ನಾಟಕ ಪೊಲೀಸರು ಹಿಂದೂ ಕೋಮುವಾದಿಗಳ ಆದಿಯಾಳುಗಳಾಗಿ ಬದಲಾಗಿ ಹೋಗಿದ್ದಾರಾ? ಕಳೆದ ಒಂದು ವಾರದಿಂದ ಮಂಗಳೂರು, ದಾವಣಗೆರೆ, ಬೆಂಗಳೂರು, ಭಟ್ಕಳ, ಮೈಸೂರುಗಳಲ್ಲಿ ನಡೆದಿರುವ ದುರ್ಘಟನೆಗಳು ಹಾಗೂ ಅದಕ್ಕೆ ಪೊಲೀಸರು ನೀಡಿರುವ ಕುಮ್ಮಕ್ಕುಗಳನ್ನು ನೋಡಿದರೆ ಈ ಅನುಮಾನ ಬಾರದಿರದು.


ಬರೀ ಬಿಜೆಪಿ ಯಾಕೆ ಕಾಂಗ್ರೆಸ್-ಜೆಡಿಎಸ್ ಆಡಳಿತವಿದ್ದಾಗಲೂ ರಾಜ್ಯ ಪೊಲೀಸರು ಸಂಘ ಪರಿವಾರಿಗಳ ಪುಂಡಾಟಿಕೆಗಳ ಬಗ್ಗೆ ಯಾವಾಗಲೂ ಮೃದು ಧೋರಣೆಯನ್ನು ತಳೆಯುತ್ತಾ ಬಂದಿದ್ದರು. ಆದರೆ ಈಗ ಹಿಂಸೆ ದೌರ್ಜನ್ಯಗಳನ್ನೇ ಅಜೆಂಡಾ ಆಗಿಸಿಕೊಂಡಿರುವ ಬಿಜೆಪಿಯೇ ಸರ್ಕಾರ ನಡೆಸುತ್ತಿದೆ. ಹಾಗಾಗಿ ರಾಜ್ಯದ ಕೆಲವು ಪೊಲೀಸ್ ಅಧಿಕಾರಿಗಳು ತಮ್ಮ ಪೊಲೀಸ್ ಕರ್ತವ್ಯ ಬದಿಗಿಟ್ಟು ಥೇಟ್ ಸಂಘ ಪರಿವಾರಗಳಂತೆಯೇ ಆಡತೊಡಗಿದ್ದಾರೆ. ರಾಜ್ಯ ಪೊಲೀಸ್ ಮುಖ್ಯಸ್ಥ ಶ್ರೀಕುಮಾರ್ ಓರ್ವ ದಕ್ಷ ಹಾಗೂ ನಿಷ್ಪಕ್ಷಪಾತ ಆಫೀಸರ್ ಆಗಿದ್ದಾರೆ ನಿಜ. ಆದರೂ ಅವರ ಕೈಕೆಳಗಿನ ಅಧಿಕಾರಿಗಳು ಅವರ ಮಾತಿಗೇ ಬೆಲೆ ಕೊಡದೆ ಭಜರಂಗಿಗಳಂತೆ ವರ್ತಿಸುತ್ತಿರುವುದು ನಿಜಕ್ಕೂ ಆತಂಕಕಾರಿ ಬೆಳವಣಿಗೆಯಾಗಿದೆ.

ಮಂಗಳೂರಿನಲ್ಲಿ ಹಿಂದೂ ಫ್ಯಾಸಿಸ್ಟ್ ಪುಂಡರು ಕರಾವಳಿ ಅಲೆ ಪತ್ರಿಕೆಯ ಮೇಲೆ ನಿತ್ಯ ಪುಂಡಾಟಿಕೆ ನಡೆಸುತ್ತಿದ್ದಾರೆ. ಹಾಗೂ ಮಾನವ ಹಕ್ಕು ಹೋರಾಟಗಾರ ಪಿ.ಬಿ.ದೇಸಾರ ಕಚೇರಿ ಮೇಲೆ ಡಿಸೆಂಬರ್ 17 ರಂದು ಹಾಡುಹಗಲೇ ನುಗ್ಗಿ ಧ್ವಂಸ ಮಾಡಿಹೋಗಿದ್ದಾರೆ.

ಡಿಸೆಂಬರ್ 15 ರಂದು ದಾವಣಗೆರೆಯ ನೂರಾರು ಕ್ರಿಶ್ಚಿಯನ್ನರು ಎರಡು ಚರ್ಚ್‌ಗಳ ಬೀಗಮುದ್ರೆ ತೆಗೆಸಲು ಡಿಸಿಗೆ ಮನವಿ ನೀಡಲು ಹೋದರೆ ಕೋಮು ಸೌಹಾರ್ದ ವೇದಿಕೆ ಸೇರಿದಂತೆ ಎಲ್ಲರನ್ನೂ ಪೊಲೀಸರು ಅರೆಸ್ಟ್ ಮಾಡಿದ್ದಾರೆ.

ಇನ್ನೊಂದೆಡೆ ಮೈಸೂರಿನ ಪೊಲೀಸರ ಮುಸ್ಲಿಂ ವಿರೋಧಿ ನಿಲುವನ್ನು ನೋಡಿ. ಅಲ್ಲಿ KFD ಸಂಘಟನೆ ಡಿಸೆಂಬರ್ 18 ರಂದು ಒಂದು ಬೈಕ್ ರ್‍ಯಾಲಿ ಆಯೋಜಿಸಿತ್ತು. ಕೋಮುವಾದ ಹಾಗೂ ಟೆರರಿಸಂ ವಿರುದ್ಧ ಜನಜಾಗೃತಿಗಾಗಿ ನಡೆಯಬೇಕಿದ್ದ ಆ ರ್‍ಯಾಲಿ ಪೊಲೀಸರಿಗೆ ಯಾಕೆ ಬೇಡವಾಯಿತೊ ಏನೋ ಕಮೀಷನರ್ ವೇದಮೂರ್ತಿ ತಾವೇ ನೀಡಿದ್ದ ಅನುಮತಿ ರದ್ದುಪಡಿಸಿ ರ್‍ಯಾಲಿ ನಿರ್ಬಂಧಿಸಿದ್ದಾರೆ.

ಮತ್ತೊಂದೆಡೆ ಇದೇ ಡಿಸೆಂಬರ್ 16 ರಂದು ಕಾರವಾರ ಸಮೀಪದ ನೇತ್ರಾಣಿ ಐಲ್ಯಾಂಡಿಗೆ ಪಿಕ್‌ನಿಕ್ಕೆಂದು ಹೋಗಿದ್ದ ಭಟ್ಕಳದ 24 ಯುವಕರನ್ನು ಕರಾವಳಿ ಪೊಲೀಸರು ಅನುಮಾನದ ಮೇಲೆ ವಶಕ್ಕೆ ತೆಗೆದುಕೊಂಡಿದ್ದರು. ಎಲ್ಲೇ ಆಗಲಿ ಯಾರ ಮೇಲಾದರೂ ಅನುಮಾನ ಬಂದಾಗ ಪೊಲೀಸರು ಅಂಥವರನ್ನು ಪ್ರಶ್ನಿಸಿದರೆ ತಪ್ಪೇನೂ ಇಲ್ಲ. ಆದರೆ ಆ ಬಂಧಿತ ಯುವಕರನ್ನು ಮುರುಡೇಶ್ವರಕ್ಕೆ ವಿಚಾರಣೆಗಾಗಿ ಕರೆತಂದಾಗ ಚೆಡ್ಡಿ ಪಟಾಲಂ ಪೊಲೀಸರ ಎದುರೇ ಮುಸ್ಲಿಂ ಯುವಕರ ಮೇಲೆ ಹಲ್ಲೆ ನಡೆಸಿಬಿಟ್ಟಿತು.



ಸತೀಶ್‌ಕುಮಾರ್

ಏನಿದರ ಅರ್ಥ?

ರಾಜ್ಯ ಪೊಲೀಸರು ಮುಸ್ಲಿಮರು, ಸೆಕ್ಯುಲರ್‌ವಾದಿಗಳು, ಕ್ರಿಶ್ಚಿಯನ್ನರ ವಿರುದ್ಧ ವಿಚಾರಣೆ ನಡೆಸುವ, ಹಲ್ಲೆ ದೌರ್ಜನ್ಯ ನಡೆಸುವ ಅಧಿಕಾರವನ್ನೆಲ್ಲಾ ಹಿಂದೂ ಭಯೋತ್ಪಾದಕರಿಗೇ ನೀಡಿಬಿಟ್ಟಿದ್ದಾರಾ?

ರಾಜ್ಯ ಪೊಲೀಸರು ಈ ರೀತಿ ತಾವೇ ಭಜರಂಗದಳದ ಅಫೀಮು ತಿಂದವರಂತೆ ನಡೆದುಕೊಂಡರೆ ಮುಂದೆ ಜನ ಇವರನ್ನು ನಂಬುತ್ತಾರಾ?

ಈ ಮೇಲಿನ ಸನ್ನಿವೇಶಗಳಲ್ಲಿ ರಾಜ್ಯ ಪೊಲೀಸರ ಕೋಮುವಾದಿ ಧೋರಣೆ, ಪೂರ್ವಗ್ರಹದ ವರ್ತನೆಗಳು ಸ್ಪಷ್ಟವಾಗೇ ಕಾಣಿಸುತ್ತಿರುವಾಗಲೇ ಇತ್ತ ಬೆಂಗಳೂರಿನ ಆಡುಗೋಡಿ ಪೊಲೀಸರು ಇನ್ನೊಂದು ಮಹೋನ್ನತ ಸಾಹಸ ಮೆರೆದಿದ್ದಾರೆ.

ಅಮೆರಿಕಾ ಅಧ್ಯಕ್ಷ ಬುಷ್‌ಗೆ ಯಾರೋ ಬೂಟ್‌ನಲ್ಲಿ ಹೊಡೆದದ್ದು ಸರಿ ಅಂತಂದನೆಂದು ಮೈಕೊ ಕಂಪನಿಯ ಜಮೀಲ್ ಅಹಮದ್‌ನನ್ನು ಟೆರರಿಸ್ಟ್ ಎಂಬಂತೆ ಬಿಂಬಿಸಿ ಎಳೆದೊಯ್ದು ವಿಚಾರಣೆ ನಡೆಸಿದ್ದಾರೆ.

ಕೇವಲ ಜಮೀಲ್ ಅಹಮದ್ ಯಾಕೆ ಕಂಪ್ಯೂಟರ್ ಸೌಲಭ್ಯವಿರುವ ಸಾವಿರಾರು ಕನ್ನಡಿಗರೂ ಬುಷ್‌ಗೆ ಬೂಟಿನಲ್ಲಿ ಹೊಡಿದ್ದಾರೆ, ನಾವೂ ಹೊಡೆದಿದ್ದೇವೆ. ಅಷ್ಟೇ ಅಲ್ಲ ಲಕ್ಷಾಂತರ ಇರಾಕಿಗಳನ್ನು ಗುಂಡೇಟು ಹೊಡೆಸಿ ಕೊಲ್ಲಿಸಿರುವ ಬುಷ್‌ಗೆ ಕನಿಷ್ಠ ಪಕ್ಷ ಬೂಟಿನೇಟಾದರೂ ಬಿತ್ತಲ್ಲ ಅಂತ ಜನ ಖುಷಿಪಟ್ಟಿದ್ದಾರೆ.



ಪೊಲೀಸರು ನಾಶಪಡಿಸಿದ ಶಾಮಿಯಾನ

ಇದೂ ಒಂದು ಅಪರಾಧವಾ?

ಪೊಲೀಸರಿಗೆ ಹೊಣೆಗಾರಿಕೆ ಇಲ್ಲವಾ?

ಮಂಗಳೂರು ಎಸ್‌ಪಿ ಸತೀಶ್‌ಕುಮಾರ್‌ಗೆ ನೇರ ಕೇಳಬೇಕಿರುವ ಪ್ರಶ್ನೆ ಇದು. ಕರಾವಳಿ ಅಲೆ ವಿ... ಹಿಂದೂವಾದಿಗಳು ಕಳೆದ ಹತ್ತಾರು ದಿನಗಳಿಂದ ಪುಂ... ನಡೆಸಿಕೊಂಡೇ ಬಂದಿದ್ದಾರೆ. ಪತ್ರಿಕೆಯ ಬಂಡಲ್ ... ಸುಡುವುದು, ಪತ್ರಿಕೆ ಮಾರುವ ಏಜೆಂ... ಹೊಡೆಯುವುದು ಇವೆಲ್ಲಾ ನಡೆದಿವೆ. ಈ ಅ... ಪ್ರಕರಣಗಳಲ್ಲಿ ಪೊಲೀಸರು ಎಷ್ಟು ಜನರನ್ನು ಬಂಧಿಸಿ... ನೇತ್ರಾಣಿ ಐಲ್ಯಾಂಡಿಗೆ ಪಿಕ್‌ನಿಕ್‌ಗೆ ಹೋಗಿದ್ದ ಅಮಾ... ಮುಸ್ಲಿಂ ಯುವಕರನ್ನು ಅರೆಸ್ಟ್ ಮಾಡುವಾಗ ತೋರಿ... ಕರ್ತವ್ಯ ಪ್ರಜ್ಞೆ(?) ಹಲ್ಲೆ ನಡೆಸಿದ ಭಜರಂಗಿಗಳ ವಿ... ಬಂದಾಗ ಮಾಯವಾಗಿ ಬಿಡುವುದು ಆಶ್ಚರ್ಯಕರವ...


ಮೊದಲಿನಿಂದಲೂ ಇಂಥದನ್ನೆಲ್ಲಾ ಪ್ರತಿಭಟಿ... ಬಂದಿರುವ PUCL ದೇಸಾರ ಹೋಂ ಆಫೀಸಿಗೆ ಭಜ... ಪುಂಡರು ನುಗ್ಗಲು ಪೊಲೀಸರ ಈ ಕೇಸರಿ ಅ... ಕಾರಣ ಎಂಬುದೀಗ ಸ್ಪಷ್ಟ.

ಪೊಲೀಸ್ ಮುಖ್ಯಸ್ಥ ಶ್ರೀಕುಮಾ... ಆದೇಶವಿದ್ದಾಗಲೂ ಐ.ಜಿ. ಪ್ರಸಾದರು ಸೂಚನೆ ನಿ... ಮೇಲೂ ಮಂಗಳೂರು ಎಸ್.ಪಿ. ಸತೀಶ್‌ಕುಮಾ... ಈವರೆಗೂ ಯಾವೊಬ್ಬ ಭಜರಂಗಿಯನ್ನೂ ಬಂಧಿ...

ದಾವಣಗೆರೆ ಪೊಲೀಸರ ಕೇಸರಿ ಡ್ರಿ...

ಕಳೆದ ನಾಲ್ಕು ತಿಂಗಳಿಂದ ದಾವಣಗೆ... ಜಯನಗರದ ಬಿಎಚ್‌ಎಂ ಚರ್ಚ್‌ಗೆ ಹಾಗೂ ಶಿವಕು... ಬಡಾವಣೆಯ ಏಸು ಪ್ರಾರ್ಥನಾಲಯಕ್ಕೆ ಬಿಜೆಪಿ ಸ... ಬೀಗ ಹಾಕಿಸಿದೆ. ಅವು ಅನಧಿಕೃತ ಚರ್ಚ್‌ಗಳೆಂಬ... ಜಿಲ್ಲಾಡಳಿತ ನಿಲುವು. ಯಾವ ಮಾನದಂಡದಲ್ಲಿ... ಹಾಗೂ ನಗರಸಭೆ ತೀರ್ಮಾನ ಮಾಡಿದರೋ ... ಕಾನೂನಿನ ಬೆಂಬಲವಿದೆಯೋ ಎಂಬುದು ಈಗ... ಖಚಿತ ಪಟ್ಟಿಲ್ಲ. ಡಿಸೆಂಬರ್ 25ರ ಕ್ರಿಸ್‌ಮಸ್ ಅಂಗ... ಬೀಗಮುದ್ರೆ ತೆಗೆಸಿ ಚರ್ಚ್‌ಗಳಲ್ಲಿ ಪ್ರಾರ್ಥನೆಗೆ ಅವ... ನೀಡುವಂತೆ ಕೇಳಲು ಡಿಸಿ ಕಚೇರಿ ಎದುರು ಡಿಸೆಂ... 15 ರಂದು ಜನ ಸೇರುವುದಿತ್ತು. ಇದಕ್ಕೆ ಪೊಲಿ... ಅನುಮತಿಯೂ ಇತ್ತು. ಹಾಗಿದ್ದಾಗಲೂ ಡಿಸೆಂಬರ್... ರ ಬೆಳಗ್ಗೆ ಕೇಸರಿ ಪೊಲೀಸರ ನಾಲಿಗೆ ಹೊರಳಿ 'ಅನು... ಕೊಡಲ್ಲ' ಎನ್ನತೊಡಗಿದರು. ಜನರನ್ನು ಬೆದರಿಸಲು ... ಸೆಕ್ಷನ್ನು ಹಾಕಿದರು.

ಎಸ್‌ಪಿ ಸಂದೀಪ್ ಪಾಟೀಲ್ ಎಂಬ ಕೋಮು... ಪೊಲೀಸ್ ಬಿಜೆಪಿಗಳನ್ನು ಖುಷಿಪಡಿಸಲು ಜನ ಕು... ಶಾಮಿಯಾನವನ್ನು ಕೀಳಿಸಿ ಅವರನ್ನೆಲ್ಲ ಅರೆಸ್ಟ್ ಮಾ... ಶೌರ್ಯ ತೋರಿಸಿಬಿಟ್ಟರು. ದಾವಣಗೆರೆ ಪೊಲಿ... ಇದನ್ನು ಲಾ ಅಂಡ್ ಆರ್ಡರ್ ಸಮಸ್ಯೆ ಎ... ಭಾವಿಸಿದ್ದರು. ಆಶ್ಚರ್ಯವೆ... ಇದಾದ ಕೇವಲ ನಾಲ್ಕೇ ದಿನ... ಬಿಜೆಪಿ ಯುವ ಮೋರ್ಛಾದ... ಒಂದು ಮೆರವಣಿಗೆ ತೆಗೆ... ಪೊಲೀಸರು ಅನುಮತಿ ಕೊ... ಅಲ್ಲದೆ ತಾವೇ ಕೇಸರಿ ಪಟ... ಜೊತೆ ಹೆಜ್ಜೆ ಹಾಕಿದರು.



ರಾಜ್ಯ ಪೊಲೀಸರು ನಿರ್ಲಜ್ಜತನದಿಂದ ಹಿಂದ... ಕೋಮುವಾದಿಗಳ ಕೇಸರಿ ಹಾಲು ಕುಡಿಯುತ್ತಿದ್ದಾರೆಂಬುದಕ್ಕೆ ಇದಕ್ಕಿಂತ ಸಾಕ್ಷಿ ಬೇಕೆ?

ಜನ ಇದನ್ನೆಲ್ಲಾ ನೋಡುತ್ತಿದ್ದಾರೆ-ಮಾಧ್ಯಮ... ಇಂಥ ಘಟನೆಗಳು ಭಾಗಶಃ ವರದಿಯಾಗುತ್ತಿವೆ... ಆದರೆ ಇದರ ಅಂತಿಮ ಪರಿಣಾಮಗಳೇನೆಂದು ... ಪೊಲೀಸ್ ಮುಖ್ಯಸ್ಥರು ಗಂಭೀರವಾಗಿ ಯೋಚಿ... ಈ ಘಟನೆಗಳು ಹಿಂದೂತ್ವವಾದಿ ಫ್ಯಾಸಿಸ್ಟ... ಹೊರತುಪಡಿಸಿ ಉಳಿದೆಲ್ಲಾ ನಾಗರಿಕರಲ್ಲಿ ಭಯ ... ಹುಟ್ಟಿಸುತ್ತಿರುವುದು ನಿಜ.

ಆದರೆ ಆ ಭೀತಿ ಮುಂದೆ ಆಕ್ರೋಶವಾಗಿ ಸ್ಫೋಟಿ... ಮಾನ ಹೋಗುವುದು ಪೊಲೀಸ್ ವ್ಯವಸ್ಥೆಯದ್ದೆ!

■ ಪಾರ್ವತಿ...

ನ್ಯಾ. ಸೋಮಶೇಖರ್ ಆಯೋಗ ನೀಡಿರುವ ರಿಲೀಫ್ ಬಗ್ಗೆ!


ಬೀಗಮುದ್ರೆ ಹಾಕಿರುವ ದಾವಣಗೆರೆಯ ಎರಡು ಚರ್ಚ್‌ಗಳನ್ನು ಡಿಸೆಂಬರ್ 17 ರಿಂದ ಜನವರಿ 1 ರವರೆಗೂ ತೆರೆದಿಡುವಂತೆ ನ್ಯಾ. ಬಿ.ಕೆ. ಸೋಮಶೇಖರ್ ಆಯೋ... ಆದೇಶ ನೀಡಿದೆ. ದಾವಣಗೆರೆಯ ಕ್ರಿಶ್ಚಿಯನ್ ಸಮುದಾಯಕ್ಕೆ ಇದೊಂದು ಸಣ್ಣ ರಿಲೀಫ್‌ನಂತೆ ಕಂಡರೂ ಅದರೊಂದಿಗೇ ವಿಧಿಸಿರುವ ಶರತ್ತುಗಳನ್ನು ಗಮನಿಸಿದರೆ ಆಶ್ಚರ್ಯವಾಗುವ... ಈ ಚರ್ಚ್‌ಗಳ ಅಧಿಕೃತ ದಾಖಲೆ ಪತ್ರ ತೋರಬೇಕು. ಚರ್ಚ್‌ಗೆ ಬರುವ ಪ್ರತಿಯೊಬ್ಬರ ವಿವರಗಳನ್ನು ಕೊಡಬೇಕು. ಪೊಲೀಸ್ ಹಾಗೂ ಜಿಲ್ಲಾಡಳಿತ ಯಾವಾಗ ಬೇಕಾದ... ಈ ಪ್ರಾರ್ಥನಾ ಮಂದಿರಗಳನ್ನು ಪ್ರವೇಶಿಸುವ ಹಕ್ಕು ಹೊಂದಿರುತ್ತಾರೆ. ಚರ್ಚ್‌ನೊಳಗೆ ಪ್ರಚೋದನಕಾರಿ ಕೆಲಸ ನಡೆಯಕೂಡದು... ಷರತ್ತುಗಳ ಸರಮಾಲೆ ಹೀಗೆ ಮುಂ... ಮರೆಯುತ್ತವೆ. ಇದೇ ವೇಳೆ ಚುರುಕಾದ ಸಂಘ ಪರಿವಾರ ಪಾದ್ರಿ ರಾಜಶೇಖರ್ ಹಾಗೂ ಕರುಣಾಕರ್ ಎಂಬುವರು ಡಿಸೆಂಬರ್ 18 ರ ನಡುರಾತ್ರಿ ಬಸವರಾಜಯ್ಯ ಎಂಬ... ಮೇಲೆ ಚೂಪಾದ ಆಯುಧದಿಂದ ದಾಳಿ ಮಾಡಿದ್ದಾರೆಂದು ಸುಳ್ಳು ದೂರು ಕೊಟ್ಟಿದ್ದಾರೆ. ಈ ನಾಟಕ ಭಾಗವಾಗಿ ಪೊಲೀಸರೇ ಬಸವರಾಜಯ್ಯನನ್ನು ಆಸ್ಪತ್ರೆಗೆ ದಾಖಲಿಸಿದ... ಹೇಳಿಕೊಂಡಿದ್ದಾರೆ. ಈ ನಾಟಕ ಯಾಕೆ ಗೊತ್ತೆ? ನ್ಯಾ. ಸೋಮಶೇಖರ್‌ರ ಆದೇಶದಂತೆ ಈ ಚರ್ಚ್‌ಗಳ ಬಾಗಿಲು ತೆಗೆದರೂ ಅಲ್ಲಿಗೆ ಪಾದ್ರಿಗಳು ಬರದಂತೆ ತಡೆಯಲು! ಪೊಲೀಸ್ ಕೇಸಿಗೆ ಹೆದರಿ ಈ ಪಾದ್ರಿಗಳಿಬ್ಬರು ಊರು ಬಿಡುವಂತೆ ಮಾಡಿದರೆ ಕ್ರಿಸ್‌ಮಸ್ ದಿನ ಪ್ರಾರ್ಥನೆ ನಡೆಯದಂತೆ ತಡೆಯೊಡ್ಡಬಹುದಲ್ಲ! ದಾವಣಗೆರೆ ಎಸ್... ಸಂದೀಪ್ ಪಾಟೀಲ್ ದಿನಕ್ಕೆಷ್ಟು ಲೀಟರ್ ಕೇಸರಿ ಹಾಲು ಕುಡಿಯುತ್ತಿರಬಹುದು ಯೋಚಿಸಿ ನೋಡಿ.

ಮತ್ತೊಂದು ಜಂಪ್‌ಗೆ 'ಬಂ' ರೆಡಿ

ಶಿವಮೊಗ್ಗದ ಕಾಂಗ್ರೆಸ್ ನಾಯಕರೀಗ 'ಬಂ' ಭಜನೆ ಆರಂಭಿಸಿದ್ದಾರೆ. ಬಂಗಾರಪ್ಪರನ್ನು ಕಾಂಗ್ರೆಸ್‌ಗೆ ಸೇರಿಸಿಕೊಳ್ಳಬೇಕೆಂದು ಒಮ್ಮತದ ನಿರ್ಣಯ ತೆಗೆದುಕೊಂಡು ಹೈಕಮಾಂಡ್‌ಗೆ ಕಳುಹಿಸಿಕೊಟ್ಟಿದ್ದಾರೆ. ಹಿಂದೆಲ್ಲಾ ಬಂಗಾರಪ್ಪರನ್ನು ಮತ್ತೆ ಪಕ್ಷಕ್ಕೆ ಸೇರಿಸಿಕೊಳ್ಳಲೇಬಾರದು ಎಂದು ಕೂಗಾಡುತ್ತಿದ್ದವರೇ ಈಗ ಇದಕ್ಕಾಗಿಯೇ ಸಭೆ ನಡೆಸಿ ನಿರ್ಣಯ ತೆಗೆದುಕೊಂಡಿದ್ದಾರೆಂದರೆ ಬಿಜೆಪಿ 'ಹೊಡೆತ' ಕ್ಕೆ ಇವರೆಲ್ಲಾ ಎಷ್ಟು ಹೆದರಿದ್ದಾರೆ ಎಂಬುದು ಗೊತ್ತಾಗುತ್ತದೆ.

ಶಿವಮೊಗ್ಗ ಜಿಲ್ಲೆಯಲ್ಲಿ ಕುಂಟುತ್ತಾ ಸಾಗಿದ್ದ ಬಿಜೆಪಿಗೆ ಒಂದು ವಿಶಾಲ ವೇದಿಕೆ ಕಲ್ಪಿಸಿದವರೇ ಈ ಬಂಗಾರಪ್ಪ. ತಾವು ಬಿಜೆಪಿ ಸೇರಿ ಶಿವಮೊಗ್ಗದ ಪುಡಿ ರಾಜಕಾರಣಿಗಳಿಗೆ ಸಿದ್ಧಾಂತಗಳ ಬಗ್ಗೆ ಗೌರವ ಇಲ್ಲದಹಾಗೆ ಮಾಡಿ, ಶಿವಮೊಗ್ಗದ ರಾಜಕೀಯವನ್ನು ಹೆಚ್ಚು ಕಡಿಮೆ ನಿಯಂತ್ರಿಸುತ್ತಿದ್ದ ಇಡೀ ಈಡಿಗ ಸಮುದಾಯ ಬಿಜೆಪಿಗೆ ತೆರೆದುಕೊಳ್ಳುವಂತೆ ಮಾಡಿದ ಕೀರ್ತಿ ಈ 'ಬಂ'ಗೇ ಸೇರಬೇಕು.

ಈ ಕಾರಣಕ್ಕಾಗಿ ಶಿವಮೊಗ್ಗ ಜಿಲ್ಲೆಯ ಕಾಂಗ್ರೆಸಿಗರು ಮತ್ತು ಜನತೆ 'ಬಂ'ರನ್ನು ಎಂದಿಗೂ ಕ್ಷಮಿಸಬಾರದಿತ್ತು. ದುರಂತವೆಂದರೆ ಈಗ ಬಿಜೆಪಿ ವಿರುದ್ಧ ಹೋರಾಡಲು ಕಾಂಗ್ರೆಸ್ಸಿಗರಿಗೆ ಈ ಬಂಗಾರಪ್ಪರೇ ಬೇಕಾಗಿದ್ದಾರೆ. ಒಡೆದು ಹೋಗಿರುವ ಈಡಿಗ ಸಮುದಾಯವನ್ನು ಮತ್ತೆ ಒಟ್ಟು ಮಾಡಲು ಇಳಿವಯಸ್ಸಿನ ಬಂಗಾರಪ್ಪರಿಂದ ಸಾಧ್ಯ ಎಂಬ ಭ್ರಮೆಯಲ್ಲಿ ಇವರಿದ್ದಾರೆ. ಆದರೆ ಕಾಲ ಮೀರಿ ಹೋಗಿದೆ, ಜಿಲ್ಲೆಯ ಬಿಜೆಪಿ ನಾಯಕರು ರಾಜಕೀಯ ಚತುರತೆ ತೋರಿ, ಈಡಿಗ ಸಮುದಾಯ ಮತ್ತೆ ಹಿಂದಿನಂತೆ ಒಗ್ಗೂಡದಂತೆ ಒಡೆದಿದ್ದಾರೆ.




ತಮ್ಮ ಲಾಭಕ್ಕಾಗಿ ರಾಜಕೀಯ ತಂತ್ರ ಹೂಡುವುದರಲ್ಲಿ ಹೆಸರುವಾಸಿಯಾಗಿದ್ದ 'ಬಂ' ಮುಂದೇನು ಮಾಡುತ್ತಾರೆಂಬುದಷ್ಟೇ ಈಗಿನ ಕುತೂಹಲ.

ಅಧಿಕಾರದಲ್ಲಿದ್ದಾಗ ಹುಂಬನಂತೆ ವರ್ತಿಸಿದ ಕಾಗೋಡು ತಿಮ್ಮಪ್ಪ, ಯಾವತ್ತೂ ಎಲ್ಲಾ ಮುಖಂಡರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋದವರಲ್ಲ, ಈಗಲೂ ಅಷ್ಟೇ, ಕೆಪಿಸಿಸಿ ಕಚೇರಿಯಲ್ಲಿ ದೊಡ್ಡ ನಾಯಕರಂತೆ ಪೋಸ್ ನೀಡುವುದನ್ನು ಬಿಟ್ಟರೆ ಜಿಲ್ಲೆಯಲ್ಲಿ ಪಕ್ಷ ಬೆಳೆಸುವುದರತ್ತ ಒಂದಿಷ್ಟೂ ಗಮನ ನೀಡುತ್ತಿಲ್ಲ.

ಜಿಲ್ಲೆಯಲ್ಲಿನ ಬಿಜೆಪಿಯ ಭ್ರಷ್ಟ ಆಡಳಿತದ ವಿರುದ್ಧ ಸಂಘಟಿತ ಹೋರಾಟ ನಡೆಸುವಲ್ಲಿ ಜಿಲ್ಲೆಯ ಕಾಂಗ್ರೆಸ್ ಮುಖಂಡರು ವಿಫಲರಾಗಿದ್ದಾರೆ. ಜಿಲ್ಲಾ ಕಚೇರಿ ಆವರಣದಲ್ಲಿ ಪ್ರತಿಭಟನೆ ನಡೆಸಬೇಡಿ ಎಂದು ಜಿಲ್ಲಾಧಿಕಾರಿ ಆದೇಶ ನೀಡಿದರೆ ಇವರ ಬಾಯಿಯಿಂದ ಮಾತೇ ಹೊರಡುತ್ತಿಲ್ಲ, ರೈತ ನಾಯಕರ ಮೇಲೆ ಕೇಸ್ ಹಾಕಿದರೆ ಅದು ತಮಗೆ ಸಂಬಂಧಿಸಿದ ವಿಷಯವಲ್ಲ ಎಂದು ಸುಮ್ಮನಾಗುತ್ತಿದ್ದಾರೆ. ದಂಡಾವತಿ ಯೋಜನೆಯಂತಹ ಪ್ರಮುಖ ನಿರ್ಧಾರದ ಬಗ್ಗೆ ಪಕ್ಷದ ನಿಲುವು ಏನಾಗಬೇಕೆಂಬ ಸಣ್ಣ ಚರ್ಚೆಯನ್ನೂ ಈ ನಾಯಕರು ನಡೆಸಿಲ್ಲ. ಪಾಪ ವಿರೋಧ ಪಕ್ಷದ ಕೆಲಸವನ್ನೂ ಬಿಜೆಪಿ ಶಾಸಕರೇ ಮಾಡಬೇಕಾಗಿದೆ.

ಇದ್ದಿದ್ದರಲ್ಲಿ ತೀರ್ಥಹಳ್ಳಿ ಶಾಸಕ ಕಿಮ್ಮನೆ ರತ್ನಾಕರ್ ಮಾತ್ರ ಬಿಜೆಪಿಯವರು ನಿದ್ರೆಗೆಡುವಂತೆ ಮಾಡುತ್ತಾ ಓಡಾಡಿಕೊಂಡಿದ್ದಾರೆ. ಶಿವಮೊಗ್ಗದಲ್ಲಿ ಕುಳಿತು ಈ ಎಲ್ಲ ಕೆಲಸ ಮಾಡಬೇಕಾಗಿದ್ದ 'ಕಾತಿ' ಈಗ ಹಳೇ ವೈರಿ 'ಬಂ'ರ ಹಿಂದೆ-ಮುಂದೆ ಸುತ್ತುತ್ತಿದ್ದಾರೆ. ಇದನ್ನೆಲ್ಲಾ ಗಮನಿಸಿದಾಗ ಮೊನ್ನೆ ನಡೆದ ಕಾಂಗ್ರೆಸ್ ಸಭೆಯಲ್ಲಿ 'ಕಾತಿ' ನೇತೃತ್ವದಲ್ಲಿಯೇ ಮುಂದಿನ ಚುನಾವಣೆ ಎದುರಿಸಬೇಕೆಂದು ತೀರ್ಮಾನ ತೆಗೆದುಕೊಂಡಿರುವುದು ನಗೆ ಬಾರಿಸದೇ ಇರದು.



'ಬಂ'ರ ಸೂಚನೆಯಂತೆಯೇ ಜಿಲ್ಲಾ ಕಾಂಗ್ರೆಸ್ ನಾಯಕರು ಅವರನ್ನು ಸ್ವಾಗತಿಸುವ ತೀರ್ಮಾನ ತೆಗೆದುಕೊಂಡಿದ್ದಾರೆ. ನೆಲೆಯೇ ಇಲ್ಲದ ಸಮಾಜವಾದಿ ಪಕ್ಷದಲ್ಲಿರುವ 'ಬಂ'ಗೆ ಈಗ ಕಾಂಗ್ರೆಸ್ ಪಕ್ಷದ ಬಲ ಬೇಕೇ ಬೇಕಾಗಿದೆ. ಅಲ್ಲದೆ ಈ ಹಿಂದೆ ನಡೆದ ಚುನಾವಣೆ ಸಂದರ್ಭದಲ್ಲಿಯೇ ಸಮಾಜವಾದಿ ಪಕ್ಷದ ವರಿಷ್ಠರು ಒಂದು ಪೈಸೆಯೂ ಕೊಡುವುದಿಲ್ಲ ಎಂಬುದು ಸಾಬೀತಾಗಿದೆ. ದುಡ್ಡು ಬಾರದಿದ್ದರೆ ಆ ಪಕ್ಷದಲ್ಲಿ ಏಕೆ ಇರಬೇಕೆಂಬುದು 'ಬಂ'ರ ಪ್ರಶ್ನೆ. ಹೀಗಾಗಿ ಹಳೇ ಮನೆಯೇ ಗತಿ ಎಂದು ಕಾಂಗ್ರೆಸ್‌ಗೆ ಜಂಪ್ ಮಾಡಲು ನಿರ್ಧರಿಸಿದ್ದಾರೆ. ಜಂಪ್ ಮಾಡುವಾಗ ಮುಗ್ಗರಿಸಿ ಬೀಳುವ ಸಾಧ್ಯತೆಗಳೂ ಇಲ್ಲದಿಲ್ಲ.

ಹೇಗಾದರೂ ಮಾಡಿ ಅಧಿಕಾರ ಉಳಿಸಿಕೊಂಡರೆ ಸಾಕು ಎನ್ನುವ ಹಂತದಲ್ಲಿರುವ 'ಬಂ'ಗೆ ಈಗ ರಾಜಕೀಯ ಮಹತ್ವಾಕಾಂಕ್ಷೆಗಳಿದ್ದಂತೆ ಕಾಣುತ್ತಿಲ್ಲ, ಹೀಗಾಗಿ ಅವರ ಸೇರ್ಪಡೆಗೆ ಹೆಚ್ಚಿನ ವಿರೋಧ ವ್ಯಕ್ತವಾಗದು. ಆದರೆ ಅವರು ರಾಜಕೀಯದಲ್ಲಿ ಮತ್ತೆ ಯಶಸ್ವಿಯಾಗಬೇಕೆಂದರೆ ಮೊದಲು ಮುರಿದು ಹೋಗಿರುವ ತಮ್ಮ ಮನೆಯನ್ನು ರಿಪೇರಿ ಮಾಡಿಕೊಳ್ಳಬೇಕು. ಆಗ ಅಳಿದುಳಿದ ಈಡಿಗ ನಾಯಕರಿಗೂ ವಿಶ್ವಾಸ ಮೂಡಿತು. ಏನೇ ಆಗಲಿ ಈ ಬೆಳವಣಿಗೆಯಿಂದ ಹತಾಶರಾಗಿದ್ದ ಶಿವಮೊಗ್ಗ ಜಿಲ್ಲಾ ಕಾಂಗ್ರೆಸ್ ನಾಯಕರಲ್ಲಿ ಮತ್ತೆ ಒಂದಿಷ್ಟು ವಿಶ್ವಾಸ ಮೂಡಿದಂತಾಗಿದೆ.

ಬಂಗಾರಪ್ಪಗೆ 'ಬಂ'ಎಂದು ನಾಮಕರಣ ಮಾಡಿದ್ದ ಲಂಕೇಶ್ ಮೇಷ್ಟ್ರು ಬಂಗಾರಪ್ಪನನ್ನು 'ಮರದಿಂದ ಮರಕ್ಕೆ ಹಾರುವ ಮಂಗ' ಎಂದಿದ್ದರು. ಈಗ ಮತ್ತೊಂದು ಹಾರಾಟಕ್ಕೆ ಈ ಮಂಗ ಸಜ್ಜಾಗಿದೆ! ■

ನೈಸ್ ರಸ್ತೆ ಮಾಡಿಕೊಂಡಿದ್ದು ನಾನು ಓಡಾಡಲಿಕ್ಕೆ ಕಂಡ್ರಿ!

ಥೂತ್ತೇರಿ

ಯಾಹೂ

ಕರ್ನಾಟಕದ ರಾಜಕಾರಣ ದಿಕ್ಕು ದೆಸೆಯಿಲ್ಲದ ಹುಚ್ಚರ ಸಂತೆಯಾಗಿದೆಯಂತಲ್ಲಾ, ತಾವೇ ಕೆರೆದು ಮಾಡಿಕೊಂಡ ಗಾಯಕ್ಕೆ ಸೊಪ್ಪು ತರೆದು ತಿಕ್ಕಿದಂತೆ ಕಾಣುತ್ತಿರುವ ಉಪಚುನಾವಣೆ ಪ್ರಸಂಗದಲ್ಲಿ ಮಾತನಾಡುತ್ತಿರುವ ಮಹಾ ಲೀಡರುಗಳ ಭಾಷಣ ಕೇಳುತ್ತಿರುವ ಕರ್ನಾಟಕದ ಮತದಾರನ ತಲೆ ಕೆಟ್ಟು ಕೆರಹಿಡಿದು, ಸದ್ಯದಲ್ಲಿಯೇ ಯಾರಿಗಾದರೂ ಭಾರಿಸಲಿದ್ದಾನಂತಲ್ಲಾ, ಏಕೆಂದರೆ ಸದಾನಂದಗೌಡ "ಕಾಂಗ್ರೆಸ್, ಜೆಡಿಎಸ್ ಒಂದಾಗಿವೆ" ಎಂದರೆ ಕುಮಾರಣ್ಣ "ಬಿಜೆಪಿ, ಕಾಂಗ್ರೆಸ್ ಒಂದಾಗಿವೆ" ಎನ್ನತೊಡಗಿದ್ದಾನೆ. ಇನ್ನು ಕಾಂಗ್ರೆಸ್‌ನವರು ಈ ಆಪಾದನೆಗೆ ಯಾರು ಪ್ರತಿಕ್ರಿಯಿಸಬೇಕೆಂದು ಯೋಚಿಸುತ್ತ ಹಾಗೆ ಸುಮ್ಮನಾಗಿವೆಯಂತೆ. ಈ ಗೊಂದಲದಲ್ಲಿ ಮತದಾರನಿಗೆ ಯಾರು ಯಾರಿಗೆ ವೈರಿ? ತಾನು ಯಾರ ಪರ ನಿಲ್ಲಬೇಕೆಂಬುದೇ ಮರೆತು ಹೋಗಿದೆಯಂತಲ್ಲ, ಥೂತ್ತೇರಿ!

* * * * * *

ಇತ್ತ ಮುಖ್ಯಮಂತ್ರಿಯ ಪದವಿ ವ್ಯಸನದಿಂದ ಮೂಲೆಹಿಡಿದಿರುವ ಸಿದ್ದರಾಮಯ್ಯ ತನ್ನಿಂದಲೇ ಕಾಂಗ್ರೆ ಉದ್ಧಾರವಾಗುವುದೆಂಬ ಭ್ರಮೆಯಲ್ಲಿರುವಾಗಲೇ, ಅತ್ತ ಕರ್ನಾಟಕದ ಹಿಂದುಳಿದ ವರ್ಗದ ನಾಯಕ ಬಂಗಾರಪ್ಪ ವಯಸ್ಸಾದ ಜೋಗತಿ ಯಲ್ಲವ್ವನ ಗುಡ್ಡದ ಕಡೆ "ಉಧೋ ಉಧೋ" ಎಂದು ಹೊರಟಂತೆ ಕಾಂಗ್ರೆಸ್ ಕಡೆ ಹೊರಟಿದ್ದಾರಂತಲ್ಲಾ, ಕಾಂಗ್ರೆ ಮತ್ತು ಬಂ ನಡುವೆ ಪೂಜಾರಿಕೆ ವಹಿಸಿರುವ ಕಾಗೋಡು ತಿಮ್ಮಪ್ಪ "ಈ ಮನೆಹಾಳು ಬಂಗಾರಿಯನ್ನು ಕಾಂಗ್ರೆಸ್ಸಿಗೆ ಸೇರಿಸುವುದೊ ಅಥವಾ ಸಪೋರ್ಟು ಮಾಡಿ ಲೋಕಸಭೆಗೆ ದಬ್ಬುವುದೊ" ಎಂಬ ಆಲೋಚನೆಯಲ್ಲಿ ಮುಳುಗಿರುವಾಗಲೇ, ಬಂ ಕಾಂಗ್ರೆಸ್‌ನ ಪ್ರಾಥಮಿಕ ಸದಸ್ಯತ್ವ ಪಡೆದಂತೆ ಓಡಾಡುತ್ತಿದ್ದಾರಂತಲ್ಲಾ, ಥೂತ್ತೇರಿ!

* * * * * *

ದಶದಿಕ್ಕಿನಿಂದಲೂ ವೈರಿಗಳನ್ನು ಸೃಷ್ಟಿಸಿಕೊಂಡು ಹೋರಾಡುವ ಆಧುನಿಕ ದಶರಥರಾದ ದೇವೇಗೌಡರು "ಕರ್ನಾಟಕವನ್ನು ಪೇಣಿ ಮಾಡಿಕೊಂಡು ಮೆಲ್ಲುತ್ತಿರುವ ಖೇಣಿ ಎಂಬ ಕಂಟ್ರಾಕ್ಟರ್ ಮತ್ತು ಎಡೂರಪ್ಪ ಇಬ್ಬರೂ ಅಪೂರ್ವ ಸಹೋದರರು. ಇವರಿಬ್ಬರ ಒಳ ಒಪ್ಪಂದಗಳಿಂದ ಕರ್ನಾಟಕ ಯಕ್ಕ ಎದ್ದು ಹೋಗಲಿದೆ" ಎಂದರಂತಲ್ಲಾ, "ಇದಕ್ಕೆ ತಮ್ಮ ಕಾಣಿಕೆಯೂ ಇದೆಯಲ್ಲಾ ನಾಯಕರೆ? ಖೇಣಿ ರಸ್ತೆ ನಿರ್ಮಾಣದ ಗುತ್ತಿಗೆಗೆ ತಾವೇ ಸಹಿ ಮಾಡಿರುವುದನ್ನು ಮರೆತಿರಾ?" ಎಂದು ಗೌಡರನ್ನು ಕೇಳಿದರೆ, "ಆಗ ಈ ಖೇಣಿ ನನ್ನಂಥ ತುಂಡುಗುತ್ತಿಗೆ ಮನುಷ್ಯ ಆಗಿದ್ದ. ಬದುಕಿಕೊಳ್ಳಲಿ ಎಂದು ಸಹಿ ಮಾಡಿದೆ. ಆದರೆ ಈತ ರೈತರನ್ನು ಒಕ್ಕಲೆಬ್ಬಿಸಿ ರಸ್ತೆ ಮಾಡಿಬಿಟ್ಟಿದ್ದಾನೆ. ಆತನ ರಸ್ತೆಯಲ್ಲಿ ಯಾರೂ ಓಡಾಡಬೇಡಿ" ಎಂದರಂತಲ್ಲಾ, ಗೌಡರ ಈ ಆಜ್ಞೆ ವಿಷಯ ಖೇಣಿಗೂ ಗೊತ್ತಾಗಿ "ನಾನು ನೈಸ್ ರಸ್ತೆ ಮಾಡಿಕೊಂಡಿರುವುದು ನಾನೇ ಓಡಾಡುವುದಕ್ಕಾಗಿಯೇ ಹೊರತು ಸಾರ್ವಜನಿಕರಿಗಲ್ಲ, ಅವರಿಗಾಗಿ ಸರ್ಕಾರಿ ರಸ್ತೆಗಳಿವೆ" ಎಂದನಂತಲ್ಲಾ, ಥೂತ್ತೇರಿ!


* * * * * *

ಅತ್ತ ಲೋಕಾಯುಕ್ತ ಸಂತೋಷ್ ಹೆಗಡೆ ಅಕ್ರಮ ಗಣಿಗಾರಿಕೆಯನ್ನು ತನಿಖೆ ಮಾಡಿ ವರದಿ ತಯಾರಿಸಿಕೊಂಡು ಬಂದರೆ, ಅದನ್ನ ನೋಡಿದ ಎಡೂರಪ್ಪ ಮುಖದಲ್ಲಿ ಯಾವ ಭಾವನೆಯನ್ನು ತೋರದೆ "ಇಂತಹ ಅಕ್ರಮ ಜರುಗಿರುವುದು ಕಾಂಗ್ರೆಸ್ ಕಾಲದಲ್ಲಿ, ನನ್ನ ಕಾಲದಲ್ಲಂತೂ ಒಂದು ಟನ್ ಅದಿರಿನ ಅಕ್ರಮವೂ ನಡೆದಿಲ್ಲ. ಅಷ್ಟಕ್ಕೂ ನಿಮ್ಮ ಈ ಶ್ರಮವನ್ನು ಮೆಚ್ಚಿ ತಪ್ಪಿತಸ್ಥರಿಗೆ ಯಾವ ಪರಿ ಶಿಕ್ಷೆ ನೀಡಬೇಕೆಂಬ ಬಗ್ಗೆ ಮೂರು ಮುಕ್ಕಾಲು ಜನರ ಮತ್ತೊಂದು ಸಮಿತಿ ನೇಮಿಸುತ್ತೇನೆ" ಎಂದರಂತಲ್ಲಾ, "ಸ್ವಾಮಿ, ಸದರಿ ತನಿಖಾ ವರದಿ ಕೇವಲ ಹತ್ತು ಗಣಿಗಳದ್ದು, ಇನ್ನು ನೂರಹತ್ತು ಗಣಿಗಳ ತನಿಖೆಯಾಗಬೇಕಿದೆ" ಎಂದರಂತಲ್ಲಾ, ಥೂತ್ತೇರಿ!

* * * * * *

ಅತ್ತ ಅಕ್ರಮ ಗಣಿಗಾರಿಕೆ ತನಿಖೆ, ಇತ್ತ ಗಣಿ ಲೂಟಿಯಿಂದಲೇ ಸಂಪುಟ ಸಚಿವರಾಗಿರುವ ಗಣಿಕಳ್ಳರು ಎಸ್ಪಿ, ಡಿಸ್ಸಿ, ತಹಸೀಲ್ದಾರ್ ಮತ್ತು ಎ.ಸಿ. ಸಮೇತ ಮನೆಯಲ್ಲೇ ಮೀಟಿಂಗ್ ಮಾಡುತ್ತ ಎಡೂರಪ್ಪನ ಇಬ್ಬಂದಿ ಬದುಕಿನ ಫಜೀತಿಯನ್ನು ಚರ್ಚಿಸುತ್ತಾ ನಗುತ್ತಿದ್ದಾರಂತಲ್ಲಾ. ಇಡೀ ಬಳ್ಳಾರಿ ಜಿಲ್ಲಾ ಅಧಿಕಾರಿಗಳು ಜನಾರ್ದನ ರೆಡ್ಡಿಯ ಗುಲಾಮರಂತೆ ವರ್ತಿಸುತ್ತಿರುವಾಗ, ಇದೆಲ್ಲದರಿಂದ ತಲೆರೋಸಿ ಹೋದ ಎಡೂರಪ್ಪ ಡಾಕ್ಟರೇಟ್ ಪಡೆದ ಸಂತೋಷದಲ್ಲೇ ಮೈಮರೆತಿದ್ದಾರಂತಲ್ಲಾ, ಎಡ್ಯೂರಪ್ಪನಿಗೆ ಡಾಕ್ಟರೇಟ್ ಯಾಕೆ ಸಿಕ್ಕಿತು ಎಂದು ಇಡೀ ಕರ್ನಾಟಕವೇ ತಲೆ ಕೆರೆಯುತ್ತ ಕುಳಿತಿರಬೇಕಾದರೆ, ರಾಮಚಂದ್ರಗೌಡನೆಂಬ ವೃದ್ಧ ವಿಧವೆ "ಇಡೀ ಪ್ರಪಂಚದಲ್ಲಿ ರೈತರು ಪಡೆದ ಸಾಲವನ್ನು ಹೇಗೆ ಬಳಸುತ್ತಾರೆಂಬ ಸತ್ಯ ಕಂಡುಹಿಡಿದವರೇ ಎಡೂರಪ್ಪ, ಅದಕ್ಕೆ ಅವರಿಗೆ ಗೌರವ ಡಾಕ್ಟರೇಟ್ ಪದವಿ ಸಿಕ್ಕಿದೆ" ಎಂದು ಗಂಭೀರವಾಗಿಯೇ ಹೇಳಿದರಂತಲ್ಲಾ, "ಸರಿ ಸ್ವಾಮಿ, ರೈತರು ಗೊಬ್ಬರ ಕೇಳಿದ್ದಕ್ಕೆ ಗೋಲಿಬಾರ್ ಮಾಡಿದರಲ್ಲಾ, ಅದಕ್ಕೇನು ಹೇಳುತ್ತೀರಿ?" ಎಂದರೆ "ನಿಜಕ್ಕೂ ಆಗ ಗೊಬ್ಬರ ಬೇಕಿರಲಿಲ್ಲ, ಜನರ ಬಳಿ ಚುನಾವಣಾ ಅಭ್ಯರ್ಥಿಗಳು ಕೊಟ್ಟ ಹಣವಿತ್ತು, ತಡವಾದರೆ ಖರ್ಚಾಗಿ ಬಿಡುತ್ತದೆ, ಈಗಲೇ ಗೊಬ್ಬರ ಕೊಳ್ಳೋಣ ಎಂದು ಹೋಗಿದ್ದರು. ಗಲಭೆಯಾಯ್ತು, ಗೋಲಿಬಾರಾಯ್ತು, ಇದಕ್ಕೂ ಎಡೂರಪ್ಪನಿಗೂ ಎಳ್ಳೆ ಕಾಳಿನಷ್ಟು ಸಂಬಂಧವಿಲ್ಲ" ಎಂದನಂತಲ್ಲಾ, ಥೂತ್ತೇರಿ!

* * * * * *



ಇತ್ತ ಸಾಹಿತ್ಯ ಲೋಕದ ಸುದ್ದಿಗಳು ಶ್ಯಾನೆ ಸ್ವಾರಸ್ಯವಾಗಿವೆಯಂತಲ್ಲಾ, ಚಿತ್ರದುರ್ಗ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ, ಮದಕರಿ ನಾಯಕನ ಮರಿಮಗನಂತೆ ಮೆರೆಯಲು ತಯಾರಿ ನಡೆಸಿದ್ದ ನಮ್ಮ ಚಿ.ಮು., ಎಲ್. ಬಸವರಾಜು ಆಯ್ಕೆಯಾದ ಸುದ್ದಿ ಕೇಳಿ ಬೇಜಾರಿನಿಂದಲೇ ಹಂಪಿ ನಗರದಲ್ಲಿ ಅತ್ತಇತ್ತ ಓಡಾಡುತ್ತಿದ್ದಾರಂತಲ್ಲಾ, ಅಕಸ್ಮಾತ್ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರೆ ಭೈರಪ್ಪನ ವಾದವನ್ನು ಮೀರಿಸುವಂತಹ ಭಾಷಣ ಬರೆದುಕೊಂಡು ಚಿತ್ರದುರ್ಗವನ್ನೆ ಬೆಚ್ಚಿಸಲು ತಯಾರಿ ನಡೆಸಿದ್ದ ಚಿ.ಮು. ಏನಾದರೂ ಅಧ್ಯಕ್ಷರಾದರೆ ಪರ್ಯಾಯ ಸಮ್ಮೇಳನ ನಡೆಸಬೇಕಾಗುತ್ತದೆಂದು ವೀರ ಕನ್ನಡಿಗರು ತಯಾರಾಗುತ್ತಿರುವಾಗಲೇ ಅವರೆಲ್ಲಾ ಕಾರ್ಯಕ್ರಮ ರದ್ದಾದವಂತಲ್ಲಾ, ಥೂತ್ತೇರಿ!

* * * * * *

ಚಿ.ಮು. ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗದಿರುವುದಕ್ಕೆ ಶಾನೆ ಬೇಸರವಾಗಿರುವ ಚೆಡ್ಡಿಗಳು "ಇರಲಿ, ಮುಂದಿನ ವರ್ಷ ಅದು ಹೇಗೆ ಚಿ.ಮು. ಆಯ್ಕೆಯಾಗುವುದಿಲ್ಲವೊ ನಾವು ನೋಡುತ್ತೇವೆ" ಎಂದು ಗೊಣಗುತ್ತಿವೆಯಂತಲ್ಲಾ, ಈ ಮಧ್ಯೆ ಚಿತ್ರದುರ್ಗದ ಲಿಂಗವಂತ ಚೆಡ್ಡಿಗಳು ದುಷ್ಟ ಚತುಷ್ಟಯರಂತೆ ಸೇರಿಕೊಂಡು "ಚಿ.ಮು. ಆಯ್ಕೆ ಮಾಡದಿರುವುದರಿಂದ ಸಾಹಿತ್ಯ ಪರಿಷತ್ ತನ್ನ ಗೌರವವನ್ನು ತಾನೇ ಕಳೆದುಕೊಂಡಿದೆ. ಅದು ತನ್ನ ಗೌರವವನ್ನ ಮರಳಿ ಪಡೆಯಬೇಕಾದರೆ ಚಿ.ಮು. ಅಧ್ಯಕ್ಷರಾಗಲೇಬೇಕು" ಎಂದು ಪತ್ರಿಕೆಗಳಿಗೆ ಪತ್ರ ಬರೆದು ಕಾರ ಮಂಡಕ್ಕಿ ಮುಕ್ಕುತ್ತ ಜಾಗ ಖಾಲಿ ಮಾಡಿದವಂತಲ್ಲಾ, ಥೂತ್ತೇರಿ! ■

ಆನಂದ್ ಮನೆಗೆ, ಸತೀಶ್ ವಿಧಾನಸೌಧಕ್ಕೆ?!



ಆನಂದ್ ಅಸ್ನೋಟಿಕರ್

ಅಂಕೋಲದಲ್ಲಿ ಉಪಚುನಾವಣೆಯ ಬಿಸಿ ಏರಿದೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಗೆದ್ದಿದ್ದ ಆನಂದ ಆಸ್ನೋಟಿಕರ್ ಎಂಬ ಮರಿಆನೆ ಹಣ ಮತ್ತು ಅಧಿಕಾರದಾಸೆಗೆ ಬಿದ್ದು ಗೆದ್ದ ನಲವತ್ತೇ ದಿನಗಳಲ್ಲಿ ತನಗೆ ಟಿಕೆಟ್ ಕೊಟ್ಟಿದ್ದ ಕಾಂಗ್ರೆಸ್‌ಗೂ, ತನ್ನನ್ನು ಗೆಲ್ಲಿಸಿದ ಜನರಿಗೂ "ಕೈ" ಕೊಟ್ಟು ಬಿಜೆಪಿಯ ಕೆಸರುಗುಂಡಿಗೆ ಬಿದ್ದಿದ್ದ. ಆ ಮೂಲಕ ಪ್ರಸ್ತುತ ಉಪಚುನಾವಣೆಗೆ ನೇರವಾಗಿ ಕಾರಣವಾಗಿದ್ದ ಆಸ್ನೋಟಿಕರ್ ಈಗ ಹೇಗಾದರೂ ಮಾಡಿ ಕ್ಷೇತ್ರ ಉಳಿಸಿಕೊಳ್ಳುವ ಜಿದ್ದಿಗೆ ಬಿದ್ದಿದ್ದರೆ ಆನಂದ್ ವಿರುದ್ಧ ಕ್ಷೇತ್ರದಾದ್ಯಂತ ಇರುವ ಅಸಮಾಧಾನದ ಹೊಗೆಯನ್ನು ಬಳಸಿಕೊಂಡು ಗೆಲ್ಲುವುದಕ್ಕಾಗಿ ಸತೀಶ್ ಶೈಲ ಹವಣಿಸುತ್ತಿದ್ದಾರೆ. ಹೀಗಾಗಿ, ಇಬ್ಬರಿಗೂ ಇಲ್ಲಿ ಗೆಲ್ಲಬೇಕಾಗಿರುವುದು ಸ್ವಪ್ರತಿಷ್ಠೆಯ ಪ್ರಶ್ನೆಯಾಗಿದ್ದು ಜಿದ್ದಾಜಿದ್ದಿ ಏರ್ಪಟ್ಟಿದೆ.

ಆನಂದ್‌ಗೆ ಕಾಗೇರಿ ಅಡ್ಡಗಾಲು

ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ಸಿನಲ್ಲಿ ಹಿರಿಯರಿದ್ದರೂ ಅತ್ಯಂತ ಕಿರಿಯವನಾಗಿದ್ದ ಆನಂದ್‌ಗೆ ಟಿಕೆಟ್ ಕೊಡಲಾಗಿತ್ತು, ಪಾರಂಪರಿಕವಾಗಿ ಕಾಂಗ್ರೆಸ್‌ನ ಭದ್ರಕೋಟೆಯಾಗಿರುವ ಅಂಕೋಲದಲ್ಲಿ ಕಾಂಗ್ರೆಸ್‌ಗಿರುವ ಈ ಭದ್ರಬುನಾದಿಯೇ ಆನಂದ್ ನಿರಾಯಾಸವಾಗಿ ಗೆಲ್ಲುವಂತೆ ಮಾಡಿತ್ತು. ಅಂದು ಆಸ್ನೋಟಿಕರ್ ವಿರುದ್ಧ ಚುನಾವಣೆಯಲ್ಲಿ ಪಕ್ಷೇತರನಾಗಿ ಸ್ಪರ್ಧಿಸಿ ಇಪ್ಪತ್ತೇಳು ಸಾವಿರ ಮತಗಳನ್ನು ಪಡೆದಿದ್ದ ಮೀನುಗಾರ ನಾಯಕ ಗಣಪತಿ ಉಳ್ವೇಕರ್ ಕೂಡ ಈಗ ಆನಂದ್ ಜೊತೆಗೆ ಬಿಜೆಪಿ ಪಾಲಾಗಿದ್ದಾರೆ. ಯಾವಾಗ ಅಧಿಕಾರ ಹಾಗೂ ದುಡ್ಡಿಗಾಗಿ ಆನಂದ್-ಉಳ್ವೇಕರ್ ಜೋಡಿ ತಮ್ಮನ್ನೇ ತಾವು ಮಾರಿಕೊಂಡು ಬಿಜೆಪಿ ಪಾಲಾಯಿತೋ ಅಂದಿನಿಂದ ಅವರಿಗೆ ಮತ ಹಾಕಿದ್ದ ಜನರೆಲ್ಲರೂ ಮೋಸ ಹೋದ ಭಾವನೆಯಲ್ಲಿದ್ದಾರೆ; ಅವರಿಬ್ಬರಿಗೂ ತಕ್ಕ ಪಾಠ ಕಲಿಸಬೇಕೆಂಬ ಆಕ್ರೋಶದಲ್ಲಿದ್ದಾರೆ. ಅದು ಸಹಜವಾಗಿ ಪ್ರಬಲ ಸ್ಪರ್ಧೆಯೊಡ್ಡುತ್ತಿರುವ ಕಾಂಗ್ರೆಸ್‌ನ ಸತೀಶ್‌ಗೆ ನೆರವಾಗಲಿದೆ. ಆನಂದ್ ವಿರುದ್ಧದ ಜನರ ಅಸಮಾಧಾನವನ್ನೇ ಬಂಡವಾಳ ಮಾಡಿಕೊಂಡಿರುವ ಸತೀಶ್ ಮನೆ ಮನೆ ತಿರುಗಿ ಆನಂದನ ಬಂಡವಾಳವನ್ನು ಬಯಲು ಮಾಡುತ್ತಾ ತಮ್ಮ ಪರ ಸಿಂಪಥಿಯ ಅಲೆ ಏಳುವಂತೆ ಮಾಡುತ್ತಿದ್ದಾರೆ. ಅದೂಅಲ್ಲದೇ, ಕಳೆದ ಚುನಾವಣೆಯ ಸಂದರ್ಭದಲ್ಲಿ ಸುಳ್ಳು ಆಸ್ತಿವಿವರಗಳ ಅಫಿಡವಿಟ್ ನೀಡಿದ್ದಕ್ಕಾಗಿ ಆನಂದ್ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಾಗಿರುವುದು ಕ್ಷೇತ್ರದಾದ್ಯಂತ ಆತನ ವರ್ಚಸ್ಸು ಕಡಿಮೆಯಾಗುವುದಕ್ಕೆ ಕಾರಣವಾಗಿದೆ.



ಕಾಗೇರಿ

ಆನಂದ್ ಗೆಲುವಿಗೆ ಅಡೆತಡೆಯಾಗಿರುವ ಇನ್ನೊಂದು ಪ್ರಮುಖ ವಿಚಾರ ಎಂದರೆ ಬಿಜೆಪಿಯೊಳಗೇ ಒಂದು ಗುಂಪು ಅವರನ್ನು ಸೋಲಿಸುವುದಕ್ಕೆ ಶತಗತಾಯ ಪ್ರಯತ್ನ ಮಾಡುತ್ತಿರುವುದು. ಕಾಂಗ್ರೆಸ್‌ನಿಂದ ಬಿಜೆಪಿಗೆ ಹಾರಿದ ತಕ್ಷಣವೇ ಮುಖ್ಯಮಂತ್ರಿ ಯಡಿಯೂರಪ್ಪನ ಆಪ್ತನಾಗಿ ಹೊರಹೊಮ್ಮಿರುವ ಆನಂದ್ ಒಂದು ವೇಳೆ ಉಪಚುನಾವಣೆಯಲ್ಲಿ ಗೆದ್ದರೆ ಜಿಲ್ಲಾ ಉಸ್ತುವಾರಿ ಸಚಿವನಾಗುವುದು ಗ್ಯಾರಂಟಿ. ಅಂದರೆ, ವಿಶ್ವೇಶ್ವರ ಹೆಗಡೆ ಕಾಗೇರಿಯ ಕೈಯಲ್ಲಿರುವ ಈ ಸಚಿವ ಸ್ಥಾನ ಆನಂದ್ ಪಾಲಾಗುತ್ತದೆ. ಕಾಗೇರಿ ಮತ್ತು ಯಡಿಯೂರಪ್ಪ ನಡುವಿನ ಸಂಬಂಧ ಈಗ ಹಳಸಿರುವುದರಿಂದ ಕಾಗೇರಿಯ ಸಚಿವ ಸ್ಥಾನವನ್ನು ಕಿತ್ತುಕೊಂಡು ಆನಂದ್ ಪಾದಕ್ಕಿಡುವ ಅನುಮಾನ ದಟ್ಟವಾಗಿದೆ. ಆದ್ದರಿಂದ ಹೇಗಾದರೂ ಮಾಡಿ ಆನಂದ್‌ನನ್ನು ಸೋಲಿಸುವ ಮೂಲಕ ಸಚಿವ ಸ್ಥಾನವನ್ನು ತನ್ನ ಬಳಿಯಲ್ಲಿಯೇ ಉಳಿಸಿಕೊಳ್ಳುವುದಕ್ಕೆ ಕಾಗೇರಿ ಗುಂಪು ಏನಿಲ್ಲದ ಪ್ರಯತ್ನ ಮಾಡುತ್ತಿದೆ. ಮೇಲ್ನೋಟಕ್ಕೆ ಕಾಗೇರಿ ಬಂದು ಆನಂದ್ ಪರ ಪ್ರಚಾರವಾಡುವ ನಾಟಕವಾಡಿ ಹೋಗಿದ್ದಾನಾದರೂ ಆನಂದ್‌ನನ್ನು ಸೋಲಿಸುವುದಕ್ಕೆ ಏನೇನು ಮಾಡಲು ಸಾಧ್ಯವೋ ಅದನ್ನೆಲ್ಲಾ ಮಾಡುವುದಕ್ಕೆ ತನ್ನ ಹಿಂಬಾಲಕರಿಗೆ ಗುಪ್ತವಾಗಿ ಹೇಳಿದ್ದಾನೆ. ಅದಕ್ಕಾಗಿಯೇ ಎರಡೆರಡು ಬಾರಿ ತನ್ನ ಬೆಂಬಲಿಗರ ಗೌಪ್ಯ ಸಭೆಗಳನ್ನು ನಡೆಸಿದ್ದಾನೆ.

ಎರಡನೆಯದಾಗಿ, ಯಡಿಯೂರಪ್ಪನ ಆಪ್ತನಾಗಿರುವ ಕಾರಣದಿಂದಲೇ ಆನಂದ್‌ಗೆ ಬಿಜೆಪಿಯಲ್ಲಿ ಹೆಚ್ಚು ಗೌರವ, ಮಾನ್ಯತೆ ದೊರೆಯುತ್ತಿದೆ. ಇದರಿಂದ ವರ್ಷಾನುಗಟ್ಟಲೆ ಬಿಜೆಪಿಯ ಏಳಿಗೆಗಾಗಿ ಮಣ್ಣು ಹೊತ್ತಿರುವ ನಿಷ್ಠಾವಂತ ಕಾರ್ಯಕರ್ತರು, ನಾಯಕರು ಮೂಲೆಗುಂಪಾಗುವ ಅಪಾಯದಲ್ಲಿದ್ದಾರೆ. ಬಿಜೆಪಿಯಲ್ಲಿ ಆನಂದ್ ಬೆಳೆದಷ್ಟೂ ಮೂಲ ಬಿಜೆಪಿಗರು ಮೂಲೆಗುಂಪಾಗುತ್ತಲೇ ಹೋಗುತ್ತಾರೆ ಎಂಬುದು ಅವರಿಗೂ ಅರ್ಥವಾಗಿ ಹೋಗಿದೆ. ತಮ್ಮ ಅಸ್ತಿತ್ವ ಉಳಿಯಬೇಕೆಂದರೆ, ತಾವು ಪಕ್ಷದಲ್ಲಿ ಬೆಳೆಯಬೇಕೆಂದರೆ ಆನಂದ್ ಸೋಲುವುದು ಅವರಿಗೂ ಬೇಕಾಗಿದೆ. ಈ ಕಾರಣಕ್ಕೇನೆ ಕೆಲವು ಮೂಲ ಬಿಜೆಪಿಗರು ಆನಂದ್ ಪರ ಪ್ರಚಾರಕ್ಕಿಳಿಯದೇ ದೂರ ಉಳಿದಿದ್ದರೆ ಮತ್ತೆ ಕೆಲವರು ಒಳಗೊಳಗೇ ಕಾಂಗ್ರೆಸ್‌ನ ಸತೀಶ್ ಶೈಲ ಪರ ಕೆಲಸ ಮಾಡುತ್ತಿದ್ದಾರೆ.

ಬಿಜೆಪಿ ವಿರುದ್ಧ ಇಡೀ ರಾಜ್ಯದಾದ್ಯಂತ ಮಾತ್ರವಲ್ಲ, ಕಾರವಾರದಲ್ಲೂ ಅಸಮಾಧಾನ ಹೊಗೆಯಾಡುತ್ತಿದೆ. ರಾಜ್ಯದ ಜನತೆ ಕಾಂಗ್ರೆಸ್, ಜೆಡಿಎಸ್, ಜನತಾಪಕ್ಷ - ಹೀಗೆ ಎಲ್ಲಾ ಪಕ್ಷಗಳ ಆಡಳಿತವನ್ನು ನೋಡಿ ಸುಸ್ತಾಗಿದ್ದರು. ಬಿಜೆಪಿಗೂ ಒಂದು ಅವಕಾಶ ಕೊಟ್ಟು ನೋಡೋಣ ಎಂದು ಕಳೆದ ಚುನಾವಣೆಯಲ್ಲಿ ಅಧಿಕಾರಕ್ಕೇರಿಸಿದರು. ಆದರೆ, ತಾವು ಮಾಡಿದ ತಪ್ಪೇನು ಎಂಬುದು ಪ್ರಾಯಶಃ ಎಲ್ಲರಿಗೂ ಈಗ ಅರ್ಥವಾಗಿದೆ. ರೈತರಿಗೆ ಉಚಿತ ವಿದ್ಯುತ್, ಎರಡು ರೂಪಾಯಿಗೆ ಒಂದು ಕೆ.ಜಿ. ಅಕ್ಕಿಯಿಂದ ಹಿಡಿದು ಅಂಗೈಯಲ್ಲಿಯೇ ಆಕಾಶ ತೋರಿಸಿದ್ದ ಬಿಜೆಪಿ ಒಂದು ಆಶ್ವಾಸನೆಯನ್ನು ಈವರೆಗೆ ಈಡೇರಿಸಿಲ್ಲ, ಬದಲಿಗೆ ರಾಮಚಂದ್ರಾಪುರ ಮಠದಂತ ಬ್ರಾಹ್ಮಣರಿಗೆ ಸಾಮಾನ್ಯ ಜನರ ಬೆವರಿನ ದುಡ್ಡನ್ನು, ಸರ್ಕಾರಿ ಸಂಪತ್ತನ್ನು ಧಾರೆಯೆರೆಯುತ್ತಿದ್ದಾರೆ; ಗೊಬ್ಬರ ಕೇಳಿದ ರೈತರ ಮೇಲೆ ಗುಂಡು ಹಾರಿಸುತ್ತಿದ್ದಾರೆ. ರಾಜ್ಯದ ಜನ ವಿದ್ಯುತ್ ಇಲ್ಲದೆ ಕತ್ತಲಲ್ಲಿ ಬದುಕುವಂತೆ ಮಾಡಿದ್ದಾರೆ. ಹೀಗಾಗಿ ಬಿಜೆಪಿ ಅಧಿಕಾರದಿಂದ ಜನ ಎರಡೇ ತಿಂಗಳಲ್ಲಿ ಸುಸ್ತಾಗಿ ಹೋಗಿದ್ದಾರೆ.

ಎಲ್ಲಕ್ಕಿಂತ ಮುಖ್ಯವಾಗಿ ಗಣಿರೆಡ್ಡಿಗಳ ಖರೀದಿ ರಾಜಕಾರಣ ಬಿಜೆಪಿಯ ಬಗ್ಗೆ ಜನರಿಗೆ ಹೇವರಿಕೆ ಹುಟ್ಟುವಂತೆ ಮಾಡಿದೆ. ಗಣಿ ದುಡ್ಡಿನಿಂದ ರಾಜಕಾರಣಿಗಳನ್ನು ತರಕಾರಿಯಂತೆ ಖರೀದಿಸುತ್ತಿರುವುದು, ನಾಚಿಕೆ, ಮಾನ, ಮರ್ಯಾದೆ ಬಿಟ್ಟು ಅಧಿಕಾರ-ದುಡ್ಡಿನಾಸೆಗೆ ಆನಂದ್ ಆಸ್ನೋಟಿಕರ್‌ನಂಥವರು ತಮ್ಮನ್ನು ತಾವೇ ಮಾರಿಕೊಳ್ಳುತ್ತಿರುವುದು ಜನರಿಗೆ ಅಸಹ್ಯ ಹುಟ್ಟಿಸಿಬಿಟ್ಟಿದೆ. ಹೀಗೆ ರಾಜ್ಯದಾದ್ಯಂತ ಬಿಜೆಪಿ ವಿರುದ್ಧದ ಅಲೆಯಿದ್ದು ಅದಕ್ಕೆ ಅಂಕೋಲ ಕೂಡ ಹೊರತಲ್ಲ. ಇದು ಆನಂದ್ ಆಸ್ನೋಟಿಕರ್ ಸೋಲಿಗೆ ಮತ್ತೊಂದು ಪ್ರಧಾನ ಕಾರಣವಾಗಲಿದೆ.

ಇಲ್ಲಿ ಗಮನಿಸಬೇಕಾದ ಇನ್ನೊಂದು ಅಂಶ ಎಂದರೆ, ಆನಂದ್ ಆಸ್ನೋಟಿಕರ್‌ನಂಥವರನ್ನು ಮಾರ್ಕೆಟ್‌ನಲ್ಲಿ ತರಕಾರಿಯಂತೆ ಖರೀದಿಸುವಾಗ ರೆಡ್ಡಿಗಳಿಗಿದ್ದ ಹುಮ್ಮಸ್ಸು ಈ ಉಪಚುನಾವಣೆ ಎದುರಿಸುವುದಕ್ಕೆ ಇಲ್ಲ. ಆಗಿದ್ದ ಯದ್ದಿ-ರೆಡ್ಡಿ ದೋಸ್ತಿ ಈಗಿಲ್ಲದಿರುವುದೇ ಇದಕ್ಕೆ ಕಾರಣ. ಹೀಗಾಗಿ, ಕಳೆದ ಚುನಾವಣೆಯಲ್ಲಿ ಹಾಗೂ ಆಪರೇಷನ್ ಕ'ಮಲ'ದಲ್ಲಿ ದುಡ್ಡು ಚೆಲ್ಲಿದಂತೆ ಈ ಬಾರಿಯ ಉಪಚುನಾವಣೆಯಲ್ಲಿ ಅವರು ಚೆಲ್ಲಲಾರರು. ಇದು ಬಿಜೆಪಿಯ ಪಾಲಿಗೆ, ಆನಂದ್ ಆಸ್ನೋಟಿಕರ್ ಪಾಲಿಗೆ ಉರುಳಾಗಲಿದೆ.

ಇನ್ನೊಂದೆಡೆಗೆ ಕಾಂಗ್ರೆಸ್‌ನ ಸತೀಶ್ ಶೈಲ ಆನಂದ್‌ಗೆ ಪ್ರಬಲ ಸ್ಪರ್ಧೆಯೊಡ್ಡುತ್ತಿದ್ದಾರೆ. ಆನಂದ್‌ನಂತೆ ತಂದೆ ಹಾಕಿಕೊಟ್ಟ ಐಶಾರಾಮದ ಲಿಫ್ಟ್‌ನಲ್ಲಿ ಮೇಲೇರಿದವರಲ್ಲ ಶೈಲ. ಕಡು ಬಡತನದ ಹಿನ್ನೆಲೆಯಿಂದ ಬಂದ ಅವರು ಸ್ವಂತ ಪರಿಶ್ರಮದಿಂದ ವ್ಯಾಪಾರ-ವ್ಯವಹಾರ ಮಾಡುತ್ತ ಆನಂತರ ಗಣಿ ಉದ್ಯಮಕ್ಕೆ ಕೈಯಿಟ್ಟು ಈ ಹೊತ್ತು ದೊಡ್ಡ ಕುಳವಾಗಿದ್ದಾರೆ. ಅದೂ ಅಲ್ಲದೇ, ಜಿಲ್ಲೆಯಾದ್ಯಂತ ಕಾಂಗ್ರೆಸ್ ನಾಯಕರು, ಕಾರ್ಯಕರ್ತರು ತಮ್ಮೊಳಗಿರುವ ಎಲ್ಲಾ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಒಗ್ಗಟ್ಟಿನಿಂದ ಸತೀಶ್ ಶೈಲ ಪರವಾಗಿ ಕೆಲಸ ಮಾಡುತ್ತಿರುವುದು ಅವರಿಗೆ ಪಾಸಿಟಿವ್ ಅಂಶವಾಗಿದೆ. ಜಿ.ಪಂ.ನ ಮಾಜಿ ಅಧ್ಯಕ್ಷ ರಮಾನಂದ ನಾ[...]
ಜಿ.ಪಂ. ಕೃಷಿ ಕೈಗಾರಿಕಾ ಸ್ಥಾಯಿ ಸಮಿತಿ ಅಧ್ಯಕ್ಷ ಜಿ.ಎಂ.ಶೆಟ್ಟಿ, ಜಿ[...]
ಮಾಜಿ ಸದಸ್ಯರಾದ ಉದಯ ನಾಯಕ, ವಿನೋದ್ ಬಿ. ನಾ[...]
ತಾ.ಪಂ. ಅಧ್ಯಕ್ಷರಾದ ಎಸ್.ಎಂ.ವೈದ್ಯ, ಜಿ.ಪಂ.ಸದಸ್ಯರಾದ ಶಾಂತಿ ಅ[...]
ಉದಯ ನಾಯ್ಕ, ಮೀನುಗಾರರ ಮುಖಂಡರಾದ ಪ್ರಮೋದ್, ಹರಿ[...]
ಹರಿಕಾಂತ್ ಮುಂತಾದವರು ಸತೀಶ್ ಪರವಾಗಿ ಹಗಲಿರುಳೂ [...]
ಮಾಡುತ್ತಿದ್ದಾರೆ.

ಅಲ್ಲದೇ ಕಾಂಗ್ರೆಸ್‌ಗೆ ಇಡೀ ಕ್ಷೇತ್ರದಾದ್ಯಂತ ಉತ್ತಮ ಹಿಡಿತ[...]
ಉತ್ತರ ಕನ್ನಡ ಜಿಲ್ಲಾ ಪಂಚಾಯತ್, ಅಂಕೋಲ ತಾಲ್ಲೂಕು ಪಂಚಾ[...]
ಕಾಂಗ್ರೆಸ್ ವಶದಲ್ಲಿವೆ. ಅಂಕೋಲ-ಕಾರವಾರದ 30ಕ್ಕೂ ಹೆಚ್ಚು ಗ[...]
ಪಂಚಾಯತಿಗಳಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದೆ. ಇದು ಸತೀ[...]
ಅನುಕೂಲವಾಗಲಿದೆ.


ಆನಂದ್ ವಿರುದ್ಧ ಕೆಲಸ ಮಾಡುತ್ತಿರುವ ಇನ್ನೊ[...]
ಪ್ರಮುಖ ಅಂಶ ಎಂದರೆ ಬಂಗಾರಪ್ಪ ಫ್ಯಾಕ್ಟರ್. ವ[...]
ಮುಖ್ಯಮಂತ್ರಿ ಎಸ್.ಬಂಗಾರಪ್ಪ ಅವರಿಗೆ ಇಡೀ ಉ[...]
ಕನ್ನಡ ಜಿಲ್ಲೆಯಾದ್ಯಂತ ಭಾರಿ ಜನರ ಬೆಂಬಲ[...]
ಬಂಗಾರಪ್ಪನವರೂ ಕೂಡ ಇತ್ತೀಚೆಗೆ ಸಮಾಜವಾದಿ [...]
ತೊರೆದು ಮತ್ತೆ ತಮ್ಮ ಮಾತೃ ಪಕ್ಷವಾದ ಕಾಂಗ್ರೆ[...]
ಮರಳುವ ಯೋಚನೆ ಮಾಡುತ್ತಿರುವುದರಿಂದ ಅ[...]
ಈ ಚುನಾವಣೆಯಲ್ಲಿ ಕಾಂಗ್ರೆಸ್‌ನ ಸ[...]
ಶೈಲ ಪರವಾಗಿ ನಿಂತಿದ್ದಾರೆ. ಬಂಗಾ[...]
ನವರ ಅಭಿಮಾನಿಗಳ, ಬೆಂಬ[...]
ದೊಡ್ಡ ಹಿಂಡೇ ಅಂಕೋಲಾದ[...]
ಅವರೆಲ್ಲರೂ ಕಾಂಗ್ರೆಸ್ [...]
ನಿಂತಿರುವು ದರಿಂದ ದ[...]
ಸಂಖ್ಯೆಯು ಮತ[...]
ಸತೀಶ್ ಪಾಲಾಗಲಿ[...]

ಸಾರಾಂಶೀಕರಿಸಿ[...]
ಹೇಳುವುದಾದರೆ, ಬಿ[...]
ಒಳಜಗಳದಿಂದ
ನರಳುತ್ತಿದ್ದರೆ ಕಾಂಗ್ರೆಸ್
ಒಗ್ಗಟ್ಟಿನಿಂದ
ವಿಜೃಂಭಿಸುತ್ತಿದೆ; ಬಿಜೆಪಿ[...]
ಆನಂದ್ ವಿರುದ್ಧ
ಅಸಮಾಧಾನದ
ಹೊಗೆಯಾಡುತ್ತಿದ್ದರೆ
ಕಾಂಗ್ರೆಸ್‌ನ ಸತೀಶ್ ಪ[...]
ಸಿಂಪಥಿ ಅಲೆಯಿದೆ;
ಬಿಜೆಪಿಯ ಆನಂದ್
ಕ್ರಿಮಿನಲ್ ಕೇಸುಗಳಿಂದ
ವರ್ಚಸ್ಸು ಕಳೆದುಕೊಂಡಿ[...]
ಅಂತಹ ಯಾವುದೇ
ಕೇಸುಗಳಿಲ್ಲದ ಕಾಂಗ್ರೆಸ್‌ನ ಸತೀಶ್ ವರ್ಚ[...]
ಹೆಚ್ಚಾಗುತ್ತಿದೆ; ಚುನಾವಣೆಗೆ ಬಿಜೆ[...]
ಆನಂದ್ ಗಣಿ ರೆಡ್ಡಿಗಳ ದುಡ್ಡಿ[...]
ಬಳಲುತ್ತಿದ್ದರೆ ಖುದ್ದು ಗಣಿ ಕುಳವಾಗಿ[...]
ಸತೀಶ್‌ಗೆ ದುಡ್ಡಿಗೆ ಬರವಿಲ್ಲ; ಕಾಂಗ್ರೆ[...]
ಸತೀಶ್ ಶೈಲ ಬೆಂಬಲಕ್ಕೆ, ವ[...]
ಮುಖ್ಯಮಂತ್ರಿ ಬಂಗಾರಪ್ಪನವರ ದ[...]
ದಂಡೇ ನಿಂತಿದ್ದರೆ, ಬಿಜೆಪಿಯ ಆನಂ[...]
ಅಂತಹ ಯಾವುದೇ ಬಾಹ್ಯ ಬೆಂಬಲ[...]
ಈ ಎಲ್ಲಾ ಅಂಶಗಳನ್ನು ವಿಶ್ಲೇಷಿಸಿ ನೋ[...]
ದಾದರೆ ಆನಂದ್ ಮುಳುಗಲಿರುವ ಟ[...]
ನಿಕ್ ಹಡಗಿನಂತೆ ಕಾಣುತ್ತಿರುವುದು, ಸತೀ[...]
ಶೈಲ ಗೆಲ್ಲುವ ಕುದುರೆಯಾಗಿ ಮಾರ್ಪ[...]
ವುದು ಮೇಲ್ನೋಟಕ್ಕೇ ವೇದ್ಯವಾಗು[...]
ಹಾಗೇನಾದರೂ ಆದರೆ ಅತ್ತ ಕಾಂಗ್ರೆ[...]
ಇಲ್ಲ, ಇತ್ತ ಬಿಜೆಪಿಯಲ್ಲೂ ಮ[...]
ಗುಂಪು ಎಂಬಂತಹ ಪರಿಸ್ಥಿತಿ ನಿರ್ಮಾ[...]
ವಾಗಿ ಆನಂದ್ ಆಸ್ನೋಟಿಕರ್ ರಾಜಕೀ[...]
ಜೀವನ ಆರಂಭದಲ್ಲಿಯೇ ದುರಂತ [...]
ಕಾಣುತ್ತದೆ.



ಸತೀಶ್

■ ವರದಿಗ[...]



ಮಲ್ಯ ಪಾಪರ್!

ಶೋಕಿಲಾಲ ಉದ್ಯಮಿ ವಿಜಯ ಮಲ್ಯನ ಅರ್ಧ ಸಂಪತ್ತು ಅವನ ಕಣ್ಮುಂದುರೇ ಕರಗತೊಡಗಿದೆ. ಇದನ್ನು ಅರ್ಧ ಪಾಪರ್, ದಿವಾಳಿ, ಲಾಸು, ...ಾ ಯಾವ ತರಹ ಬೇಕಾದರೂ ಅರ್ಥಮಾಡಿಕೊಳ್ಳಿ. ಒಟ್ಟಿನಲ್ಲಿ ಇಂಡಿಯಾ ...ಾದ ಆಗರ್ಭ ಶ್ರೀಮಂತ ಮಲ್ಯ ಹಣಕಾಸಿನ ಬಿಕ್ಕಟ್ಟಿಗೆ ಸಿಲುಕಿದ್ದಾನೆ. ...ಕ್ಕೆ ವಿಶ್ವ ಆರ್ಥಿಕ ಬಿಕ್ಕಟ್ಟು ಇಂಡಿಯಾ ಮೇಲಿನ ಅದರ ಪರಿಣಾಮಗಳು ...ಣ. ಜೊತೆಗೆ ಮಲ್ಯನ ಕಪಿಚೇಷ್ಟೆ ಬ್ಯುಸಿನೆಸ್ ತೆವಲುಗಳ ಕೊಡುಗೆಯೂ ...ಟ್ಟಿದೆ.

ಈಗ ದಿನಬೆಳಗಾದರೆ ಅಮೆರಿಕದಲ್ಲಿ ಆ ಬ್ಯಾಂಕ್ ದಿವಾಳಿಯಂತೆ, ಈ ...ಪನಿ ಮುಚ್ಚಹೋಯಿತಂತೆ, ಯಾರೋ ಷೇರ್ ದಲ್ಲಾಳಿ ಶೂಟ್ ...ಾಡಿಕೊಂಡನಂತೆ ಎಂಬ ಕತೆ ಕೇಳುತ್ತಿದ್ದೇವೆ. ಬೆಂಗಳೂರಿನ ಮಟ್ಟಿಗೆ ...ಗಳ ಮೇಲೆ ಇದರ ಪರಿಣಾಮ ಜಾಸ್ತಿ ಇದೆ. ಅವತಾರ ಪುರುಷರಂತೆ ...ುತ್ತಿದ್ದ ಸಾಫ್ಟ್‌ವೇರ್ ಟೆಕ್ಕಿಗಳೆಲ್ಲಾ ಈಗ ಕಂಗಾಲು. ಕೆಲವರಂತೂ ಈಗ ...ಟು ಸಾವಿರಕ್ಕೂ ಕೆಲಸ ಮಾಡಿಕೊಂಡು ಹೋಗುತ್ತಿದ್ದಾರೆ. ಇದು ಸಿಟಿ ...ರ್ಪೊರೇಷನ್ ಲಾರಿ ಡ್ರೈವರ್ ಸಂಬಳಕ್ಕೆ ಸಮ..!

ಈಗ ಒಡೆಯುತ್ತಿರುವ ಮಾರ್ಕೆಟ್ ಎಕಾನಮಿಯೆಂಬ ಬಲೂನನ್ನೇ ...ಾ ಮೇಲೆ ಹಾರಿದ್ದ ಬಹುತೇಕ ಜನ ಹಾಗೂ ಕಂಪೆನಿಗಳು ಶರವೇಗದಲ್ಲಿ ...ಕ್ಕೆ ಉದುರಿ ಬೀಳುತ್ತಿದ್ದಾರೆ.

ಅಂಥವರ ಪೈಕಿ ವಿಜಯ ಮಲ್ಯನದ್ದೇ ...ಡ್ಡ ಟ್ರ್ಯಾಜೆಡಿ. ಮಲ್ಯನ ತಲೆಮೇಲೆ ಈಗ ...ರ್ಜೆಂಟಾಗಿ ತೀರಿಸಬೇಕಾದ ಸಾಲದ ...ತ್ತವೇ ಮೂರು ಸಾವಿರ ಕೋಟಿಯಷ್ಟಿದೆ. ...ರು ಸಾವಿರವಿರಲಿ ಮೂವತ್ತು ಸಾವಿರ ... ಸಂಬಳ ಎಣಿಸಿಕೊಳ್ಳುವವರ ಕಲ್ಪನೆಗೂ ...ುಕದಷ್ಟು ಮೊತ್ತ ಇದು.



ಮಲ್ಯನ ಕ್ಯಾಲೆಂಡರ್ ಶೀಟಿ

...ಅಪ್ಪ ಹಾಕಿದ್ದ ಕಿಂಗ್‌ಫಿಷರ್ ಬಿಯರ್ ...ಾ ಆಲದ ಮರ ಮಾರಿಕೊಂಡು ಇದ್ದಿದ್ದರೆ ...ಲ್ಯ ಈ ಪರಿ ಸಾಲದ ಕೂಪಕ್ಕೆ ...ೀಳುತ್ತಿರಲಿಲ್ಲವೇನೋ! ಆದರೆ ಯಾವಾಗ ...ಎಂಬುದರ ಗಡಿ ದಾಟಿ ದುರಾಶೆಯೆಂಬ ಪಿಶಾಚಿಯ ಬೆನ್ನೇರಿದನೋ ...ಈಗ ಮಲ್ಯನಿಗೆ ಮುಳುಗು ನೀರು ತಂದಿದೆ.

ಈಗ್ಗೆ ಮೂರು ವರ್ಷಗಳ ಹಿಂದೆ ಶುರುಮಾಡಿದ್ದ ಕಿಂಗ್‌ಫಿಷರ್ ಏರ್‌ಲೈನ್ಸ್ ...ದರಲ್ಲೇ ಮಲ್ಯನಿಗೆ ಎರಡೂವರೆ ಸಾವಿರಕೋಟಿಯಷ್ಟು ಹೊಡೆತ ಬಿದ್ದಿದೆ.

ಮಂಗಳೂರಿನ ರಸಗೊಬ್ಬರ ತಯಾರಿಕಾ ಕಂಪನಿ, ಮಂಗಳ ...ೆಲೈಸರ್ಸ್‌ಗಾಗಿ ಮಾಡಿಕೊಂಡಿರುವ ಬ್ಯಾಂಕ್ ಸಾಲವೇ ಮುನ್ನೂರು ...ಟಿಯಷ್ಟಿದೆ. ಇದೂ ಸಾಲದೆಂಬಂತೆ ರಾಯಲ್ ಚಾಲೆಂಜರ್ಸ್ ಎಂಬ ...ು ಕ್ರಿಕೆಟ್ ಟೀಮ್‌ಗಾಗೇ ಮಲ್ಯ 500 ಕೋಟಿ ರೂ. ಹಾಕಿ ಪೂರಾ ... ಮಾಡಿಕೊಂಡಿದ್ದಾನೆ.

ಇದಕ್ಕೂ ಮುಂಚಿನ ಮಲ್ಯನ ಹಲವು ಯಡವಟ್ಟು ವ್ಯವಹಾರಗಳ ಬಗ್ಗೆ ...ೇಳಬೇಕೆಂದರೆ: ವಿಷ್ಣು ಏಜ್ ಎಂಬ ಪೇಪರ್ ನಡೆಸಿ ಫೇಲ್ ಆಗಿದ್ದು. ...ಾಬರಹುಕ ಸುಬ್ರಹ್ಮಣಿಯನ್ ಸ್ವಾಮಿಯಿಂದ ಒಂದು ಕಂಪನಿ ಖರೀದಿಸುವಂತೆ ...ಾ ಪಾರ್ಟಿ ಎಂಬ ಕಿತ್ತು ಚೂರಾಗಿದ್ದ ಪಕ್ಷ ಖರೀದಿಸಿ ಎಲೆಕ್ಷನ್‌ನಲ್ಲಿ ...ಳೆದುಕೊಂಡಿದ್ದು, ಮಲ್ಯ ಫಾರ್ಮಾಸ್ಯುಟಿಕಲ್ಸ್ ಎಂಬ ಔಷದ ತಯಾರಿಕಾ ... ಸ್ಥಾಪಿಸಿ ಅದೇ ಚಾಪಾಳ ಮಾತ್ರೆಯಾಗಿದ್ದು ಹೀಗೆ... ಒಂದಾ ಎರಡಾ ...ನ ತಿಕ್ಕಲುತನಗಳು.


ಆದರೆ ಒಂದು ಖಚಿತ ವಿಚಾರವೇನೆಂದರೆ, ಇಲ್ಲಿ ಹೇಳಿದ ಎಲ್ಲಾ ಫೇಲ್ ...ಗಳಲ್ಲಿ ಆದ ಲಾಸಿಗಿಂತಾ ಹತ್ತರಷ್ಟು, ನೂರರಷ್ಟು ನಷ್ಟ ಮಾಡಿರುವ ...ು ಮಲ್ಯನ ವಿಮಾನ ಕಂಪನಿಯದ್ದು.

ಕಿಂಗ್‌ಫಿಷರ್ ಹಕ್ಕಿ ಹಾರಲಿಲ್ಲ

ಇದು 2005ರ ಅವಧಿ. ರಿಲಯನ್ಸ್‌ನ ಅಂಬಾನಿ ಬ್ರದರ್ಸ್ ಪೆಟ್ರೋ...ಲ್, ಜತೆ ಜೊತೆಗೆ ಟೆಲ್ಕೊ ಕಂಪನಿ ತೆರೆದು ಯಶಸ್ಸು ಕಂಡಿದ್ದರು. ಅದೇ ಜೋಶ್‌ನಲ್ಲಿ ಚಿನ್ನ, ಬೆಳ್ಳಿ, ಚಪ್ಪಲಿ ಕೊನೆಗೆ ರಿಲೆಯನ್ಸ್ ಫ್ರೆಶ್ ಎಂಬ ತರಕಾರಿ ಅಂಗಡಿಯನ್ನೂ ತೆರೆದು ಕೂತಿದ್ದ ಕಾಲ. ಇವರಿಗಿಂತಾ ನಾನೇನು ಕಡಿಮೆ ಎಂದು ಇಂಡಿಯಾದ ಅನೇಕ ಬ್ಯುಸಿನೆಸ್‌ಮೆನ್‌ಗಳು ದೊಡ್ಡದು ಚಿಕ್ಕದೆಂಬ ಭೇದ ನೋಡದೆ ಕಂಡಕಂಡಲ್ಲೆಲ್ಲಾ ಹೊಸ ವ್ಯಾಪಾರ ಶುರುಮಾಡಿದ್ದರು. ಅದೇ ರೀತಿ ಮಲ್ಯನಿಗೂ ತಲೆತಿರುಗಿತು. ಅವನ ಸ್ಟೈಲ್‌ಗೆ ತಕ್ಕಹಾಗೆ 2005ರಲ್ಲಿ ಕಿಂಗ್‌ಫಿಶರ್ ಏರ್‌ಲೈನ್ಸ್ ಚಾಲೂ ಮಾಡಿದ್ದ . ಶುರುವಾದಾಗ ಅದರ ಭರಾಟೆ ನೋಡಬೇಕಿತ್ತು, ಗಗನಸಖಿಯರ ಮಿನಿಸ್ಕರ್ಟೇನು, ಪ್ರಯಾಣಿಕರಿಗೆ ಎಣ್ಣೆ ಸೇವೆಯೇನು? ವಿಮಾನದ ಸೀಟು ಕೊನೆಗೆ ಟಾಯ್ಲೆಟ್‌ನವರೆಗೂ ಮೀಡಿಯಾಗಳು ಹೊಗಳಿ ಬರೆದವು. ಅದರಲ್ಲಿ ಉತ್ಪ್ರೇಕ್ಷೆಯೇನೂ ಇರಲಿಲ್ಲ, ಆದರೆ ಮಲ್ಯನಿಗೆ ವ್ಯಾಪಾರ ಗಿಟ್ಟಲಿಲ್ಲ ಅಷ್ಟೇ. ಹಾಗಾಗಿ ಮೊದಲ ವರ್ಷವೇ 200 ಕೋಟಿ ಲಾಸಾಯಿತು. 2ನೇ ವರ್ಷ ಲಾಸು ಜಾಸ್ತಿಯಾಯಿತು. ಈಗ ಮೂರನೇ ವರ್ಷ ಕಂಪನಿ ಭಾರೀ ಸಾಲಗಾರನಾಗಿದೆ. ಈ ಸಾಲ ಅಷ್ಟಿಷ್ಟಲ್ಲ, ಬರೋಬ್ಬರಿ ಒಂದೂವರೆ ಸಾವಿರ ಕೋಟಿ ರೂಪಾಯಿಗಳು!

ಕಿಂಗ್‌ಫಿಶರ್ ಆಗಲಿ, ಜೆಟ್ ಏರ್‌ವೇಸ್ ಆಗಲಿ ಇಲ್ಲಾ ಸ್ಪೈಸ್ ಜೆಟ್ ಆಗಲಿ ಈ ಖಾಸಗಿ ವಿಮಾನ ಕಂಪನಿಗಳೆಲ್ಲಾ ಸರ್ಕಾರದ ಮೂಲಕವೇ **Ariation Turbine Fuel** ಖರೀದಿಸಿ ಬಳಸಿಹಾರಿಸಬೇಕು. ಈ ವಿಶೇಷ ಕ್ವಾಲಿಟಿ ಪೆಟ್ರೋಲ್ ಅನ್ನು ಸರ್ಕಾರ ಕೆಲಕಾಲ ಸಾಲದ ಮೇಲೆ ಖಾಸಗಿಯವರಿಗೆ ಕೊಡುತ್ತಿತ್ತು, ಆ ಸಾಲ ಬಳಸಿಕೊಂಡ ಮಲ್ಯನಂತಹ ಶೋಕಿವಾಲಗಳು ಹಣ ಕಟ್ಟುವುದನ್ನು ಮರೆತರು. ಈ ಬಾಬ್ತು ಒಂದರಲ್ಲೇ ಮಲ್ಯ ಸರ್ಕಾರಕ್ಕೆ 967 ಕೋಟಿ ರೂ. ಕೊಡಬೇಕಿದೆ. ಈ ಬಗ್ಗೆ ಆಯಿಲ್ ಕಂಪೆನಿಗಳು ತಗಾದೆ ಶುರುಮಾಡಿದಾಗ 167 ಕೋಟಿ ರೂ. ತೆತ್ತು ಮಲ್ಯ ಸದ್ಯಕ್ಕೆ ತಪ್ಪಿಸಿಕೊಂಡಿದ್ದಾನೆ. ಅಷ್ಟೇ ಅಲ್ಲ, ಮಲ್ಯನ ವಿಮಾನಗಳು ಈಗಲೂ ಸರ್ಕಾರಿ ಸ್ವಾಮ್ಯದ ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯಾದವರ ಏರ್‌ಪೋರ್ಟ್‌ಗಳಲ್ಲೇ ಹತ್ತಿ ಇಳಿಯುತ್ತಿವೆ. ಅದರ ಸೇವಾ ಶುಲ್ಕದ ಬಾಬ್ತೇ 220 ಕೋಟಿ ರೂ. ಬಾಕಿ ಮಲ್ಯನ ಮೇಲಿದೆ. ಅಲ್ಲೂ ಲಾಬಿ ನಡೆಸಿರುವ ಮಲ್ಯ ಬರೋಬ್ಬರಿ 50ಕೋಟಿ ಕೊಟ್ಟು ಸರ್ಕಾರದ ತಲೆ ಸವರಿ ವಿಮಾನ ಹಾರಿಸುತ್ತಿದ್ದಾನೆ.

ಇಂಡಿಯಾದಲ್ಲಿ ವಿಮಾನ ಇಂಧನದ ರೇಟು ಜಾಸ್ತಿ ಇದೆ, ಇದನ್ನು ಏನಾದರೂ ಮಾಡಿ ಕಡಿಮೆಮಾಡಿಸಿಕೊಂಡರೆ ಒಂದಿಷ್ಟು ಲಾಭ ನೋಡಬಹುದೆಂದು ಮಲ್ಯ ಲಾಬಿ ಮಾಡುತ್ತಿದ್ದಾನೆ. ಮುಂಬೈ ಟೆರರ್ ದಾಳಿ ನಂತರ ಚಿದಂಬರಂ ಗೃಹ ಸಚಿವರಾದರಲ್ಲ ಆಗ ಹಣಕಾಸು ಖಾತೆ ಬಿಟ್ಟು ಹೊರಡುವ ಕೊನೇ ನಿಮಿಷದಲ್ಲಿ ಚಿದಂಬರಂ ಸಹಿ ಮಾಡಿದ ಕೊನೆಯ ಫೈಲೇ ಈ ಇಂಧನದ್ದೆಂದರೆ ಮಲ್ಯನ ಪ್ರಭಾವ ಎಷ್ಟಿದ್ದಿರಬೇಕು?




ಹಾರದಿರುವ ಮಲ್ಯನ ಹಕ್ಕಿ

ಚಿದಂಬರಂ ಮಾಡಿಟ್ಟಿದ್ದು

ವಿಮಾನ ಇಂಧನವನ್ನು ಅಕ್ಕಿ, ಬೇಳೆ, ಸೀಮೆಎಣ್ಣೆ ಸಕ್ಕರೆಯಂಥ ಅಗತ್ಯ ವಸ್ತುಗಳ (Essential Goods) ಪಟ್ಟಿಗೆ ಸೇರಿಸಿದ್ದು. ಇದರ ಅನುಕೂಲವೇನೆಂದರೆ ಮುಂದೆ ಸರ್ಕಾರ ವಿಮಾನ ಇಂಧನವನ್ನು ಸಬ್ಸಿಡಿ ರೇಟಿನಲ್ಲಿ ಮಲ್ಯನಂಥವರಿಗೆ ಸರಬರಾಜು ಮಾಡಬೇಕಾಗುತ್ತದೆ.

ಮಲ್ಯ ಏನೇ ಆಕರ್ಷಣೆ ಒಡ್ಡಿದಾಗಲೂ, ಹುಡುಗಿಯರು ಮಿನಿಸ್ಕರ್ಟ್ ತೊಟ್ಟಿದ್ದಾಗಲೂ, ಡೀಲಕ್ಸ್ ಉಪಚಾರವಿದ್ದಾಗಲೂ ದಿನನಿತ್ಯ ಜನ ವಿಮಾನದಲ್ಲಿ ಓಡಾಡಲು ಅದೇನು ಜಯನಗರ-ಮೆಜೆಸ್ಟಿಕ್ ರೂಟ್ ಅಲ್ಲವಲ್ಲ, ಜತೆಗೆ ಕಳೆದ ವರ್ಷದಿಂದಲೇ ಜೈಸೊಸೈಟಿಗೆ ಈ ಆರ್ಥಿಕ ಬಿಕ್ಕಟ್ಟಿನ ಬಿಸಿ ತಾಗತೊಡಗಿತು. ಹಾಗಾಗಿ ಅವರ ಓಡಾಟ, ವಿಮಾನ ಹಾರಾಟದ ಸೀಟುಗಳು



ಕಡಿಮೆಯಾಗಿದ್ದವು. ಈಗದು ಪಾತಾಳ ಮುಟ್ಟಿದೆ. ಕಿಂಗ್‌ಫಿಶರ್ ಹಕ್ಕಿಗಳು ಮೊದಲಿದ್ದಂತೆ ದೊಡ್ಡ ಸಂಖ್ಯೆಯಲ್ಲಿ ಈಗ ಕಾಣುತ್ತಿಲ್ಲ, ಮಿನಿಸ್ಕರ್ಟ್ ಲಲನೆಯರಿಗೆ ಸಂಬಳವೂ ಅವರ ಸ್ಕರ್ಟ್ ಅಳತೆಯಷ್ಟೇ ಚಿಕ್ಕದಾಗುತ್ತಿದೆ.

ರಾಯಲ್ ಚಾಲೆಂಜರ್ಸ್ ಎಂಬ ತಗಡು ಟೀಂ

ಮಾರ್ವಾಡಿ ಲಲಿತ್ ಮೋದಿ ಕಂಡುಹಿಡಿದ ಟ್ವೆಂಟಿ-20 ಕ್ರಿಕೆಟ್ ಹವಾದಲ್ಲಿ ದೇಶಾದ್ಯಂತ ಖಾಸಗಿ ಕಂಪೆನಿಗಳ ಕ್ರಿಕೆಟ್ ಟೀಂಗಳು ಹುಟ್ಟಿಕೊಂಡವಲ್ಲ. ಶಾರೂಕ್ ಖಾನ್ ಕೊಲ್ಕತ್ತಾ ನೈಟ್ ರೈಡರ್ಸ್ ಅನ್ನೂ, ಪ್ರೀತಿ ಜಿಂಟಾ ಮೊಹಾಲಿ ಟೀಂಅನ್ನೂ ಖರೀದಿಸಿದಾಗ ಮಲ್ಯ ಸುಮ್ಮನಿದ್ದನಾ?

ಅನಾಮತ್ತು ನಾನ್ನೂರು ನಲವತ್ತು ಕೋಟಿ ಖರ್ಚು ಮಾಡಿ ಬೆಂಗಳೂರಿನ ರಾಯಲ್ ಚಾಲೆಂಜರ್ಸ್ ಟೀಂ ಖರೀದಿಸಿದ. ತಿರುಗಾ 21 ಕೋಟಿ ತೆತ್ತು ರಾಹುಲ್ ದ್ರಾವಿಡ್ ಮತ್ತಿತರ ರೋಗಿಷ್ಟ ಕ್ರಿಕೆಟಿಗರನ್ನು ಕೊಂಡುಕೊಂಡಿದ್ದ. ಕೊನೆಗಾದದ್ದೇನು? ಟೂರ್ನಿಯಲ್ಲಿ ಮಲ್ಯನ ಐನೂರು ಕೋಟಿ ಬೆಲೆಯ ಹುಡುಗರು ಆ ರೇಸಿನಲ್ಲಿ ಕೊನೇ ಸ್ಥಾನ ಪಡೆದರು.

ಸಾರಾಂಶದಲ್ಲಿ ಮಲ್ಯ 500 ಕೋಟಿ ಕಳೆದುಕೊಂಡಿದ್ದ. ವಾಸ್ತವ ಏನು ಗೊತ್ತಾ?

ಕ್ರಿಕೆಟ್‌ಗೆ ಕೈಯಿಟ್ಟ ಮಲ್ಯನಿಗೆ ಅಮೆರಿಕದಿಂದ ಚಿಯರ್ ಗರ್ಲ್ಸ್ ಕರೆಸಲು ಖರ್ಚಾಗಿತ್ತಲ್ಲ, ಅಷ್ಟು ದುಡ್ಡನ್ನೂ ರಾಯಲ್ ಚಾಲೆಂಜರ್ಸ್ ಟೀಂನವರು ಸಂಪಾದಿಸಿಕೊಡಲಿಲ್ಲ.

ಈ ಕಪಿಚೇಷ್ಟೆಯ ಅಡ್ಡಾದಿಡ್ಡಿ ಅವ್ಯವಹಾರದಿಂದ ಮಲ್ಯನ ಸ್ಥಿತಿ ಈಗ ದೇವರಿಗೇ ಪ್ರೀತಿ ಎಂಬಂತಾಗಿದೆ. ಅವನ ಒಟ್ಟು ಆಸ್ತಿ 13 ಸಾವಿರ ಕೋಟಿ ಅನ್ನುತ್ತಾರೆ. ಅದರಲ್ಲಿ ಸ್ವಂತದ್ದಿಷ್ಟು ಸಾರ್ವಜನಿಕ ಷೇರುದಾರರದಿಷ್ಟು ಅಂತಾ ಇರುತ್ತೆ ಬಿಡಿ. ಆದರೆ ಸಾಲ ಸೋಲಾ ಅಂತ ಇರುವುದೆಲ್ಲಾ ಮಲ್ಯನ ಸ್ವಂತದ ಜವಾಬ್ದಾರಿ. ಈ ಸಾಲ ತೀರಿಸಲು ಅವನೀಗ ತನ್ನ Flagship ಬ್ರಾಂಡ್ ಆದ ಕಿಂಗ್‌ಫಿಶರ್ ಬಿಯರ್‌ನ ಷೇರು ಮಾರಬೇಕು. ಇಲ್ಲಾ ಬೆಂಗಳೂರಿನ ಒಂದೂವರೆ ಸಾವಿರ ಕೋಟಿ ಬೆಲೆಯ ಮಲ್ಯ ಸಿಟಿಯ ಒಂದು ಭಾಗ ಮಾರಬೇಕು!

ಈ ಮಲ್ಯ ಎಂತಾ ತಿಕ್ಕಲ ಶೋಕಿಲಾಲನೆಂದರೆ ತಲೆ ಮೇಲೆ ಇಷ್ಟು ದೊಡ್ಡ ಮೊತ್ತದ ಸಾಲ ಬಂದು ಕೂತಿದ್ದರೂ 2009ರ ಜನವರಿಗಾಗಿ ಬಿಕಿನಿ ಹುಡುಗಿಯರ ಹೊಸ ಕ್ಯಾಲೆಂಡರ್ ಮಾಡಿಸಲು ಮತ್ತೆ ಕೋಟಿಗಟ್ಟಲೆ ಖರ್ಚು ಮಾಡುತ್ತಿದ್ದಾನೆ.

ಡಿಸಂಬರ್ 18 ಕ್ಕೆ ಮಲ್ಯನಿಗೆ 53 ವರ್ಷ ತುಂಬಿದೆ. ಅದೇ ಸಮಯಕ್ಕೆ ಅವನ ಸಂಪತ್ತಿನ ಅರ್ಧ ಭಾಗವೂ ಕರಗಿ ಹೋಗಿದೆ.

ಮುಂದಿನ ದಿನಗಳಲ್ಲಿ ಬಹುಶಃ ಇನ್ನಷ್ಟು ಸಾಹುಕಾರರ ದಿವಾಳಿ ಕತೆ ಕೇಳಿಬಂದರೂ ಆಶ್ಚರ್ಯವಿಲ್ಲ.

■ ಪಾರ್ವತೀಶ

ಸಿಂಧನೂರಿನಲ್ಲಿ ಅಡ್ಡಪಲ್ಲಕ್ಕಿ ಅಯ್ಯಪ್ಪಗಳ ಕಿತಾಪತಿ

ರಾಯಚೂರು ಜಿಲ್ಲೆಯ ಸಿಂಧನೂರು ತುಂಬೆಲ್ಲ ತಿಂಗಳೊಪ್ಪತ್ತಿನಿಂದಲೂ ಪಂಚಾಚಾರ್ಯ ಕೃಪಾಪೋಷಿತ ಮಂಡಳಿ ಕೆದರಿ ಕೆರು ಹಾಕಿಕೊಳ್ಳುವ ಕಾರ್ಯಕ್ರಮ ಹಾಕಿಕೊಂಡಂತೆ ಕಾಣುತ್ತಿದೆ. ಇವರಿಗೆಲ್ಲ ಸಾಥ್ ನೀಡುತಿರುವ ಸ್ಥಳೀಯ ರಂಭಾಪುರಿ ಖಾಸಾಮಠದ ಸೋಮನಾಥ ಶಿವಾಚಾರ್ಯಸ್ವಾಮಿ, ನಗರ ಸಭೆಯ ಅಧ್ಯಕ್ಷ ಶರಣಪ್ಪ ಟೆಂಗಿನಕಾಯಿ, ಜಂಗಮ ಸಮಾಜದ ಅಧ್ಯಕ್ಷ ಸಂಗಯ್ಯಸ್ವಾಮಿ, ಕ್ಯಾ(ಖ್ಯಾ)ತ ಸಂಶೋಧಕ ಶಾಶತಿಸ್ವಾತಿ ಮುಕುಂದಿಮಠ, ಹಂಪಯ್ಯಸ್ವಾಮಿ ರ್‍ಯಾವಿಹಾಳ ಮುಂತಾದವರೆಲ್ಲ ಅರಚಾಡುತ್ತಿದ್ದಾರೆ. ಒಟ್ಟಿನಲ್ಲಿ ಸಿಂಧನೂರ ತುಂಬೆಲ್ಲ "ಪಂಚಾಚಾರ್ಯರ ಪಲ್ಲಕ್ಕಿ ಯಾಕೆ ಹೊರಬಾರದು? ಹೊತ್ತರೆ ತಪ್ಪೇನು?" ಎಂಬ ಬಗ್ಗೆ ತೀವ್ರ ಜಿಜ್ಞಾಸೆಗೆ ತೊಡಗುವುದಕ್ಕಿಂತ ಕೀಳು ಮಟ್ಟದ ಕೆಸರೆರಚಾಟ ಶುರುವಾಗಿದೆ. ಇದು ಇಷ್ಟಕ್ಕೆ ನಿಲ್ಲುವ ಲಕ್ಷಣಗಳು ಕಾಣುತ್ತಿಲ್ಲ.



ಶಿವಣ್ಣ ಹಸಣ್ಣಪ್ಪನವರ್



ಗುಲಬರ್ಗಾ ಜಿಲ್ಲೆಯ ಶಹಾಪುರದಿಂದ ಪ್ರಕಾಶಿತವಾಗುವ ಲಿಂಗಣ್ಣ ಸತ್ಯಂಪೇಟೆಯವರ ಸಂಪಾದಕತ್ವದಲ್ಲಿ ಪ್ರಕಟವಾಗುವ 'ಬಸವ ಮಾರ್ಗ' ಪತ್ರಿಕೆಯ ನವೆಂಬರ್ ಸಂಚಿಕೆಯಲ್ಲಿ 'ಅಡ್ಡದಾರಿಯ ಅಡ್ಡಪಲ್ಲಕ್ಕಿ' ಎಂಬ ಲೇಖನ ಪ್ರಕಟವಾಗಿರುವುದೇ ಇಷ್ಟೆಲ್ಲ ಅವಾಂತರಗಳಿಗೆ ಕಾರಣವಾಗಿದೆ. ಹಾಗಾದರೆ ಆ ಲೇಖನದಲ್ಲಿರುವ (ಬಾಕ್ಸ್‌ನಲ್ಲಿ 'ಅಡ್ಡದಾರಿಯ ಅಡ್ಡಪಲ್ಲಕ್ಕಿ' ಕಿರು ಲೇಖನ ಪ್ರಕಟಿಸಲಾಗಿದೆ) ಅಂಶಗಳಾದರೂ ಏನು? ಎಂದು ಪರಾಂಭರಿಸಿ ನೋಡಿದರೆ 'ಇದರಲ್ಲೇನು ಅಂಥ ವಿಶೇಷ ಇಲ್ಲವಲ್ಲ!' ಎಂದು ಯಾರಿಗಾದರೂ ಅನಿಸಿಬಿಡುತ್ತದೆ.

ಆದರೆ ಪಂಚಾಚಾರ್ಯರು ಹಾಗೂ ಅವರ ಕೃಪಾಪೋಷಿತ ಮಂಡಳಿ ಮಾತ್ರ ಆಗಾಗ ಅಂಜಿದವರ ಮೇಲೆ ಹಾವಿನ ಹಗ್ಗ ಎಸೆದು ಖುಷಿಪಟ್ಟರು ಎಂಬಂತೆ ಮಾಡುತ್ತಿರುತ್ತಾರೆ. ಬಸವಕೇಂದ್ರದ ಕಾರ್ಯದರ್ಶಿ ಶಿವಣ್ಣ ಹ.ಸಣ್ಣಪ್ಪನವರ್ ಹೆಸರಿನಲ್ಲಿ 'ಬಸವಮಾರ್ಗ ಪತ್ರಿಕೆ'ಯ ನವೆಂಬರ್ 2008ರ ಸಂಚಿಕೆಯಲ್ಲಿ 'ಅಡ್ಡದಾರಿಯ ಅಡ್ಡಪಲ್ಲಕ್ಕಿ' ಎಂಬ ಕಿರು ಬರಹವೊಂದು ಪ್ರಕಟವಾಗಿದೆ. ವಾಸ್ತವವಾಗಿ ಇದನ್ನು ಕಲಬುರ್ಗಿಯ ಸಿದ್ರಾಮಪ್ಪ ಬಾಲಪ್ಪಗೋಳ್ ಅವರು ಬರೆದಿದ್ದಾರೆ. ಆದರೆ ಅಚಾತುರ್ಯದಿಂದ ಶಿವಣ್ಣ ಸಣ್ಣಪ್ಪನವರ ಹೆಸರು ಪ್ರಕಟವಾಗಿದೆ ಎಂದು ಪತ್ರಿಕೆಯ ಸಂಪಾದಕರಾದ ಲಿಂಗಣ್ಣ ಸತ್ಯಂಪೇಟೆಯವರು ಈಗಾಗಲೇ ಪತ್ರಿಕೆಯ ಮೂಲಕ ತಿಳಿಸಿದ್ದಾರೆ. ಆದಾಗ್ಯೂ ಸಣ್ಣಪ್ಪನವರ ಮೇಲೆ ಹಗೆ ಸಾಧಿಸಲೇಬೇಕೆಂದು ಹೊರಟಿರುವ ಪಂಚಾಚಾರ್ಯವಾದಿಗಳು ಅವರು ಸರಕಾರಿ ನೌಕರರಾಗಿರುವುದರಿಂದ ಅವರನ್ನು ನೌಕರಿಯಿಂದ ವಜಾ ಮಾಡಿಸಬೇಕೆಂದು ಒತ್ತಡ ತರುತ್ತಿದ್ದಾರೆ. ಅಷ್ಟೇ ಅಲ್ಲದೆ 'ಧರ್ಮಕ್ಕೆ ಅವಹೇಳನ ಮಾಡುತ್ತಿರುವ ಲಿಂಗಣ್ಣ ಸತ್ಯಂಪೇಟೆಯವರ ಮೇಲೆಯೂ ಮಾನನಷ್ಟ ಮೊಕದ್ದಮೆ ದಾಖಲಿಸಲಾಗುವುದು, ಅವರ ವಿರುದ್ಧ ದೊಡ್ಡ ಪ್ರಮಾಣದ ಹೋರಾಟ ಮಾಡಲಾಗುವುದು' ಎಂದು ಎಗರಾಡುತ್ತಿದ್ದಾರೆ.

ಇಷ್ಟಕ್ಕೆಲ್ಲ ಮೂಲ ಕಾರಣವೇನೆಂದು ಹುಡುಕಹೊರಟರೆ ಪಂಚಾಚಾರ್ಯವಾದಿಗಳ ಕೀಳುತನ ಎದ್ದು ಕಾಣುತ್ತದೆ. ಬಸವಾದಿ ಶರಣರ ಸರಳ, ಸುಲಭ ಹಾಗೂ ಸುಲಲಿತವಾದ ವಚನಗಳನ್ನು ಸರಿಯಾಗಿ ಓದಿಕೊಂಡಿರುವ ಸಣ್ಣಪ್ಪನವರ್ ಅದನ್ನು ಜನಸಾಮಾನ್ಯರಿಗೆ ತಿಳಿಸಬೇಕೆಂದು ಅಹೋರಾತ್ರಿ ಶ್ರಮಿಸುತ್ತಿದ್ದಾರೆ. ಬಸವಕೇಂದ್ರದ ಮೂಲಕ ಇಡೀ ಸಿಂಧನೂರಿನ ಹಳ್ಳಿ ಪಟ್ಟಣಗಳಲ್ಲಿ 'ಮನೆಯಲ್ಲಿ ಮಹಾಮನೆ' ಎಂಬ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಾ (ತಮ್ಮ ಕಚೇರಿಯ ಬಿಡುವಿನ ವೇಳೆಯಲ್ಲಿ) ಬಸವ ತತ್ವಗಳನ್ನು ಪ್ರಚುರಪಡಿಸುತ್ತಾ ಬಂದಿದ್ದಾರೆ. ಬಸವಾದಿ ಶರಣರ ವಿಚಾರಗಳಿಂದ ಆಕರ್ಷಿತರಾದ ಜನತೆ ಸಹಜವಾಗಿಯೇ ಈಗ ತಾವು ಈ ಹಿಂದೆ ನಂಬಿದ್ದ ಪಂಚಾಚಾರ್ಯರ ಪಲ್ಲಕ್ಕಿ ಹೊರುವ ತತ್ವವನ್ನು ವಿರೋಧಿಸುತ್ತಿದ್ದಾರೆ. ಬಹಳಷ್ಟು ವರ್ಷಗಳಿಂದ ಅನುಚಾನವಾಗಿ ನಡೆಸಿಕೊಂಡು ಬರುತ್ತಿದ್ದ ಕಂದಾಚಾರ-ಮೂಢನಂಬಿಕೆಗಳನ್ನು ತೊರೆದು ಸರಿ ಯಾವುದು? ತಪ್ಪು ಯಾವುದು? ಎಂದು ಆಲೋಚಿಸುವ ವಿವೇಚನಾ ಶಕ್ತಿಯನ್ನು ಪಡೆದಿದ್ದಾರೆ. ಆ ಮೂಲಕ ಅಯ್ಯಗಳ ಬ್ರಾಹ್ಮಣಿಕೆಯನ್ನು ಟೀಕಿಸುವಷ್ಟು ಪ್ರಜ್ಞಾವಂತರಾಗುತ್ತಿದ್ದಾರೆ.


ಆದರೆ ಇದು ಅಡ್ಡಪಲ್ಲಕ್ಕಿ ಅಯ್ಯಪ್ಪಗಳಿಗೆ ಮಾತ್ರವಲ್ಲ ಜಾತಿಜಂಗಮರಿಗೆ ಕೂಡ ನುಂಗಲಾಗದ ತುತ್ತಾಗಿದೆ. ಕಾಲಕ್ರಮೇಣ ಲಿಂಗಾಯತ ಸಮಾಜದಲ್ಲಿ ತಮ್ಮ ಮಹತ್ವ ಇಲ್ಲವಾಗಿ ತಾವೆಲ್ಲಿ ಮೂಲೆಗುಂಪಾಗಿ ಬಿಡುತ್ತೇವೋ?! ಎಂಬ ಅಳುಕು ಅವರಲ್ಲಿ ಉಂಟಾಗಿದೆ. ಇದರಿಂದಾಗಿ ಕಾಲು ಕೆರೆದು ಜಗಳ ತೆಗೆದು ಸಣ್ಣಪ್ಪನವರ ಬಾಯಿಮುಚ್ಚಿಸಲು ಜಂಗಮಯ್ಯರೆಲ್ಲ ನಿರ್ಧರಿಸಿದ್ದಾರೆ.

ಇದಕ್ಕೆ ಪೂರಕವಾದ ವಾತಾವರಣವೆಂಬಂತೆ ಸಿಂಧನೂರಿನ ಬಸವಕೇಂದ್ರವೂ ಇತ್ತೀಚಿಗೆ ಒಡೆದ ಮನೆಯಾಗಿದೆ. ವೀರರಾಣಿ ಕಿತ್ತೂರ ಚೆನ್ನಮ್ಮಳ ಜೊತೆಗಿದ್ದು ಅವಳನ್ನೇ ನುಂಗಿನೊಣೆದ ಮೀರ ಸಾಧಕರಂತೆ ಈ ಬಸವಕೇಂದ್ರದಲ್ಲಿದ್ದೂ ಬಸವಾದಿ ಶರಣರ ತತ್ವಗಳಿಗೆ ಅಪಚಾರ ಎಸಗುವ ದ್ರೋಹಿಗಳನ್ನು ಗುರುತಿಸಿದ ಬಸವಕೇಂದ್ರದ ಬಳಗ ಅವರನ್ನು ದೂರವಿಟ್ಟು ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಇದರಿಂದ ಅತ್ತ ಪಂಚಾಚಾರ್ಯರ ಅಯ್ಯಚಾರ, ಪೂಜೆ, ಪುನಸ್ಕಾರಗಳನ್ನು ಸ್ವೀಕರಿಸುತ್ತ ಸಾಕಷ್ಟು ಮೌಢ್ಯದ ನಂಬಿಕೆಗಳನ್ನು ಮತ್ತೆ ಜನಸಾಮಾನ್ಯರಲ್ಲಿ ಬಿತ್ತುತ್ತಿದ್ದ ಸ್ವಾಮಿ-ಮಹಾಸ್ವಾಮಿಗಳು ವ್ಯಗ್ರರಾಗಿದ್ದಾರೆ.

"ಒಲ್ಲದ ಹೆಂಡತಿ ನೀಡಿದ ಮೊಸರಿನಲ್ಲೂ ಕಲ್ಲು" ಎಂಬಂತೆ ಬಸವ ಮಾರ್ಗ ಪತ್ರಿಕೆಯಲ್ಲಿ ಬಂದಿರುವ ಸಣ್ಣ ಲೇಖನವೊಂದನ್ನು ಹಿಡಿದು, ಸಣ್ಣಪ್ಪನವರನ್ನು ಹಣಿಯಲು ಇವರೆಲ್ಲ ಹೊರಟಿರುವುದು ನಿಜಕ್ಕೂ ನಾಚಿಕೆಗೇಡಿನ ಸಂಗತಿಯಾಗಿದೆ. ಸತ್ಯ ಪ್ರತಿಪಾದನೆ ಮಾಡುವವರು ಯಾರು ಎಂದು ವಿವೇಚಿಸುವುದಕ್ಕಿಂತ ಅವರು ಹೇಳಿದ ಮಾತುಗಳಲ್ಲಿ ಸತ್ಯವಿದೆಯೋ? ಇಲ್ಲವೋ? ಎಂದು ವಿವೇಚಿಸುವ ಗೊಡವೆಗೆ ಹೋಗದ ಸಿಂಧನೂರಿನ ವೀರಶೈವಮುಖಂಡರಾದ ಶರಣಪ್ಪ ಟೆಂಗಿನಕಾಯಿ, ಅಮರೇಶ್ ಕುಂಬಾರ, ಎಸ್. ಶರಣೆಗೌಡ ಮುಂತಾದವರು ತಾವು ಹಿಡಿದ ಮೊಲಕ್ಕೆ ಮೂರೆ ಕಾಲುಗಳು ಎಂಬ ವಿತಂಡವಾದದಲ್ಲಿ ತೊಡಗಿದ್ದಾರೆ. ಸರಕಾರಿ ಶಾಲಾ ಶಿಕ್ಷಕರಾಗಿರುವ ಶಿವಣ್ಣ ಹ.ಸಣ್ಣಪ್ಪನವರನ್ನು ಕೆಲಸದಿಂದ ವಜಾ ಮಾಡಿ ಕ್ರಮಕೈಗೊಳ್ಳಬೇಕು ಎಂಬ ಕೀಳು ಚಟುವಟಿಕೆಯಲ್ಲಿ ತೊಡಗಿದ್ದಾರೆ.

"ಪಂಚಪೀಠಾಧೀಶ್ವರರನ್ನು ನಾವುಗಳೆಲ್ಲ ಭುಜದ ಮೇಲಾದರೂ ಹೊತ್ತುಕೊಂಡು ಸಂಭ್ರಮಿಸುತ್ತೇವೆ. ಇನ್ನ್ಯಾವ ಕಡೆಯಾದರೂ ಹೊತ್ತುಕೊಂಡು ಖುಷಿಪಡುತ್ತೇವೆ. ಇದನ್ನೆಲ್ಲ ಕೇಳುವವರು ನೀವ್ಯಾರು?" ಎಂಬ ಧಾಟಿಯಲ್ಲಿ ವಾದಿಸುತ್ತಿರುವ ಇವರೆಲ್ಲರಿಗೆ ಏನೆನ್ನಬೇಕು? ಇವರಿಗೆ ಬಸವತತ್ವ ಅರ್ಥವಾಗುವುದಾದರೂ ಎಂದು?

■ ವರದಿಗಾರ



ಅಡ್ಡದಾರಿಯ ಅಡ್ಡಪಲ್ಲ...

ಕಾಲವು ತೀವ್ರ ಗತಿ... ಬದಲಾಗುತ್ತಿದೆ. ನಮ್ಮ ಪಂಚಾಚಾ... ಪ್ರಭೃತಿಗಳು ಮಾತ್ರ ಕಿಂಚಿತ್ತೂ... ಲಾಗುತ್ತಿಲ್ಲ. ರಾಜ ಮಹಾರಾಜ... ಕಾಲ ಮರೆಯಾಗಿದೆ. ಅವರೆಲ್ಲ... ಪೋತರಾಜರುಗಳಾಗಿ ಬಿಟ್ಟಿದ್ದಾರೆ. ಈ ಪೀಠಾಧೀಶ್ವರರು ತಾವಿನ್ನು ಅದೇ ಕಾಲದಲ್ಲಿ ಇದ್ದವರಂತೆ ವರ್ತಿಸುತ್ತಿ... ರಾಜ ಮಹಾರಾಜರುಗಳ ಕಾಲದಲ್ಲಿ ಯಾವುದೇ ವಾಹನ ಸೌಕರ್ಯ ಇ... ಆಗ ಇದ್ದ ಏಕಮೇವ ವಾಹನವೆಂದರೆ ಕುದುರೆ ಮಾತ್ರ. ಅವನ್ನು ... ಆನೆಗಳು! ರಾಜರು ಯಾವುದಾದರೊಂದು ದಿಗ್ವಿಜಯ ಸಾಧಿಸಿಕೊಂಡು ಬಂದ... ಆಗ ಮಾತ್ರ ಅವರು ತಮಗೆ ತಾವೇ ಆನೆಯ ಮೇಲೆ ಅಂಬಾರಿ ಕಟ್ಟಿಕೊ... ಮೆರವಣಿಗೆ ಹೊರಡುತ್ತಿದ್ದರು. ಇಲ್ಲವಾದಲ್ಲಿ ಮೇನೆಗಳಲ್ಲಿ ಪಲ್ಲಕ್ಕಿ... ಮೆರೆದಾಡುತ್ತಿದ್ದರು. ಅದು ಅವರದೇ ಕಾಲಮಾನವಾಗಿತ್ತಾದ್ದರಿಂದ ಅವರು ಹೇ... ಕೇಳಿಕೊಂಡು ಬದುಕೋದು ಜನರಿಗೆ ಅನಿವಾರ್ಯವಾಗಿತ್ತು.

ಆದರೆ ಈಗ ಪ್ರಜಾಪ್ರಭುತ್ವ ಬಂದಿದೆ. ಸಾಲದ್ದಕ್ಕೆ ವಾಹನ ಸೌಲಭ್ಯ... ವಿಪುಲವಾಗಿ ಬಂದಿವೆ. ಇಂಥ ದಿನಮಾನಗಳಲ್ಲಿ ಅಡ್ಡಪಲ್ಲಕ್ಕಿಯಲ್ಲಿ ಕುಳಿತು ಮೆ... ಹೊರಡುವುದು ಎಂಥ ಹಾಸ್ಯಾಸ್ಪದ ಸಂಗತಿ ಎಂಬುದನ್ನು ಅವರು ಅರಿ... ಹೋಗಿರುವುದು ನಿಜಕ್ಕೂ ಮರುಕಪಡಬೇಕಾದ ವಿಷಯವಾಗಿದೆ.

ಅವರು ಯಾಕೆ ಮೆರೆಯಬೇಕೆನ್ನುತ್ತಾರೋ ಯಾರಿಗೂ ತಿಳಿಯದು! ಸ... ವಾಗಿ ಇಂದು ಕುಸ್ತಿ ಆಡಿ ಗೆದ್ದು ಬಂದವರನ್ನು, ಯಾವುದೋ ಆಟದಲ್ಲಿ ಯ... ಸಂಪಾದಿಸಿದವರನ್ನು, ಇಲ್ಲವೇ ಚುನಾವಣೆಗಳಲ್ಲಿ ಗೆದ್ದು ಬಂದವರನ್ನು ಮೆರೆಸು... ವಾಡಿಕೆಯಾಗಿದೆ. ಹಾಗಂತ ಅವರನ್ನು ಸಹ ಯಾರೂ ತಮ್ಮ ಹೆಗಲ ... ಹೊತ್ತುಕೊಂಡು ಮೆರೆಸುವುದಿಲ್ಲ, ಬಹಳವಾದರೆ ಜೀಪುಗಳಲ್ಲಿ ಕುಳ್ಳಿರಿಸಿ ಮೆರ... ಹೊರಡಿಸುತ್ತಾರೆ, ಅದು ಕೂಡ ಅವರ ಸೀಮಿತ ಕ್ಷೇತ್ರದಲ್ಲಿ ಮೆರೆಸುತ್ತಾ... ಎಲ್ಲಾ ಕಡೆಗಳಲ್ಲೂ ಅಲ್ಲ.

ಆದರೆ ಈ ಜಗದ್ಗುರುಗಳ ಮೆರವಣಿಗೆಗೆ ಸೀಮಾರೇಖೆ ಎಂಬುದಿಲ್ಲ. ಏ... ಇವರು ಜಗದ್ಗುರುಗಳು ತಾನೆ? ಮೆರೆದರೆ ಮೆರೆಯಲಿ, ಯಾವುದಾದರೂ... ವಾಹನದಲ್ಲಿ ಕುಳಿತು ಮೆರೆಯಲಿ - ಯಾರು ಬೇಡವೆನ್ನುತ್ತಾರೆ? ಜೀಪು, ಲಾ... ಸಾಲವಾದರೆ ದೊಡ್ಡ ಟ್ರ್ಯಾಕ್ಟರ್‌ಗಳಲ್ಲಿ, ಜೇಸಿಬಿ ಟ್ರ್ಯಾಲಿಗಳಲ್ಲಿ ಕುಳಿತು ಮೆರೆ... ನೋಡೋರು ನೋಡುತ್ತಾರೆ. ಬಿಡೋರು ಬಿಡುತ್ತಾರೆ. ಹೆಜ್ಜೆ ಹೆಜ್ಜೆಗೆ ... ಧರ್ಮಕ್ಕೆ ಜಯವಾಗಲಿ ಎಂದು ಘೋಷಣೆ ಕೂಗುವ ಇವರು ಮಾನವ ... ಮೇಲೆಯೇ ಕುಳಿತು ಮೆರವಣಿಗೆ ಹೊರಡುತ್ತಾರಲ್ಲ! ಇದು ಎಂಥ ವಿಪರ್ಯಾ... ನಾಲ್ಕು ಮಂದಿಯ ಹೆಗಲ ಮೇಲೆ ಏನನ್ನು ಹೊತ್ತೊಯ್ಯುತ್ತಾರೆ ಎಂಬ ಸ... ಸಂಗತಿಕೂಡ ಇವರಿಗೆ ತಿಳಿಯಬಾರದೆ? ದಿಗ್ವಿಜಯವಂತಿರಲಿ ಒಂದು ... ಹಣ್ಣಿನ ಕುಸ್ತಿಯನ್ನಾದರೂ ಇವರು ಗೆದ್ದು ಬಂದಿದ್ದಾರೆಯೋ? ಕೊನೆಯ... ಇವರು ಎಂದಾದರೊಂದು ದಿನ ಯಾವುದಾದರೊಬ್ಬ ಭಕ್ತನ ಮನೆಗೆ ತೆ... ಹೋಗಿ ಅವನ ಕಷ್ಟಸುಖ ವಿಚಾರಿಸಿದ್ದಾರೆಯೆ? ಸಾವಿರಗಟ್ಟಲೆ ದಕ್ಷಿಣೆ ... ಯಾರ ಮನೆಯ ಹತ್ತಿರಕ್ಕೂ ಬಾರದ ಇವರು ತಮ್ಮನ್ನು ತಾವೇ ಮಾರಾಟಕ್ಕಿಟ್ಟು... ದಲ್ಲಾಳಿಗಳೊ?

ಪರಮ ಮೈಗಳ್ಳರಾದ, ತಮ್ಮ ಹೊಟ್ಟೆಗೆ ಬೇಕಾಗುವ ಅನ್ನ ಆಹಾರ... ತಾವು ಸಂಪಾದಿಸದ ಈ ಪರಾನ್ನ ಭಕ್ಷರನ್ನು ಈ ಜನರು ಯಾಕಾದರೂ ಮೆರೆಸುತ್ತಾ... ಇಂಥ ಆಡಂಬರದ ಭಕ್ತ ಪ್ರದರ್ಶನವಾದರೂ ಇವರಿಗೆ ಯಾಕೆ ಬೇ... ತಿಳಿಯದು!

■ ಸಿದ್ರಾಮಪ್ಪ ಬಾಲಪ್ಪಗೋ...

ಬೆಳಗಾವಿ: ಶಿವಸಿದ್ಧ ಸೋಮೇಶ್ವರನ ಐಲುಪೈಲುಗಳು

ಅದೇಕೋ ಬೆಳಗಾವಿ ಜನರ ನಸೀಬೇ ಸರಿಯಿಲ್ಲ ಅಂತ ಕಾಣುತ್ತೆ ಒಬ್ಬರಾದ ಮೇಲೊಬ್ಬರಂತೆ ದೋನಂಬರ್ ಸ್ವಾಮಿಗಳೇ ಇಲ್ಲಿ ತಲೆಯೆತ್ತುತ್ತಿದ್ದಾರೆ. ಈ ಹಿಂದೆ 'ಲಂಕೇಶ್' ಅಥಣಿ ಮೋಟಗಿ ಮಠದ ಪ್ರಭುಚೆನ್ನಬಸವ ಸ್ವಾಮಿಯ ಬೆಡ್‌ಶೀಟ್ ವೃತ್ತಾಂತಗಳನ್ನೆಲ್ಲಾ ಎಳೆಎಳೆಯಾಗಿ ಬಿಚ್ಚಿಡುವ ಮೂಲಕ ಜನ ಅವನ ಬಗ್ಗೆ ಹುಶಾರಾಗಿರುವಂತೆ ಎಚ್ಚರಿಸಿತ್ತು, ಈಗ ಅಂತಹುದೇ ಇನ್ನೊಬ್ಬ ಸ್ವಾಮಿಯ ಬಗ್ಗೆ ಮತ್ತೆ ಬರೆಯಬೇಕಾಗಿ ಬಂದಿದೆ. ಈ ಮಹಾಸ್ವಾಮಿಯ ಹೆಸರು ಶಿವಸಿದ್ಧ ಸೋಮೇಶ್ವರ ಸ್ವಾಮಿ. ಬೆಳಗಾವಿ ಸಮೀಪದ ಭೂತರಾಯನ ಹಟ್ಟಿ ಎಂಬಲ್ಲಿ ಮಠ ತೆರೆದುಕೊಂಡು ಕುಳಿತಿರುವ ಈತ ಒಬ್ಬ ಸ್ವಾಮಿ ಮಾಡಬೇಕಾದ ಒಂದೇ ಒಂದು ಕೆಲಸವನ್ನು ಮಾಡಿಲ್ಲ, ಮಾಡುತ್ತಿರುವುದೆಲ್ಲಾ ಕಚಡಾ ಕೆಲಸಗಳನ್ನೆ.

ಶಿವಸಿದ್ಧನಿಗೆ ಒಬ್ಬ ಸ್ವಾಮಿಗಿರಬೇಕಾದ ಯಾವ ಲಕ್ಷಣಗಳೂ ಇಲ್ಲ, ಮಠಕ್ಕೆ ಬರುವ ಭಕ್ತರ ಸಂಕಷ್ಟಗಳನ್ನು ಅರಿಯುವ ಮನೋಗುಣವಾಗಲೀ, ಅವರ ಸಮಸ್ಯೆಗಳಿಗೆ ಕೈಲಾದಷ್ಟು ಸಹಾಯ ಮಾಡುವ ಮಾನವೀಯತೆಯಾಗಲೀ ಒಂದೂ ಇಲ್ಲ, ಬಾಯ್ತೆರೆದರೆ ತಾನೊಬ್ಬ ಅವತಾರ ಪುರುಷನೆಂತಲೂ, ಈ ಭೂಮಂಡಲವನ್ನು ಪಾವನಗೊಳಿಸುವುದಕ್ಕಾಗಿಯೇ ಜನ್ಮವೆತ್ತಿ ಬಂದಿರುವುದಾಗಿಯೂ ಪುಂಗಿ ಊದುತ್ತಲೇ ಭಕ್ತರನ್ನು ಬುಟ್ಟಿಗೆ ಹಾಕಿಕೊಂಡು ಸುಲಿಯುವ ಕಲೆಯನ್ನು ಕರಗತ ಮಾಡಿಕೊಂಡಿದ್ದಾನೆ.

ಈ ಹಿಂದೆ 2006ರಲ್ಲಿ ಹತ್ತು ಲಕ್ಷ ಜನರನ್ನು ಸೇರಿಸಿ ಕರ್ನಾಟಕದ ಇತಿಹಾಸದಲ್ಲೇ ನಡೆದಿರದಂಥ ಮಹಾಸಮಾವೇಶ ಮಾಡುತ್ತೇನೆಂದು ಭಾಷಣ ಬಿಗಿದಿದ್ದ, ಮನೆ ಮನೆಗೆ ಹೋಗಿ ತನ್ನ ಸಮಾವೇಶಕ್ಕಾಗಿ ದುಡ್ಡು ಕೊಡಬೇಕೆಂದೂ, ಇಲ್ಲದಿದ್ದರೆ ಶಾಪ ಹಾಕುತ್ತೇನೆಂದೂ ಅಮಾಯಕ ಜನರನ್ನು ಬೆದರಿಸಿ ಅವರನ್ನು ದೋಚಿದ್ದ; ಕಂಡಕಂಡ ವ್ಯಾಪಾರಿಗಳನ್ನು, ನೌಕರರ ಜೇಬಿಗೆ ಕೈಯಿಟ್ಟು ಸಿಕ್ಕಸಿಕ್ಕಷ್ಟು ಎತ್ತಿಕೊಂಡ; ತನಗಿರುವ ರಾಜಕೀಯ ಪುಢಾರಿಗಳ ಮೂಲಕ ಸರ್ಕಾರದ ಹಣಕ್ಕೂ ಕೈಯಿಟ್ಟ. ಹೀಗೆ ಸಮಾವೇಶದ ಹೆಸರಿನಲ್ಲೇ ಕಂಡಕಂಡಲ್ಲಿ ಬೇಕಾಬಿಟ್ಟಿ ದುಡ್ಡೆತ್ತಿ ತಾನು ದುಂಡಗಾದನೇ ಹೊರತು ಅದ್ಧೂರಿ ಸಮಾವೇಶ ಮಾಡಲಿಲ್ಲ, ಈತನ ಹಗಲು ದರೋಡೆಯನ್ನು ಪ್ರಶ್ನಿಸಿದವರನ್ನು ಅಪ್ಪಟ ಬೀದಿ ರೌಡಿಗಳಂತೆ ಅಟ್ಟಾಡಿಸಿಕೊಂಡು ಬಡಿದ ಅದೆಷ್ಟೋ ಘಟನೆಗಳು ಆ ಹೊತ್ತು ನಡೆದಿದ್ದವು.



ಸರ್ಕಾರಿ, ಸಾರ್ವಜನಿಕ ಸಂಪತ್ತಿಗೆ ಕೈಹಾಕುವ ಕೆಟ್ಟ ಪರಂಪರೆಯನ್ನು ಕರ್ನಾಟಕದಲ್ಲಿ ಮೊದಲು ಪ್ರಾರಂಭಿಸಿದವನು ಪ್ರಾಯಶಃ ಈ ಶಿವಸಿದ್ಧನೇ ಇರಬೇಕು. ತನ್ನ ಕಾಲಿಗೆ ಬೀಳುವ ಟೋಪಿ ರಾಜಕಾರಣಿಗಳಿಗೆ ಮಠದ ಮತ್ತೊಂದು ಟೋಪಿ ಹಾಕಿ ಸರ್ಕಾರದಿಂದ ಮಠಕ್ಕೆ ಅನೇಕ ಸವಲತ್ತುಗಳು, ಅನುದಾನಗಳು ಸಿಗುವಂತೆ ನೋಡಿಕೊಂಡ. ಅದೆಲ್ಲಾ ಸಾಲದೆಂಬಂತೆ ಅರಣ್ಯ ಇಲಾಖೆಯ ಜಮೀನಿಗೂ ಬೇಲಿ ಹಾಕಿಕೊಂಡು ಮಠದ ಆಸ್ತಿ ಮಾಡಿಕೊಂಡ. ಆಗ ಕಾಕತಿ ವಲಯ ಅರಣ್ಯಾಧಿಕಾರಿ ಇವನ ಭೂ ಒತ್ತುವರಿಯನ್ನು ತಡೆದಿದ್ದಕ್ಕಾಗಿ ಅರಣ್ಯಾಧಿಕಾರಿ ಮೇಲೆಯೇ ಹಲ್ಲೆ ನಡೆಸಿದ್ದ. ಆ ಕೇಸು ಇನ್ನೂ ನ್ಯಾಯಾಲಯದಲ್ಲಿದೆ.


ಹಾಗೆ ನೋಡಿದರೆ ಶಿವಸಿದ್ಧ ಸರ್ಕಾರಿ ಭೂಮಿಗೆ ಬೇಲಿ ಹಾಕಿದ್ದು ಅದೇ ಮೊದಲಲ್ಲ, ಈ ಹಿಂದೆಯೇ ಅನೇಕ ಕಡೆ ಸರ್ಕಾರಿ ಭೂಮಿಯನ್ನು ಸ್ವಾಹ ಮಾಡಿಕೊಂಡಿದ್ದ. ಆದರೆ ಈ ಯಾವ ಪ್ರಕರಣಗಳೂ ಹೊರಬರದಂತೆ, ಸ್ವಾಮಿಯ ಮೇಲೆ ಯಾವ ಕೇಸುಗಳೂ ದಾಖಲಾಗದಂತೆ ನೋಡಿಕೊಂಡವನು ಮಾಜಿ ಮಂತ್ರಿ ಬಿ.ಶಂಕರಾನಂದ.


ಈ ಹಿಂದೆ ಸ್ವಾಮಿ ಅನಧಿಕೃತವಾಗಿ, ಕಾನೂನುಬಾಹಿರವಾಗಿ ಮಠ ನಿರ್ಮಾಣ ಮಾಡಿದಾಗ ನ್ಯಾಯಾಲಯವೇ ಇವನ ವಿರುದ್ಧ ಒಂದಲ್ಲ ಮೂರು ನೋಟೀಸು ಜಾರಿ ಮಾಡಿತ್ತು. ಈತ ತಾನು ಈ ದೇಶದ ಸಂವಿಧಾನ, ನ್ಯಾಯಾಂಗ ವ್ಯವಸ್ಥೆಗೂ ಮೀರಿದವನು ಅಂದುಕೊಂಡಿದ್ದನೋ ಏನೋ ಅಂತೂ ಒಂದು ನೋಟಿಸಿಗೂ ಪ್ರತಿಕ್ರಿಯಿಸಿರಲಿಲ್ಲ. ಕೊನೆಗೆ ನ್ಯಾಯಾಧೀಶರು ಅಂದಿನ ಎಸಿಪಿಯಾಗಿದ್ದ ಹೇಮಂತ ನಿಂಬಾಳ್ಕರ್‌ನನ್ನು ತರಾಟೆಗೆ ತೆಗೆದುಕೊಂಡಾಗ ನಿಂಬಾಳ್ಕರ್ ಸಿಪಿಐ ಹುಲಸಗುಂದ ಅವರನ್ನು ನೇರವಾಗಿ ಮಠಕ್ಕೆ ಕಳಿಸಿ ಶಿವಸಿದ್ಧನನ್ನು ಎಳೆದುಕೊಂಡು ಬರುವಂತೆ ಹೇಳಿದ್ದರು. ಪ್ರಾಯಶಃ ಸಮಾಜದಲ್ಲಿ ತನ್ನ ಸ್ಥಾನ ಏನು ಎಂಬುದು ಆಗ ಶಿವಸಿದ್ಧನಿಗೆ ಅರ್ಥವಾಗಿರಬೇಕು. ನವರಂಧ್ರಗಳನ್ನೂ ಮುಚ್ಚಿಕೊಂಡು ನ್ಯಾಯಾಲಯಕ್ಕೆ ಹಾಜರಾಗಿ ನ್ಯಾಯಾಧೀಶರಿಂದ ಉಗಿಸಿಕೊಂಡು ಬಂದ.

ಕೋರ್ಟಿನಿಂದ ಜಾಮೀನು ಪಡೆದು ಹೊರಬಂದ ಶಿವಸಿದ್ಧ ಅನ್ನ, ನೀರು, ಗಾಳಿ, ಬೆಳಕು ಎಲ್ಲಾ ಮ... ಅವಶ್ಯಕತೆಗಳನ್ನು ತ್ಯಜಿಸಿ ವ್ರತ ಆಚರಿಸುವ ಮ... ತಾನೊಬ್ಬ ಅವತಾರ ಪುರುಷನೆಂದು ತೋ...ತ್ತೇನೆಂದು ಕತ್ತಲೆಯ ಗವಿಸೇರಿಕೊಂಡ. ... ಮಾತಿನಂತೆ ಅವನೇನಾದರೂ ಅನ್ನ, ನೀರು ಬಿ... ಮೂರು ದಿನಗಳೊಳಗಾಗಿ ಅವನ ಶವಸಂಸ್ಕಾ... ನಡೆಯುತ್ತಿತ್ತು; ಆ ಮೂಲಕವಾದರೂ ಬೆಳಗಾ... ಜನರಿಗೆ ಅವನಿಂದ ವಿಮೋಚನೆಯಾದರೂ ಸಿಗ... ತಪಸ್ಸು ಆಚರಿಸುತ್ತೇನೆಂದವನು ಮಾಮೂ... ತಿನ್ನುವುದಕ್ಕಿಂತ, ಕುಡಿಯುವುದಕ್ಕಿಂತ ತುಸು ಜಾ... ತಿಂದು ದುಂಡಾಗಿಬಿಟ್ಟ. ಹಗಲು ವೇಳೆ ಮಠದ... ಇರುತ್ತಿದ್ದ ಈತ ರಾತ್ರಿಯಾಯಿತೆಂದರೆ ಜೀನ್ಸ್ ಪ್ಯಾ...ಟಿ ಶರ್ಟ್ ಹಾಕಿಕೊಂಡು ಲಲನೆಯರ ... ಸುತ್ತುತ್ತಿದ್ದ.


ಜನರಿಗೂ ಶಿವಸಿದ್ಧನ ರಾಸಲೀಲೆಗಳ ಬಗ್ಗೆ... ದೌರ್ಜನ್ಯಗಳ ಬಗ್ಗೆ ನಿಧಾನವಾಗಿ ಅರ್ಥವಾ... ಮಾನವಂತರು ಮಠಕ್ಕೆ ಬರುವುದಕ್ಕೆ ಹಿಂದು ಮುಂದು ನೋಡುವ ಪರಿಸ್ಥಿತಿ ನಿರ್ಮಾಣವಾಗಿಬಿಟ್ಟಿದ... ಹಿಂದೆಯೇ ಜನರಿಂದ ಒದೆ ತಿನ್ನಬೇಕಾದ... ಮಾಜಿ ಕೇಂದ್ರ ಮಂತ್ರಿ ಬಿ.ಶಂಕರಾನಂದ, ಶಾಸಕ ಎಸ್.ಜಿ.ಮಾಳಗಿ, ಮಾಜಿ ಲೋಕಸಭಾ... ಅಮರಸಿಂಹ ಪಾಟೀಲ್ ಮುಂತಾದವರ ಕಟಾಕ್ಷದಿಂದ ಅದ್ಹೇಗೋ ಬದುಕುಳಿದಿದ್ದಾನೆ. ಸಹನೆಗೂ ಒಂದು ಮಿತಿಯಿರುತ್ತದಲ್ಲವೆ? ಮೀರಿದರೆ ಶಿವಸಿದ್ಧ ಅವಧಿಗೆ ಮುನ್ನ ಅಕಾಲಿಕವಾಗಿ ಲಿಂಗೈಕ್ಯನಾಗುವುದು ಗ್ಯಾರಂಟಿ.

■ ಮುಲ್ಲಾ, ...





ನ್ಯಾಯಾಲಯಕ್ಕೆ ಕ್ಯಾರೆ ಎನ್ನದ ನೆಲಗಳ್ಳರು!



ಬೆಂಗಳೂರು ನಗರದಲ್ಲಿ ಭೂಮಿ ಬೆಲೆ ಗಗನಕ್ಕೇರು [illegible]ತ್ತಂತೆಯೇ ಸರ್ಕಾರಿ ಆಸ್ತಿಗಳನ್ನು ಕಬಳಿಸುವ ನೆಲಗಳ್ಳರ [illegible]ಡ್ಡ ಹಿಂಡೇ ಹುಟ್ಟಿಕೊಂಡಿದೆ. ಧಾಖಲೆಗಳನ್ನು [illegible]ದ್ದುವುದು, ಅಕ್ರಮವಾಗಿ ಕಟ್ಟಡಗಳನ್ನು ನಿರ್ಮಿಸಿಕೊಳ್ಳು[illegible]ದು, ಗುಡಿಗುಂಡಾರಗಳನ್ನು ಕಟ್ಟಿಕೊಂಡು ಸಾರ್ವಜನಿಕ [illegible]ಪಯೋಗಕ್ಕಾಗಿ ಇರುವ ಜಾಗಗಳನ್ನು ಸ್ವಾಹ ಮಾಡು[illegible]ಮ – ಹೀಗೆ ಒಂದೇ ಎರಡೆ? ಇಂಥ ನೆಲಗಳ್ಳತನಕ್ಕೆಲ್ಲಾ [illegible]ಡಿಎ, ಮಹಾನಗರ ಪಾಲಿಕೆಗಳು ತಮ್ಮ ಕಮೀಷನ್ನು [illegible]ಡೆದು ಸಹಕರಿಸುವುದು ಎಲ್ಲರಿಗೂ ಗೊತ್ತಿರುವ [illegible]ಚಾರವೆ. ಇದೆಲ್ಲಾ ಮಾಮೂಲಾಗಿ ನಡೆಯುವ ದಂಧೆ [illegible]ನ್ನಬಹುದು. ಆದರೆ, ರಾಜ್ಯದ ಉಚ್ಚನ್ಯಾಯಾಲಯದ [illegible]ಮುಖ್ಯ ನ್ಯಾಯಮೂರ್ತಿ ಇಂತಹ ಭೂಗಳ್ಳರ ವಿರುದ್ಧ [illegible]ದೇಶ ಹೊರಡಿಸಿದರೂ ಅದಕ್ಕೆ ಕ್ಯಾರೆ ಎನ್ನದೇ ತಮ್ಮ [illegible]ಲಗಳ್ಳತನದಲ್ಲಿ ತೊಡಗಿರುವವರೆಂದರೆ ಬೆಂಗಳೂರಿನ [illegible]ಪಿ ನಗರದ ಭೂಗಳ್ಳರು. ನ್ಯಾಯಾಲಯ ತೀರ್ಪಿನ [illegible]ಲ್ಲಂಘನೆ ಮಾಡುತ್ತಾ ಅವರಿಗೆ ಸಹಕರಿಸುತ್ತಿರುವವರು [illegible]ಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿ[illegible]ಳು.


ನಡೆಯುತ್ತಿರುವುದೇನು?

ರಾಜಧಾನಿ ಬೆಂಗಳೂರಿನ ಪ್ರತಿಷ್ಠಿತ ಬಡಾವಣೆಗಳ [illegible]ಲ್ಲೊಂದಾದ ಜೆ.ಪಿ.ನಗರವನ್ನು 1976ರಲ್ಲಿ ಬೆಂಗಳೂರು [illegible]ಭಿವೃದ್ಧಿ ಪ್ರಾಧಿಕಾರ ನಿರ್ಮಿಸಿದೆ. ಇದರ ಮೂರು [illegible]ಮತ್ತು ನಾಲ್ಕನೇ ಹಂತದ ಬಡಾವಣೆಗಳು ಬನ್ನೇರುಘಟ್ಟ ರಸ್ತೆಯ ಪೂರ್ವ ಭಾಗದ ಸರಹಂಚಿನಲ್ಲಿವೆ. ಬಿಡಿಎ ಈ ಬಡಾವಣೆಯನ್ನು ನಿರ್ಮಿಸುವಾಗ ಬನ್ನೇರುಘಟ್ಟ ರಸ್ತೆ ಜಯದೇವ ಹೃದ್ರೋಗ ಆಸ್ಪತ್ರೆಯಿಂದ ಹೆಚ್ಚುಕಡಿಮೆ ಬಿಲೇಕಹಳ್ಳಿಯವರೆಗೆ ರಸ್ತೆಯ ಪೂರ್ವಭಾಗದಲ್ಲಿ ಸಣ್ಣ ಕೈಗಾರಿಕೆಗಳಿಗೆ ನಿವೇಶನವನ್ನು ನಿರ್ಮಿಸಿತು. ಮುಂದೆ ಈ ಸಣ್ಣ ಕೈಗಾರಿಕೆಗಳಿಂದ ಉಂಟಾಗುವ ಸಂಭವನೀಯ ವಾಯುಮಾಲಿನ್ಯ ಮತ್ತು ಶಬ್ದಮಾಲಿನ್ಯದಿಂದ ಜೆ.ಪಿ.ನಗರದ ಮೂರು ಮತ್ತು ನಾಲ್ಕನೇ ಹಂತದ ನಿವಾಸಿಗಳನ್ನು ಮುಕ್ತಗೊಳಿಸಲು ಮೂರನೇ ಹಂತದಲ್ಲಿ ಮಿನಿ ಫಾರೆಸ್ಟ್ ಮತ್ತು ನಾಲ್ಕನೇ ಹಂತದಲ್ಲಿ ನಿವೇಶನ ನಂ. 9 ನ್ನು ಉದ್ಯಾನವನವನ್ನಾಗಿ ಅಭಿವೃದ್ಧಿ ಪಡಿಸಲು ತೀರ್ಮಾನಿಸಿತು. ನಂತರ ಮೇಲಿನ ಸ್ಥಳಗಳಲ್ಲಿ ತನ್ನ ಇತಿಮಿತಿಯೊಡನೆ ಮಿನಿ ಫಾರೆಸ್ಟ್ ಮತ್ತು ನಾಲ್ಕನೇ ಹಂತದ 9ನೇ ನಂಬರಿನ ಉದ್ಯಾನವನವನ್ನು ಅಭಿವೃದ್ಧಿ ಪಡಿಸಿ ಒಟ್ಟು ಬಡಾವಣೆಯನ್ನು ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸಿತು.

ನಾಲ್ಕನೇ ಹಂತದ ಉದ್ಯಾನವನದ (ಸಂಖ್ಯೆ 9) ವಿಸ್ತೀರ್ಣ ಸುಮಾರು ಒಂದೂವರೆ ಎಕರೆ. ಇಂದು ಜೆ.ಪಿ.ನಗರದ ಬಡಾವಣೆಯಲ್ಲಿ 30x40 ಅಡಿಯ ಒಂದು ನಿವೇಶನ ಏನಿಲ್ಲವೆಂದರೂ ಒಂದು ಕೋಟಿಯ ಮೇಲೆ ಬಾಳುತ್ತದೆ. ಈ ಲೆಕ್ಕಾಚಾರದಲ್ಲಿ ಹೇಳುವುದಾದರೆ ನಾಲ್ಕನೇ ಹಂತದಲ್ಲಿರುವ ಈ ಉದ್ಯಾನವನದ ಬೆಲೆ ಕಮ್ಮಿಯೆಂದರೂ ನಲವತ್ತು ಕೋಟಿಯಾಗುತ್ತದೆ.


ಮೊದಲೇ ಮಹಾನಗರ ಪಾಲಿಕೆಯ ದಿವ್ಯನಿರ್ಲಕ್ಷ್ಯಕ್ಕೊಳಗಾಗಿದ್ದ ಈ ಉದ್ಯಾನ ಪಾಳು ಜಾಗದಂತಿತ್ತು, ಈ ನಿರ್ಲಕ್ಷ್ಯವನ್ನೇ ಬಂಡವಾಳ ಮಾಡಿಕೊಂಡು ಇಡೀ ಉದ್ಯಾನವನ್ನೇ ಗುಳುಂ ಮಾಡಲು 1998 ರಲ್ಲೇ ಒಬ್ಬ ನಕಲಿ ಸ್ವಾಮಿ ಹುಟ್ಟಿಕೊಂಡಿದ್ದ. ಆದರೆ ಆ ಹೊತ್ತು ಜೆ.ಪಿ.ನಗರ ಬಡಾವಣೆಯ ಜನ ತೋರಿದ ಪ್ರತಿರೋಧದಿಂದಾಗಿ ಅಂದು ಹತ್ತಾರು ಕೋಟಿ ಬೆಲೆಬಾಳುವ ಸಾರ್ವಜನಿಕ ಜಾಗ ಕಳ್ಳ ಸ್ವಾಮಿಯ ಪಾಲಾಗುವುದು ತಪ್ಪಿತ್ತು.

ನಂತರದಲ್ಲಿ ಬಡಾವಣೆಯ ಪರಿಸರವನ್ನು ರಕ್ಷಿಸುವುದಕ್ಕಾಗಿ ನಿವಾಸಿಗಳು ಮಹಾನಗರ ಪಾಲಿಕೆಯ ಆಯುಕ್ತರಿಗೆ ದುಂಬಾಲು ಬಿದ್ದರು. ಅದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ ಆಯುಕ್ತರು ಸಂಬಂಧಪಟ್ಟ ಇಲಾಖೆಗಳಿಂದ ಸ್ಥಳ ಪರಿಶೀಲನೆ ನಡೆಸಿ ಉದ್ಯಾನ ಅಭಿವೃದ್ಧಿಗೆ 27 ಲಕ್ಷ ರೂಪಾಯಿ ವೆಚ್ಚದ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿ ಅನುಮೋದಿಸಿದರಲ್ಲದೇ ತಕ್ಷಣದಲ್ಲಿ ಹತ್ತು ಲಕ್ಷ ರೂಪಾಯಿಗಳನ್ನು ಮುಂಗಡವಾಗಿ ಮಂಜೂರು ಮಾಡಿದರು. ಜೆ.ಪಿ.ನಗರದ ಈ ಪಾಳು ಜಾಗಕ್ಕೆ ಒಂದಿಷ್ಟು ಉದ್ಯಾನದ ರೂಪು ಬರತೊಡಗಿತು. ಆಗಲೇ ಒಬ್ಬ ಕಳ್ಳ ಸ್ವಾಮಿಯೊಬ್ಬ ಈ ಅಮೂಲ್ಯ ಜಾಗವನ್ನು ಗುಳುಂ ಮಾಡುವುದಕ್ಕೆ ಪ್ರಯತ್ನಿಸಿದ್ದನಾದ್ದರಿಂದ ಮಹಾನಗರ ಪಾಲಿಕೆಯು "ಉದ್ಯಾನವನದ ಜಾಗ ಅತಿಕ್ರಮ ನಿಷಿದ್ಧ" ಎಂಬ ಒಂದು ಬೋರ್ಡ್ ನೆಟ್ಟಿತು. ಅಲ್ಲಿಗೆ ಜೆಪಿ ನಗರದ ನಾಗರಿಕರೂ ಒಂದಿಷ್ಟು ನೆಮ್ಮದಿಯ ನಿಟ್ಟುಸಿರು ಬಿಟ್ಟದ್ದೂ ಆಯಿತು.



ಆದರೆ, ನಾಗರಿಕರ ಈ ನೆಮ್ಮದಿ ಬಹಳ ಕಾಲ ಇರಲಿಲ್ಲ, ಜೆಪಿ ನಗರದಂತಹ ಪ್ರತಿಷ್ಠಿತ ಬಡಾವಣೆಯಲ್ಲಿ ನಲ್ವತ್ತು ಕೋಟಿ ಬೆಲೆ ಬಾಳುವ ಈ ಸರ್ಕಾರಿ ಆಸ್ತಿ ನೆಲಗಳ್ಳರ ಕಣ್ಣು ಕುಕ್ಕುತ್ತಲೇ ಇತ್ತು. ಆಗ ಹುಟ್ಟಿಕೊಂಡಿದ್ದೇ "ಜೆ.ಪಿ.ನಗರ 4ನೇ ಹಂತದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ" ಎಂಬ ನೆಲಗಳ್ಳರ ಸಂಘ. ಕೆ.ಎಂ. ಸಿದ್ಧರಾಜು, ಕೆ.ಸ್ವಾಮಿ, ಕೆ.ಎ.ರಾಮಸುಂದರ್, ಕೆ.ಶ್ರೀಧರ್ ಉಪಾಧ್ಯ ಮುಂತಾದ ನೆಲಗಳ್ಳರ ಈ ಸಂಘಕ್ಕೆ ಎಂ.ರಾಜಣ್ಣ ಎಂಬ ಮುದುಕನೇ ಸಾರಥಿ. ಈ ಸಂಘವನ್ನು ಎಷ್ಟೊಂದು ತುರ್ತಾಗಿ ಮಾಡಿದ್ದಾರೆಂದರೆ ಇದರ ನೋಂದಣಿಯೇ ನೋಂದಣಿ ಕಾಯ್ದೆಗೆ ಅನುಗುಣವಾಗಿಲ್ಲ, ಬೈಲಾದಾದ್ಯಂತ ಜನಸಾಮಾನ್ಯರ ಮತೀಯ ಭಾವನೆಗಳನ್ನು ಕೆರಳಿಸಿ ಕೋಮು ಸಾಮರಸ್ಯಕ್ಕೆ ಧಕ್ಕೆ ತರುವಂತಿದೆ.

ಈ ಪಾರ್ಕನ್ನು ನುಂಗುವುದಕ್ಕಾಗಿ ಒಂದು ಮಾಸ್ಟರ್ ಪ್ಲಾನ್ ಸಿದ್ಧಪಡಿಸಿದ ಈ ಗ್ಯಾಂಗು ಮೊದಲು ಅಲ್ಲೊಂದು ದೇವಸ್ಥಾನವನ್ನು ಕಟ್ಟಿದರು. ದಿನಾಲು ಬೆಳಗ್ಗೆ, ಮಧ್ಯಾಹ್ನ, ಸಂಜೆ ಜೋರಾಗಿ ಮೈಕ್ ಹಾಕಿ ಶ್ಲೋಕ, ಭಕ್ತಿಗೀತೆಗಳನ್ನು ಬಿತ್ತರಿಸಿ ಬಡಾವಣೆಯ ಜನರು ನೆಮ್ಮದಿಯನ್ನೇ ಹಾಳು ಮಾಡಲಾರಂಭಿಸಿದರು. ನಂತರ ಮಹಾನಗರ ಪಾಲಿಕೆಯ 'ಉದ್ಯಾನವನದ ಜಾಗ, ಅತಿಕ್ರಮ ನಿಷಿದ್ಧ' ಎಂಬ ನಾಮ ಫಲಕದಲ್ಲಿದ್ದ 'ಅತಿಕ್ರಮ ನಿಷಿದ್ಧ' ಎಂಬುದನ್ನು ಅಳಿಸಿ ಹಾಕಿದರು. ಆಮೇಲೆ ಅದರ ಪಕ್ಕದಲ್ಲೇ "ಜೆ.ಪಿ.ನಗರ 4ನೇ ಹಂತದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ" ಎಂಬ ತಮ್ಮ ಸಂಘದ ಬೋರ್ಡು ನೆಟ್ಟರು. ಆಮೇಲೆ ಪಾಲಿಕೆ ನೆಟ್ಟಿದ್ದ ಗಿಡಗಳನ್ನು ಒಂದೊಂದಾಗಿ ಕಿತ್ತೆಸೆಯಲಾರಂಭಿಸಿದರು.



putting up a temple is improper and impermissible. We feel there is justification in the grievance put forth by the petitioners and public interest demands that a direction shall issue to respondents 1 and 2 herein to issue notice to respondent No.4 and take suitable action in the matter, strictly in accordance with law as contemplated under the relevant statute. Such action shall be taken within thirty days from the date of this order

4. In so far as the grievance of the petitioner as regards the registration of the 4th respondent as a society, it is open to them to challenge the same before the appropriate authority in accordance with law.

5. Subject to the above observations, this petition is disposed of.

Sd/-
Chief Justice

Sd/-
Judge

ಈ ಸಂಘದ ಉಪಟಳದಿಂದ ಬೇಸತ್ತ ನಾಗರಿಕರು ಸದರಿ ಉದ್ಯಾನ ವನದ ಕಬಳಿಕೆಯ ಹುನ್ನಾರ, ಮೇಲಿನ ಸಂಘದ ಕಾನೂನುಬಾಹಿರ ದಂಧೆ ಎಲ್ಲವನ್ನೂ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳ ಗಮನಕ್ಕೆ ತಂದರೂ ಯಾರೂ ಕಿಮಿಕ್ಕೆನ್ನಲಿಲ್ಲ, ತಮಗೂ ಅದಕ್ಕೂ ಸಂಬಂಧವೇ ಇಲ್ಲವೆಂಬಂತೆ ಆಫೀಸಿನಲ್ಲಿಯೇ ನಿದ್ರಿಸತೊಡಗಿದರು. ಅನ್ಯಮಾರ್ಗವಿಲ್ಲದೇ ಅಂತಿಮವಾಗಿ ಸ್ಥಳೀಯ ನಾಗರಿಕರು ಬಿ.ಎಸ್.ಕುಮಾರ ಸ್ವಾಮಿ ಮತ್ತು ನಿವೃತ್ತ ಐಪಿಎಸ್ ಅಧಿಕಾರಿ ಮತ್ತು ಮಾಜಿ ಸಂಸದ ಪಿ.ಕೋದಂಡರಾಮಯ್ಯ ಅವರ ನೇತೃತ್ವದಲ್ಲಿ ನ್ಯಾಯಾಲಯದ ಮೆಟ್ಟಿಲೇರಿದರು. ಹೈಕೋರ್ಟಿನ ಮುಖ್ಯ ನ್ಯಾಯಮೂರ್ತಿಯವರಾದ ಪಿ.ಡಿ.ದಿನಕರನ್ ಅವರ ಮುಂದೆಯೇ ಈ ಕೇಸು ಬಂತು.

ದಿನಕರನ್ ಅವರು ಇದೇ ಕಳೆದ ನವೆಂಬರ್ 24 ರಂದು ಪ್ರಕರಣಕ್ಕೆ ಸಂಬಂಧಿಸಿದಂತೆ ಆದೇಶ ಕೊಟ್ಟಿದ್ದಾರೆ; ಸಾರ್ವಜನಿಕ ಉಪಯೋಗಕ್ಕಾಗಿ ಇರುವ ಸರ್ಕಾರಿ ಉದ್ಯಾನವನದಲ್ಲಿ ಅಕ್ರಮವಾಗಿ ಕಟ್ಟಡಗಳನ್ನು, ಗುಡಿಗುಂಡಾರಗಳನ್ನು ಕಟ್ಟುತ್ತಿರುವುದು, ಜೋರಾಗಿ ಮೈಕ್ ಹಾಕಿ ಸಾರ್ವಜನಿಕರ ನೆಮ್ಮದಿ ಹಾಳು ಮಾಡುತ್ತಿರುವುದು– ಎಲ್ಲವೂ ಕಾನೂನು ಬಾಹಿರ ಎಂದು ಸ್ಪಷ್ಟವಾಗಿ ಹೇಳಿದ್ದಾರೆ; ಈ ಆದೇಶ ಬಂದ 30 ದಿನಗಳೊಳಗಾಗಿ ಮಹಾನಗರ ಪಾಲಿಕೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಆದೇಶಿಸಿದ್ದಾರೆ.

ಆದರೆ, ಇಲ್ಲಿಯತನಕ ಏನೂ ಆಗಿಲ್ಲ, ನೆಲಗಳ್ಳರ ಸಂಘದ ಚಟುವಟಿಕೆಗಳು ದಿನನಿತ್ಯ ನಡೆಯುತ್ತಲೇ ಇವೆ. ಮಹಾನಗರ ಪಾಲಿಕೆ ಅಧಿಕಾರಿಗಳಂತೂ ಆ ಕಡೆ ತಲೆ ಹಾಕಿ ಮಲಗುತ್ತಿಲ್ಲ, ನ್ಯಾಯಾಲಯದ ಆದೇಶವೊಂದಕ್ಕೆ ಕವಡೆ ಕಾಸಿನ ಕಿಮ್ಮತ್ತು ಸಿಗದಿರುವುದು ವಾಸ್ತವದಲ್ಲಿ ನಮ್ಮ ಪ್ರಜಾತಂತ್ರದ ಅಣಕವಲ್ಲದೇ ಮತ್ತೇನಲ್ಲ.

ಈ ದೇಶದ ನಾಗರಿಕರು ತಮ್ಮ ಹಕ್ಕುಗಳಿಗಾಗಿ, ನ್ಯಾಯಯುತ ಸೌಲಭ್ಯಗಳಿಗಾಗಿ ಉಗ್ರ ಹೋರಾಟದ ದಾರಿ ಹಿಡಿದರೆ 'ಕಾನೂನು ಪ್ರಕಾರ ಹೋರಾಟ ಮಾಡಿ, ನ್ಯಾಯಾಲಯದ ಮೊರೆ ಹೋಗಿ' ಎಂದೆಲ್ಲಾ ಭಾಷಣ ಬಿಗಿಯಲಾಗುತ್ತದೆ. ಆದರೆ, ನ್ಯಾಯಾಲಯದ ಆದೇಶಕ್ಕೆ ಈ ಗತಿ ಬಂದರೆ ನ್ಯಾಯಕ್ಕಾಗಿ ನಾಗರಿಕರು ಎಲ್ಲಿಗೆ ಹೋಗಬೇಕು?

■ ಕುಮಾರ್ ಬುರಡಿ[illegible]

ಎಮ್ಮೆಲ್ಲೆ ವಿಜಯ್ ಕುಮಾರ್ ಬೆನ್ನಿಗಿದ್ದಾರೆಯೆ?

'ಜೆ.ಪಿ.ನಗರ 4ನೇ ಹಂತದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ' ಎಂಬ ನೆಲಗಳ್ಳರ ಕಂಪೆನಿಯ ಬೆಂಬಲಕ್ಕೆ ಜಯನಗರದ ಎಮ್ಮೆಲ್ಲೆ ವಿಜಯ್ ಕುಮಾರ್ ಇದ್ದಾರೆಯೇ ಎಂಬ ಪ್ರಶ್ನೆ ಜನರನ್ನು ಕಾಡುತ್ತಿದೆ. ವಾಸ್ತವದಲ್ಲಿ ಈ ಸಂಘದ ಉದ್ಘಾಟನೆಗೆ ವಿಜಯಕುಮಾರ್ ಬಂದಿದ್ದು ನಿಜ. ಆ ಹೊತ್ತು ಭಾಷಣ ಮಾಡುತ್ತಾ ಅವರು "ಈಗಾಗಲೇ ಬೆಂಗಳೂರಿನಲ್ಲಿ ಜನಸಂಖ್ಯೆ ಜಾಸ್ತಿಯಾಗಿ ವಾಸಕ್ಕೆ ಜಾಗವೇ ಇಲ್ಲದಂತಾಗಿ ಹೋಗಿದೆ. ಪರಿಸರ ಮಾಲಿನ್ಯ ಮಿತಿಮೀರುತ್ತಿದೆ. ಇದ್ದ ಬದ್ದ ಚಿಕ್ಕಪುಟ್ಟ ಪಾರ್ಕುಗಳಲ್ಲೂ ಗುಡಿಗುಂಡಾರಗಳನ್ನು ಕಟ್ಟಿ ಸಾರ್ವಜನಿಕರ ನೆಮ್ಮದಿ ಹಾಳು ಮಾಡಲಾಗುತ್ತಿದೆ. ನಿಮಗೆ ದೇವರ ಮೇಲೆ ಅಷ್ಟೊಂದು ಭಕ್ತಿಯಿದ್ದರೆ ಮನೆಯಲ್ಲಿ ಪೂಜೆ ಮಾಡಿಕೊಳ್ಳಿ. ಆದರೆ, ಉದ್ಯಾನವನಗಳಂಥ ಸಾರ್ವಜನಿಕ ಜಾಗಗಳನ್ನು ಹಾಳು ಮಾಡಬೇಡಿ" ಎಂದು ಬುದ್ಧಿ ಹೇಳಿ ಹೋಗಿದ್ದರು.

ವಿಜಯಕುಮಾರ್ ಬಂದು ಬುದ್ಧಿಮಾತೇನೋ ಹೇಳಿದ್ದರು. ಆದರೆ, ಇಂಥ ಸಂಘ ಕಟ್ಟಿದ್ದೇ ಉದ್ಯಾನವನದ ಜಾಗವನ್ನು ಸ್ವಾಹ ಮಾಡುವುದಕ್ಕೆ ಎಂಬ ಅಸಲೀಯತ್ತು ಗೊತ್ತಿಲ್ಲದೇ ಅವರು ಅದರ ಉದ್ಘಾಟನೆ ಮಾಡಿ ತಪ್ಪುಮಾಡಿಬಿಟ್ಟರು. ಈ ಹೊತ್ತು ಎಂ.ರಾಜಣ್ಣ, ಕೆಂ.ಎಂ.ಸಿದ್ಧರಾಜು, ಕೆ.ಸ್ವಾಮಿಯಂಥ ಸಂಘದ ಯಾವುದೇ ಪದಾಧಿಕಾರಿಯನ್ನು ಮಾತನಾಡಿಸಿ. ಬಾಯಿತೆರೆದರೆ "ನಮಗೆ ಎಮ್ಮೆಲ್ಲೆ ವಿಜಯಕುಮಾರ್ ಬೆಂಬಲವಿದೆ. ನಾವು ಯಾರಿಗೂ ಹೆದರುವುದಿಲ್ಲ" ಎಂದು ಹುಬ್ಬೇರಿಸಿಕೊಂಡು ಮಾತನಾಡುತ್ತಾರೆ. ಈ ಹೊತ್ತು ಅವರ ವಿರುದ್ಧ ಹೈಕೋರ್ಟಿನ ಮುಖ್ಯ ನ್ಯಾಯಮೂರ್ತಿ ಪಿ.ಡಿ.ದಿನಕರ್ ಅವರೇ ಆದೇಶ ನೀಡಿದ್ದಾರೆ.

ಯಾವುದಕ್ಕೂ ವಿಜಯ್‌ಕುಮಾರ್ ಒಂದಿಷ್ಟು ಹುಶಾರಾಗಿರುವುದು ಒಳ್ಳೆಯದು. ಈಗಲೂ ಅವರು ಎಚ್ಚೆತ್ತುಕೊಳ್ಳದಿದ್ದರೆ ಈ ನೆಲಗಳ್ಳರು ಮಾಡುತ್ತಿರುವ ದಂಧೆಯಲ್ಲಿ ಅವರದ್ದೂ ಪಾಲಿದೆ ಎಂದು ಅವರಿಗೂ ಕಪ್ಪು ಮಸಿ ಬೀಳುತ್ತದೆ; ಅವರ ರಾಜಕೀಯ ಭವಿಷ್ಯಕ್ಕೆ ಅದು ಅಪಾಯಕಾರಿ. ತಿಂದಿದ್ದಾರೋ, ಮಾಡಿದ್ದಾರೋ, ಅನುಭವಿಸೋದು ಇನ್ಯಾರೋ ಅನ್ನೋ ಪರಿಸ್ಥಿತಿ ಅವರಿಗೆ ಬರಬಾರದೆಂದರೆ ತಕ್ಷಣ ಅವರು ಈ ನೆಲಗಳ್ಳರ ವಿರುದ್ಧ ಮಾತನಾಡಲಿ; ನ್ಯಾಯಾಲಯದ ಆದೇಶವನ್ನು ಎತ್ತಿ ಹಿಡಿಯಲಿ. ■

ನೆಲಗಳ್ಳತನಕ್ಕೆ ಹೊಸ ವೇಷ!


ಜೆಪಿ ನಗರದ ಉದ್ಯಾನವನ್ನು ಗುಳುಂ ಮಾಡುವುದಕ್ಕಾಗಿಯೇ "ಜೆ.ಪಿ.ನಗರ 4ನೇ ಹಂತದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ"ವನ್ನು ಸ್ಥಾಪಿಸುವುದಕ್ಕೆ ತೀರಾ ಮುತುವರ್ಜಿ ವಹಿಸಿದ ಮಹನೀಯರೆಂದರೆ ಎಂ.ರಾಜಣ್ಣ ಮತ್ತು ಕೆ.ಎಂ.ಸಿದ್ಧರಾಜು.

ರಾಜಣ್ಣ ಕೋರ್ಟಿನಲ್ಲಿ ಒಬ್ಬ ಕ್ಲರ್ಕ್ ಆಗಿ ಕೆಲಸ ಮಾಡಿದವನು. ನಿವೃತ್ತಿಯಾಗುವ ಹೊತ್ತಿಗೆ ಅದೇನೇನೋ ಕಷ್ಟಪಟ್ಟು ಕಾನೂನು ಪದವಿಯನ್ನು ಪಡೆದುಬಿಟ್ಟ. ನಿವೃತ್ತಿಯಾದ ಮೇಲೆ ವಕೀಲಿ ವೃತ್ತಿ ಪ್ರಾರಂಭ ಮಾಡಿದ. ಆದರೆ, ಆತ ಕಾನೂನು ವಿಚಾರದಲ್ಲಿ ಅದೆಷ್ಟು ಚಾಣಾಕ್ಷನಾಗಿದ್ದನೆಂದರೆ ಹೆಚ್ಚು ಕಡಿಮೆ ತನಗೆ ಬಂದ ಎಲ್ಲಾ ಕೇಸುಗಳಲ್ಲಿ ಸೋತು ದಾಖಲೆ ಹೊಡೆದ! ಕೇಸುಗಳು ಬರುವುದೂ ನಿಂತವು. ತಾನೊಬ್ಬ ಯಶಸ್ವಿ ಲಾಯರ್ ಆಗುವುದು ಕಷ್ಟ ಎಂದು ಆತನಿಗೂ ಅನ್ನಿಸಿತು. ಹೀಗಾಗಿಯೇ ಈಗ ಈ ಸಂಘ ಕಟ್ಟಿಕೊಂಡು ಸರ್ಕಾರಿ ಭೂಮಿಯನ್ನು ಗುಳುಂ ಮಾಡಿಕೊಂಡು ಆಸ್ತಿಮಾಡಿಕೊಳ್ಳುವ ಕಳ್ಳದಾರಿ ಹಿಡಿದಿದ್ದಾನೆ.

ಇನ್ನು ಸಿದ್ಧರಾಜುನ ಕತೆ ಕೇಳಿ. ನೀವು ಆತನನ್ನು ಭೇಟಿಯಾಗಿ 'ಏನು ಕೆಲಸ ಮಾಡುತ್ತೀರಿ' ಅಂತ ಕೇಳಿ; ಬಿಡಿಎನಲ್ಲಿ ಲೋಕಾಯುಕ್ತ ಇನ್ಸ್‌ಪೆಕ್ಟರ್ ಅಂತ ಎದೆಯುಬ್ಬಿಸಿಕೊಂಡು ಹೇಳುತ್ತಾನೆ. ಬಿಡಿಎನಲ್ಲಿ ಲೋಕಾಯುಕ್ತ [illegible] ಯಾವಾಗಿನಿಂದ ಪ್ರಾರಂಭವಾಯ್ತು ಅಂತ ವಿಚಾರಿಸಿ ನೋಡಿ. ಸಿದ್ಧರಾಜನ ಅಸಲೀಯತ್ತು ಹೊರಬೀಳುತ್ತದೆ. [illegible] ಬಿಡಿಎನಲ್ಲಿ ಲೋಕಾಯುಕ್ತ ಅನ್ನೋ ಒಂದು ಪ್ರತ್ಯೇಕ ವಿಭಾಗವೇ ಇಲ್ಲ, ಇರೋದು ಅಂದ್ರೆ [illegible] ಕಟ್ಟಡಗಳನ್ನು ನೆಲಸಮ ಮಾಡುವುದಕ್ಕೆ ಇರೋ ಒಂದು ಡೆಮಾಲಿಷನ್ ವಿಂಗ್. ಅದರಲ್ಲಿ ಒಬ್ಬ ಎಸ್ಪಿ, ಒಬ್ಬ [illegible] ಇನ್ಸ್‌ಪೆಕ್ಟರ್, ಒಬ್ಬ ಸಬ್ ಇನ್ಸ್‌ಪೆಕ್ಟರ್ ಮತ್ತು ಆರು ಜನ ಪೇದೆಗಳು ಇದ್ದಾರೆ. ಈ ಆರು ಜನ ಪೇದೆಗಳಲ್ಲಿ [illegible] ಕೂಡ ಒಬ್ಬ ಆದರೆ ಹೇಳಿಕೊಳ್ಳೋದು ಮಾತ್ರ ಲೋಕಾಯುಕ್ತ ಇನ್ಸ್‌ಪೆಕ್ಟರ್ ಅಂತ! ■

ಕಾನೂನು ಸಚಿವರಿಗೆ ಒಂದು ಪ್ರಶ್ನೆ

'ಆರೋಪಿ' ಮತ್ತು 'ಅಪರಾಧಿ'ಗಳ ನಡುವೆ ವ್ಯತ್ಯಾಸವೇ ಇಲ್ಲವೆ?



ರಾಜ್ಯ ಮಂತ್ರಿ ಮಂಡಲದಲ್ಲಿ ಇತರರ ಜೊತೆ ಹೋಲಿಕೆಯಲ್ಲಿ ಸುರೇಶ್‌ಕುಮಾರ್ ವಿವೇಕವಂತರು ಎಂದು ಹೆಸರು ಮಾಡಿರುವವರು. ಈಗ ಅಂತಹವರೇ ಆರೋಪಿ ಮತ್ತು ಅಪರಾಧಿಗಳ ನಡುವೆ ವ್ಯತ್ಯಾಸವೇ ಇಲ್ಲವೆಂಬಂತೆ ಮಾತಾಡತೊಡಗಿದರೆ ಈ ರಾಜ್ಯದಲ್ಲಿ ಕಾನೂನಿನ ಆಳ್ವಿಕೆ ಮತ್ತು ಪ್ರಜಾಪ್ರಭುತ್ವ ಅಪಾಯದಲ್ಲಿವೆ ಎಂದೇ ಅದರ ಅರ್ಥ. ಶಂಕಿತ ಉಗ್ರಗಾಮಿಗಳಾದ ಪ್ರಜ್ಞಾಸಿಂಗ್ ಠಾಕೂರ್, ಲೆ.ಕ. ಶ್ರೀಕಾಂತ್ ಪುರೋಹಿತ್, ದಯಾನಂದ ಪಾಂಡೆ ಅಜಯ ರಾಹಿರ್‌ಕರ್ ಮುಂತಾದವರಿಗೆ ಬಿಜೆಪಿ ಹಾಗೂ ಶಿವಸೇನೆಗಳು ಒಟ್ಟಾಗಿ ಹಣಕಾಸು ಮತ್ತು ಕಾನೂನಿನ ನೆರವನ್ನು ಒದಗಿಸುತ್ತಿವೆ.

ಕೆಲವು ತಿಂಗಳ ಹಿಂದೆ ವಿಚಾರಣಾಪೂರ್ವ ಸೆರೆಯಾಳುಗಳಾಗಿದ್ದ ಶಂಕಿತ ಉಗ್ರಗಾಮಿಗಳ ಪರವಾಗಿ ಹುಬ್ಬಳ್ಳಿಯ ನ್ಯಾಯಾಲಯದಲ್ಲಿ ವಾದಿಸಿದ ವಕೀಲರ ಕಚೇರಿಯ ಮೇಲೆ ದಾಳಿ ನಡೆಯಿತು. ಹುಬ್ಬಳ್ಳಿಯ ವಕೀಲರ ಸಂಘವೂ ಈ ವಕೀಲರನ್ನು ಖಂಡಿಸಿತ್ತು. ನ್ಯಾಯಾಲಯದಲ್ಲಿ ಆರೋಪಿಗಳ ಪರವಾಗಿ ವಾದಿಸುವುದೇ ಅಪರಾಧ ಎಂಬ ಇದುವರೆಗೆ ನಾವು ಕಂಡು ಕೇಳರಿಯದ ಹೊಸ ನ್ಯಾಯವೊಂದನ್ನು ಹುಬ್ಬಳ್ಳಿಯ ವಕೀಲರೇ ಅವತ್ತು ಹುಟ್ಟುಹಾಕಿದರು. ಕಾನೂನಿನ ಆಳ್ವಿಕೆ ಮತ್ತು ಕಾನೂನಿನ ಕ್ರಮ ಎಂಬ ಪ್ರಜಾಪ್ರಭುತ್ವ ವ್ಯವಸ್ಥೆಯ ಮೂಲಭೂತ ಪರಿಕಲ್ಪನೆಗಳನ್ನೇ ಬುಡಮೇಲು ಮಾಡುವ ಈ ಏಕಪಕ್ಷೀಯ ಹಾಗೂ ಬುದ್ಧಿಗೇಡಿ ನಿಲುವನ್ನು ಇದೀಗ ರಾಜ್ಯದ ಬಿಜೆಪಿ ಸರ್ಕಾರದ ಸಚಿವರೊಬ್ಬರು ಅಧಿಕೃತವಾಗಿ ಸಮರ್ಥಿಸಿದ್ದಾರೆ!

ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವ ಸುರೇಶ ಕುಮಾರ್ ಇತ್ತೀಚೆಗೆ ಮಂಗಳೂರಿನ ವಕೀಲರ ಸಭೆಯೊಂದರಲ್ಲಿ ಮಾತನಾಡುತ್ತಾ "ನ್ಯಾಯಾಲಯಗಳಲ್ಲಿ ವಕೀಲರು ಶಂಕಿತ ಉಗ್ರಗಾಮಿಗಳ ಪರವಾಗಿ ವಾದಿಸ ಬಾರದು" ಎಂದು ಹೇಳಿದ್ದಾರೆ. ಅಂದರೆ ಮಾನ್ಯ ಸಚಿವರ ಮಟ್ಟಿಗೆ "ಶಂಕಿತ ಉಗ್ರಗಾಮಿ" ಮತ್ತು "ಅಸಲಿ ಉಗ್ರಗಾಮಿಗಳ" ನಡುವೆ ವ್ಯತ್ಯಾಸವೇ ಇಲ್ಲವೆಂದಾಯಿತು. ಆದರೆ ಭಾರತದ ಸಂವಿಧಾನ ರಾಜ್ಯಕಾನೂನು ಸಚಿವರ ಈ ನ್ಯಾಯ ನಿರ್ಣಯವನ್ನು ಮಾನ್ಯ ಮಾಡುವುದಿಲ್ಲ.

ಈ ಸಂವಿಧಾನ ಜಗತ್ತಿನ ಇತರ ಪ್ರಜಾಪ್ರಭುತ್ವ ರಾಷ್ಟ್ರಗಳಂತೆ ಆರೋಪಿಗಳಿಗೂ ಕೆಲವು ಹಕ್ಕುಗಳನ್ನು ನೀಡಿದೆ. ನ್ಯಾಯಾಲಯದ ಮುಂದೆ ಅಪರಾಧ ಸಾಬೀತಾಗುವವರೆಗೂ, ಆರೋಪಿಯನ್ನು ಮುಗ್ಧನೆಂದೇ ಪರಿಗಣಿಸಬೇಕು ಎನ್ನುವುದು ಜಗತ್ತಿನ ಹೆಚ್ಚಿನ ಪ್ರಜಾಪ್ರಭುತ್ವಗಳ ನ್ಯಾಯ ಪದ್ಧತಿಯ ಮೂಲಾಧಾರತತ್ವವಾಗಿದ್ದು ಭಾರತವೂ ಅದಕ್ಕೆ ಬದ್ಧವಾಗಿದೆ. ಈ ತತ್ವದ ಪ್ರಕಾರ ಆರೋಪಿಯ ವಿಚಾರಣೆ ಒಂದು ಕಟ್ಟುನಿಟ್ಟಾದ ಕಾನೂನಿನ ಕ್ರಮಕ್ಕೆ ಅನುಗುಣವಾಗಿ ನಡೆಯಬೇಕು. ಈ ಕಾನೂನಿನ ಕ್ರಮದಲ್ಲಿ ಆರೋಪಿಯ ಮೇಲಿರುವ ಆಪಾದನೆಯನ್ನು ಸಾಕ್ಷ್ಯಾಧಾರ ಸಮೇತ ಸಾಬೀತುಪಡಿಸುವುದು ನ್ಯಾಯಾಲಯದ ಕರ್ತವ್ಯವೇ ಹೊರತು ಅದು ಸ್ವತಃ ಆರೋಪಿಯ ಜವಾಬ್ದಾರಿಯಲ್ಲ. ಆರೋಪಿಯೇ ತನ್ನ ವಿರುದ್ಧ ಸಾಕ್ಷಿ ಆಗುವಂತೆ ಯಾರೂ ಆತನನ್ನು ಬಲಾತ್ಕರಿಸುವಂತಿಲ್ಲ. ಹಾಗಾಗಿ ಪೊಲೀಸು ಠಾಣೆಗಳಲ್ಲಿ ಹಿಂಸಾತ್ಮಕ "ಥರ್ಡ್ ಡಿಗ್ರಿ ವಿಧಾನ"ಗಳ ಮೂಲಕ ಆರೋಪಿಯಿಂದ ಹೊರಡಿಸಲಾಗುವ ಹೇಳಿಕೆಗಳನ್ನು ನ್ಯಾಯಾಲಯ ಸಾಕ್ಷಿ ಎಂದು ಪರಿಗಣಿಸುವುದಿಲ್ಲ. ಬಂಧನವಾದ 24 ಗಂಟೆಗಳ ಒಳಗೆ ಆರೋಪಿಯನ್ನು ನ್ಯಾಯಾಧೀಶರ ಎದುರು ಹಾಜರುಪಡಿಸುವುದು, ಅವಶ್ಯವಿದ್ದರೆ ಆತನಿಗೆ ವಕೀಲರ ನೆರವನ್ನು ಒದಗಿಸುವುದು ಹಾಗೂ ಕೆಲವು ನಿರ್ದಿಷ್ಟ ಅಪರಾಧದ ಆರೋಪಗಳನ್ನು ಹೊರತುಪಡಿಸಿ ಆರೋಪಿಗೆ ಜಾಮೀನಿನ ಅವಕಾಶ-ಇವು ಪ್ರಜಾಪ್ರಭುತ್ವ ನ್ಯಾಯವ್ಯವಸ್ಥೆಯಲ್ಲಿ ಆರೋಪಿಗೆ ಇರುವ ಹಕ್ಕುಗಳು. ಯಾವ ಆರೋಪಿಗೂ ತನ್ನ ಅಹವಾಲನ್ನು ಹೇಳಿಕೊಳ್ಳುವ ಹಕ್ಕನ್ನು ಪ್ರಜಾಪ್ರಭುತ್ವದಲ್ಲಿ ನಿರಾಕರಿಸುವಂತಿಲ್ಲ. ನ್ಯಾಯಾಲಯಗಳು ಇರುವುದೇ ಆರೋಪಿಯ ಅಹವಾಲುಗಳನ್ನು, ಜೊತೆಗೆ ಪರ ಮತ್ತು ವಿರುದ್ಧದ ಸಾಕ್ಷಿಗಳನ್ನು ಆಲಿಸಿ, ಆತ ಅಪರಾಧಿಯೋ ಅಲ್ಲವೋ ಎಂದು ತೀರ್ಮಾನಿಸುವುದಕ್ಕೆ ಹಾಗೂ ಅಪರಾಧಿಯೇ ಹೌದಾದರೆ ಆತನ ಅಪರಾಧಕ್ಕೆ ಸೂಕ್ತವಾದ ಶಿಕ್ಷೆ ವಿಧಿಸುವುದಕ್ಕೆ.




'ಅಡಿಕೆ ಕದ್ದರೂ ಕಳ್ಳ; 'ಆನೆ ಕದ್ದರೂ ಕಳ್ಳ' ಎಂಬ ಮಾತನ್ನು ಯಾವ ಪ್ರಜಾಪ್ರಭುತ್ವದ ನ್ಯಾಯವ್ಯವಸ್ಥೆಯೂ ಒಪ್ಪಿಕೊಳ್ಳುವುದಿಲ್ಲ; ಕಾನೂನಿನ ಕ್ರಮಕ್ಕೆ ಅನುಗುಣವಾಗಿ ಕಳ್ಳತನ ಸಾಬೀತಾಗುವವರೆಗೂ ಆರೋಪಿ 'ಕಳ್ಳ' ಎಂದು ಸಹ ಒಪ್ಪಿಕೊಳ್ಳುವುದಿಲ್ಲ. ದೇಶದ ಹಿರಿಯ ಕಾನೂನು ತಜ್ಞ ಮತ್ತು ಕೆಲಕಾಲ ಕೇಂದ್ರದಲ್ಲಿ ಕಾನೂನು ಸಚಿವರೂ ಆಗಿದ್ದ ರಾಮ್ ಜೇಠ್ ಮಲಾನಿ, "ಮುಂಬಯಿಯಲ್ಲಿ ನಡೆದ ದಾಳಿಯಲ್ಲಿ ಸೆರೆ ಸಿಕ್ಕ ಓರ್ವ ಭಯೋತ್ಪಾದಕನಿಗೆ ಸಹ ಕಾನೂನಿನ ನೆರವನ್ನು ನಿರಾಕರಿಸುವಂತಿಲ್ಲ. ಆರೋಪಿಯೊಬ್ಬನ ಪರವಾಗಿ ವಾದಿಸುವುದಿಲ್ಲ ಎಂದು ಹೇಳುವ ಹಕ್ಕು ಯಾವ ವಕೀಲನಿಗೂ ಇಲ್ಲ. ಭಾರತದ ಬಾರ್ ಕೌನ್ಸಿಲ್‌ನ ಒಂದು ನಿರ್ಣಯವೇ ಹಾಗೆಂದು ಹೇಳುತ್ತದೆ" ಎಂದು ಇತ್ತೀಚೆಗೆ ಹೇಳಿದರು. ಹಾಗೆಂದ ಮಾತ್ರಕ್ಕೆ ರಾಮ್ ಜೇಠ್‌ಮಲಾನಿ ಭಯೋತ್ಪಾದಕರನ್ನು ವಹಿಸಿಕೊಂಡು ಮಾತಾಡುತ್ತಿದ್ದಾರೆಯೆ? ಮೂರ್ಖರು ಮಾತ್ರ ಹಾಗೆ ವಾದಿಸಿಯಾರು.

ರಾಜ್ಯ ಮಂತ್ರಿ ಮಂಡಲದಲ್ಲಿ ಇತರರ ಜೊತೆ ಹೋಲಿಕೆಯಲ್ಲಿ ಸುರೇಶ್‌ಕುಮಾರ್ ವಿವೇಕವಂತರು ಎಂದು ಹೆಸರು ಮಾಡಿರುವವರು. ಈಗ ಅಂತಹವರೇ ಆರೋಪಿ ಮತ್ತು ಅಪರಾಧಿಗಳ ನಡುವೆ ವ್ಯತ್ಯಾಸವೇ ಇಲ್ಲವೆಂಬಂತೆ ಮಾತಾಡತೊಡಗಿದರೆ ಈ ರಾಜ್ಯದಲ್ಲಿ ಕಾನೂನಿನ ಆಳ್ವಿಕೆ ಮತ್ತು ಪ್ರಜಾಪ್ರಭುತ್ವ ಅಪಾಯದಲ್ಲಿವೆ ಎಂದೇ ಅದರ ಅರ್ಥ. ಸಾಮಾನ್ಯ ತಕ್ಷೀರುಗಳ ಆರೋಪಿಗಳಿಗೆ ಕಾನೂನಿನಲ್ಲಿ ಇರುವ ರಕ್ಷಣೆಗಳನ್ನು ಶಂಕಿತ ಉಗ್ರಗಾಮಿಗಳಿಗೆ ವಿಸ್ತರಿಸಕೂಡದು ಎಂಬುದು ಸುರೇಶ್‌ಕುಮಾರ್ ಅವರ ವಾದವಾಗಿರಬಹುದು. ಅವರ ಪಕ್ಷ ಬಿಜೆಪಿ ಪೋಟಾದಂತಹ ಸರ್ವಾಧಿಕಾರಿ ಕಾನೂನು ಜಾರಿಗೆ ಬರಲಿ ಎಂದು ಒತ್ತಾಯಿಸುತ್ತಿರುವುದರ ಕಾರಣವೂ ಅದೇ. ನ್ಯಾಯಾನ್ಯಾಯ ವಿವೇಚನೆಯ ನೆಲೆಯಲ್ಲಿ ಪೋಟಾ ಒಂದು ಒಳ್ಳೆಯ ಕಾನೂನೋ ಅಲ್ಲವೋ ಎಂಬ ಚರ್ಚೆ ಒತ್ತಟ್ಟಿಗಿರಲಿ, ಉಗ್ರವಾದವನ್ನು ಎದುರಿಸಲು ಕೂಡ ಅದರಿಂದ ಉಪಯೋಗವಿಲ್ಲ ಎಂಬುದು ಈಗಾಗಲೇ ಸಾಬೀತಾಗಿದೆ.

ಪೋಟಾ ಜಾರಿಯಲ್ಲಿದ್ದಾಗಲೇ ಗುಜರಾತ್‌ನ ಅಕ್ಷರಧಾಮ ಮತ್ತು ಜಮ್ಮುವಿನ ರಘುನಾಥ ದೇವಾಲಯಗಳ ಮೇಲೆ ದಾಳಿ ನಡೆಯಿತು. ಉಗ್ರಗಾಮಿಗಳು ಭಾರತದ ವಿಮಾನವೊಂದನ್ನು ಅಪಹರಿಸಿ ಪ್ರಯಾಣಿಕರನ್ನು ಒತ್ತೆಯಾಳುಗಳಾಗಿಟ್ಟುಕೊಂಡು ಸರ್ಕಾರವನ್ನೇ ಮಣಿಸಿದರು; ಪಾರ್ಲಿಮೆಂಟ್ ಭವನದ ಮೇಲೆ ಕೂಡ ಹಲ್ಲೆ ನಡೆಯಿತು. ಆದ್ದರಿಂದ ಸುಪ್ರೀಮ್‌ಕೋರ್ಟಿನ ವರಿಷ್ಠ ನ್ಯಾಯಾಧೀಶ ಕೆ.ಜಿ. ಬಾಲಕೃಷ್ಣನ್ ಹೇಳುವಂತೆ, "ಸಂವಿಧಾನದಲ್ಲಿ ಹೇಳಲಾಗಿರುವ 'ಸೂಕ್ತ ಕಾನೂನು ಕ್ರಮ'ವನ್ನ ಪಾಲಿಸುವುದು, ಉಗ್ರವಾದಕ್ಕೆ ನಮ್ಮ ಪ್ರತಿರೋಧದ ಒಂದು ಅವಶ್ಯ ಅಂಗವಾಗಿದೆ. ಅಪರಾಧವ ಎಷ್ಟೇ ದೊಡ್ಡದಾಗಿರಲಿ, ಆರೋಪಿಗಳ ನ್ಯಾಯಸಮ್ಮತ ವಿಚಾರಣೆಯ ಹಕ್ಕನ್ನು ನ್ಯಾಯವಾದಿಗಳ ಸಮುದಾಯ ನಿರಾಕರಿಸುವಂತಿಲ್ಲ. ಇದರಲ್ಲಿ ನಾವು ರಾಜಿ ಮಾಡಿಕೊಂಡರೆ ದ್ವೇಷ ಮತ್ತು ಹಿಂಸೆಗಳನ್ನು ಹರಡುವವರ ಎದುರು ನಾವು ಸೋತ ಹಾಗೆಯೇ ಸರಿ."

ಈ ದೇಶಕ್ಕೆ ಸ್ವಾತಂತ್ರ್ಯ ಬಂದ ಹೊಸತರಲ್ಲೇ ಮಹಾತ್ಮಾ ಗಾಂಧೀಜಿ ಕೊಲೆಯಾದರು. ಗಾಂಧೀಜಿಯವರನ್ನು ಗುಂಡಿಟ್ಟು ಕೊಂದ ನಾಥೂರಾಮ್ ಗೋಡ್ಸೆಯನ್ನು ಸ್ಥಳದಲ್ಲೇ ಬಂಧಿಸಲಾಯಿತು. 1948 ರ ಜನವರಿ 30 ರಂದು ದೆಹಲಿಯ ಬಿರ್ಲಾ ಮಂದಿರದ ಆವರಣದಲ್ಲಿ ನಡೆದ ಈ ಕೊಲೆಯನ್ನು ನೂರಾರು ಜನ ಕಣ್ಣಾರೆ ಕಂಡಿದ್ದರು. ಹಾಗಿದ್ದರೂ ಈ ಕೊಲೆಯ ಮೊಕದ್ದಮೆ ಒಂದೂವರೆ ವರ್ಷ ನಡೆಯಿತು. ದೆಹಲಿಯಲ್ಲಿ ಅದಕ್ಕೆಂದೇ ಒಂದು ವಿಶೇಷ ಟ್ರಯಲ್ ಕೋರ್ಟನ್ನು ಸ್ಥಾಪಿಸಲಾಯಿತು. ಗೋಡ್ಸೆ ಮತ್ತು ಈ ಕೊಲೆ ಸಂಚಿನಲ್ಲಿ ಭಾಗಿಯಾಗಿದ್ದ ಇತರರಿಗೆ ತಮ್ಮ ಪರವಾಗಿ ವಾದಿಸಲು ವಕೀಲರನ್ನು ನೇಮಿಸಿಕೊಳ್ಳುವ ಅವಕಾಶವನ್ನೂ ನೀಡಲಾಯಿತು. ಅಷ್ಟೇ ಯಾಕೆ, ದೆಹಲಿ ಕೋರ್ಟಿನ ತೀರ್ಪನ್ನು ಪ್ರಶ್ನಿಸಿ ಪಂಜಾಬ್ ಹೈಕೋರ್ಟಿನಲ್ಲಿ ಅಪೀಲು ಮಾಡಲು ಸಹ ಕೊಲೆಯ ಪ್ರಮುಖ ಆರೋಪಿ ಗೋಡ್ಸೆ ಮತ್ತು ಇತರರಿಗೆ ಅವಕಾಶ ನೀಡಲಾಯಿತು. ವಿಚಾರಣೆಯ ಯಾವ ಹಂತದಲ್ಲೂ ಗೋಡ್ಸೆ ತನ್ನ ಕೃತ್ಯವನ್ನು ನಿರಾಕರಿಸಿರಲಿಲ್ಲ. ಆದಾಗ್ಯೂ ತನ್ನ ಅಹವಾಲು ಹೇಳಿಕೊಳ್ಳಲು ಗೋಡ್ಸೆಗೆ ಮುಕ್ತ ಅವಕಾಶ ಕೊಡಲಾಯಿತು.



1949 ರ ಜೂನ್ 21 ರಂದು ಪಂಜಾಬ್ ಹೈಕೋರ್ಟ್ ಈ ಮೊಕದ್ದಮೆಯಲ್ಲಿ ತನ್ನ ಅಂತಿಮ ತೀರ್ಪು ನೀಡಿತು. ಈ ತೀರ್ಪಿನ ಪ್ರಕಾರ ಗೋಡ್ಸೆ ಮತ್ತು ಆತನ ನಿಕಟವರ್ತಿ ನಾರಾಯಣ ಆಪ್ಟೆಗೆ ಗಲ್ಲು ಶಿಕ್ಷೆಯಾಯಿತು. ಒಳಸಂಚಿನಲ್ಲಿ ಭಾಗಿಯಾಗಿದ್ದ ವಿಷ್ಣು ಕರ್ಕರೆ, ಮದನ ಲಾಲ್ ಪಹ್ವ ಮತ್ತು ಗೋಪಾಲ ಗೋಡ್ಸೆ (ನಾಥೂರಾಮ್‌ನ ತಮ್ಮ) ಜೀವಾವಧಿ ಜೈಲು ಶಿಕ್ಷೆಯಾದರೆ ಸಂಚಿನಲ್ಲಿ ಭಾಗಿಯಾಗಿದ್ದ ಶಂಕರ್ ಕಿಷ್ಟಯ್ಯ ಮತ್ತು ಗಾಂಧೀಜಿಯನ್ನು ಕೊಂದ ಪಿಸ್ತೂಲನ್ನು ಸರಬರಾಜು ಮಾಡಿದ ದತ್ತಾತ್ರೇಯ ಪರ್ಚುರೆ ಅವರುಗಳನ್ನು ಖುಲಾಸೆ ಮಾಡಲಾಯಿತು. ಎಲ್ಲಕ್ಕಿಂತ ಮುಖ್ಯವಾಗಿ ಈ ಮೊಕದ್ದಮೆಯ ಓರ್ವ ಪ್ರಮುಖ ಆರೋಪಿ ವಿ.ಡಿ. ಸಾವರ್ಕರ್ ಕೊಲೆಯ ಸಂಚಿನಲ್ಲಿ ನೇರವಾಗಿ ಭಾಗಿಯಾಗಿದ್ದಾರೆ ಎಂದು ಸಾಬೀತುಪಡಿಸಲು ಪ್ರಾಸಿಕ್ಯೂಷನ್ ವಿಫಲವಾಗಿದೆ ಎಂಬ ಕಾರಣಕ್ಕೆ ನ್ಯಾಯಾಲಯ ಅವರನ್ನು ಖುಲಾಸೆ ಮಾಡಿತು.

ಗಾಂಧೀಜಿ ಕೊಲೆ ಸಂಚಿನಲ್ಲಿ ಭಾಗಿಯಾಗಿದ್ದ ಎಲ್ಲರೂ ಸಾವರ್ಕರ್ ಅವರ ಹಿಂದೂತ್ವ ಸಿದ್ಧಾಂತದ ಅನುಯಾಯಿಗಳು ಹಾಗೂ ಅವರು ಸ್ಥಾಪಿಸಿದ್ದ ಹಿಂದೂ ಮಹಾಸಭಾದ ಸದಸ್ಯರು. ನಾಥೂರಾಮ್ ಗೋಡ್ಸೆ ಸಂಪಾದಕತ್ವದ 'ಹಿಂದೂ ರಾಷ್ಟ್ರ' ಪತ್ರಿಕೆಗೆ ಆರಂಭಿಕ ಬಂಡವಾಳ ಒದಗಿಸಿದವರೇ ಸಾವರ್ಕರ್. 1934 ರಿಂದ 1948 ರವರೆಗೆ ಗಾಂಧೀಜಿಯವರನ್ನು ಕೊಲ್ಲಲು ಆರು ಪ್ರಯತ್ನಗಳು ನಡೆದಿದ್ದು ಆರನೆಯ ಯಶಸ್ವಿ ಯತ್ನವೂ ಸೇರಿದಂತೆ ಎಲ್ಲ ಪ್ರಯತ್ನಗಳಲ್ಲೂ ಪಾಲುಗೊಂಡವ[...] ಹಿಂದೂತ್ವವಾದಿಗಳೇ ಆಗಿದ್ದರು. ಹಾಗಾಗಿ ಸಾವ[...] ಮೇಲೆ ಗಾಂಧೀಜಿ ಹತ್ಯೆಯ ಆರೋಪ ಹೊರಿಸುವ[...] ಸಾಕಷ್ಟು ಆಧಾರಗಳಿದ್ದವು. ಅವರ ಮೇಲಿನ ಗಂಭೀರ ಆರೋಪದ ವಿಚಾ[...] ಅತ್ಯಂತ ಕಟ್ಟುನಿಟ್ಟಾದ ಕಾನೂನಿನ ಕ್ರಮಗಳಿಗೆ ಅನುಸಾರವಾಗಿ ನಡೆದದ್ದರಿಂ[...] ಮಾತ್ರ ಅವರು ಖುಲಾಸೆಗೊಂಡರು. ಸಾರ್ವ[...] ಅವರನ್ನು ಅತ್ಯುನ್ನತ ನ್ಯಾಯಾಲಯವೇ ಗಾಂಧೀಜಿ[...] ಕೊಲೆಮೊಕದ್ದಮೆಯಲ್ಲಿ ನಿರ್ದೋಷಿ ಎಂದು ತೀರ್ಪು[...] ನೀಡಿರುವುದನ್ನು ಬಿಜೆಪಿ ನಾಯಕರು ಈಗಲೂ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಬಿಜೆಪಿಯ[...] ಈ ನ್ಯಾಯಪರತೆ ಗತಿಸಿದ ಸಾವರ್ಕರ್ ಮತ್ತು ಅವರ ಸಿದ್ಧಾಂತಕ್ಕೆ ಬದ್ಧರಾಗಿರುವವ[...] ಮಾತ್ರ ಮೀಸಲಾಗಿರುವಂತಹದ್ದು.

ಹಾಲಿ ಶಂಕಿತ ಉಗ್ರಗಾಮಿಗಳಾದ ಪ್ರಜ್ಞಾಸಿ[...] ಠಾಕೂರ್, ಲೆ.ಕ. ಶ್ರೀಕಾಂತ್ ಪುರೋಹಿತ್, ದಯಾನಂದ ಪಾಂಡೆ ಅಜಯ ರಾಹಿರ್‌ಕರ್ ಮುಂತಾದವರನ್ನು, ಅವರ ಮೇಲಿನ ಆರೋ[...] ಸಾಬೀತಾಗುವವರೆಗೂ ನಿರ್ದೋಷಿ ಎಂದು ಪರಿಗಣಿಸಬೇಕು ಎಂದು ಬಿಜೆಪಿ ನಾಯಕರು ವಾದಿಸಿದ್ದು ಮಾತ್ರವೇ ಅಲ್ಲದೆ, ಅವರನ್ನು ಮಹಾರಾಷ್ಟ್ರ ಭೀತಿನಿಗ್ರಹ ಕಾಯ್ದೆ (MCOC[...] ಯಂತಹ ಕರಾಳ ಕಾನೂನುಗಳ ಅಡಿಯಲ್ಲಿ ಹಿಂಸಿಸಲಾಗುತ್ತಿದೆ ಎಂದು ಸಹ ಆರೋಪಿಸಿದರ[...] ಬಿಜೆಪಿ ಹಾಗೂ ಶಿವಸೇನೆಗಳು ಒಟ್ಟಾಗಿ ಈ ಶ[...] ಉಗ್ರಗಾಮಿಗಳಿಗೆ ಹಣಕಾಸು ಮತ್ತು ಕಾನೂನಿನ[...] ನೆರವನ್ನು ಒದಗಿಸುತ್ತಿವೆ. ರಾಜನಾಥ್ ಸಿಂಗ್, ಅಡ್ವಾಣಿ ಮುಂತಾದ ಹಿರಿಯ ಬಿಜೆಪಿ ನಾಯಕ[...] ಹಿಂದೂಗಳು ಎಂದೂ ಭಯೋತ್ಪಾದರಾಗಲು ಸಾಧ್ಯವಿಲ್ಲ ಎಂದು ಹೇಳುತ್ತಿದ್ದಾರೆ. ಭಯೋತ್ಪಾದಕರೆಲ್ಲರೂ ಮುಸ್ಲಿಮರೇ ಎಂಬುದರ[...] ಬಗ್ಗೆ ಅವರಿಗೆ ಸಂದೇಹವೇ ಇಲ್ಲ.


ಹೀಗಾಗಿ ಸಚಿವ ಸುರೇಶ್‌ಕುಮಾರ್ ಶ[...] ಉಗ್ರಗಾಮಿ ಎನ್ನುವಾಗ ಅವರು ಮುಸ್ಲಿ[...] ಉಗ್ರಗಾಮಿಗಳ ಬಗ್ಗೆಯೇ ಹೇಳುತ್ತಿದ್ದಾರೆ; 'ಮುಸ್ಲಿ[...] ಎಂದು ಹೆಸರಿಸುವ ಅಗತ್ಯ ಕೂಡ ಅವರಿಗೆ ಕಾಣ[...]

ಇನ್ನು ಈ ರಾಜ್ಯದಲ್ಲಿ ನ್ಯಾಯಕ್ಕಾಗ[...] ಪ್ರಜಾಪ್ರಭುತ್ವಕ್ಕಾಗಲೀ ಉಳಿಗಾಲವಿದೆಯೇ?

■ ಜಿ. ರಾಜಶೇ[...]

ಕಾಡ ತೊರೆಯ ಜಾಡು

ಸಮಾಜವಾದಿ, ರೈತ ಹೋರಾಟಗಾರ ಕಡಿದಾಳು ಶಾಮಣ್ಣನವರ ಜೀವನಗಾಥೆ ಇತ್ತೀಚಿನ ತನಕ 'ಮಯೂರ' ಮಾಸಿಕದಲ್ಲಿ ಪ್ರಕಟಗೊಳ್ಳುತ್ತಿತ್ತು. ಈ ಅಂಕಣ ಅದೆಷ್ಟು ಜನಪ್ರಿಯವಾಗಿತ್ತೆಂದರೆ ಅದನ್ನು ಓದಲೆಂದೇ ಸಾವಿರಾರು ಜನ ಪ್ರತಿ ತಿಂಗಳು ಕಾಯುತ್ತಿದ್ದರು. ಈಗ ಈ ಅಂಕಣ ನಿಮ್ಮ ಈ ಪತ್ರಿಕೆಯಲ್ಲಿ ಮುಂದುವರೆಯುತ್ತಿದೆ. ನಿಮ್ಮೆಲ್ಲರಿಗೂ ಇಷ್ಟವಾಗುತ್ತದೆ ಎಂಬ ಆಶೆ ನಮ್ಮದು.



ಅಕ್ಷರ ರೂಪ: **ಅಕ್ಷತಾ ಕೆ.**


ಹೆಣ ಕಾಯುತ್ತಾ ಕಳೆದ ರಾತ್ರಿ

ಶಿವಮೊಗ್ಗದ ವೀರಶೈವ ಕಲ್ಯಾಣ ಮಂದಿರದ ಮಹಡಿ ...ಲಿನ ಕೋಣೆಯಲ್ಲಿ ಸಂಗಮೇಶ್ವರ ಗವಾಯಿಗಳೆಂಬ ...ಥ ಮೇಷ್ಟು ಸಂಗೀತ ಶಾಲೆ ನಡೆಸುತಿದ್ದರು. ಇವರ ... ಆಗಾಗ ನಾನು ಹೋಗಿ ಸಂಗೀತದ ಪಾಠಗಳನ್ನು ...ಳಿಸಿಕೊಳ್ಳುತ್ತಿದ್ದೆ. ವರ್ಷಕ್ಕೊಮ್ಮೆ ಈ ಶಾಲೆ ಮತ್ತು ...ಶೈವ ಸಮಾಜದ ನೇತೃತ್ವದಲ್ಲಿ ಪಂಚಾಕ್ಷರಿ ಗವಾಯಿಗಳ ...ಣ್ಯತಿಥಿ ಅಂಗವಾಗಿ ಮೂರು ದಿನದ ಆಹೋರಾತ್ರಿ ...ಗೀತ ಕಾರ್ಯಕ್ರಮವನ್ನು ವೀರಶೈವ ಕಲ್ಯಾಣ ಮಂದಿರ ...ಲ್ಲಿ ನಡೆಸೋರು. ಆಗಿನ್ನೂ ಉಲೂಪಿ ಚಿಕ್ಕ ಮಗು, ...ಡು ದಿನ ನಾನೊಬ್ನೆ ಕಾರ್ಯಕ್ರಮಕ್ಕೆ ಹೋಗಿದ್ದೆ. ...ನೆಯ ದಿನ ಮಾತ್ರ ಉಲೂಪಿಯನ್ನೂ ಕರೆದುಕೊಂಡು ...ದ್ರೂ ಹೋಗೋಣ. ಮಗು ಏನಾದ್ರೂ ಹಠ ಮಾಡಿದ್ರೆ ...ಹತ್ತಿರದಲ್ಲೆ ನನ್ನ ತಂಗಿ ಲಕ್ಷ್ಮಿದೇವಿಯ ಮನೆ ಇದ್ದಿದ್ದರಿಂದ ...ಗುವನ್ನು ಅಲ್ಲೆ ಬಿಟ್ಕೊಬಹುದು ಎಂದು ನಾನು ... ಮಾತಾಡಿಕೊಂಡು ಹೊರಟೆವು. ನಮ್ಜೊತೆ ಸಂಗೀತ ...ಲಿಕ್ಕೆ ರತ್ನಾಕರ ಗೌಡ್ರ ಮಗಳು ವಿದ್ಯಾ ಕೂಡಾ ...ದಿದ್ದಳು.

ಆವತ್ತು ಪುಟ್ಟರಾಜಗವಾಯಿಗಳ ಗಾಯನವಿತ್ತು. ...ರ್ಯಕ್ರಮ ನಡೀತಿರಬೇಕಾದ್ರೆ ಮಧ್ಯದಲ್ಲಿ ಗವಾಯಿಗಳಿಗೆ ...ರಂಗಿ ಸಾಥಿ ನೀಡುತ್ತಿದ್ದ ಕಲಾವಿದರು ಕುಸಿದು ಬಿದ್ದರು. ...ವರನ್ನು ಎತ್ತಿಕೊಂಡು ವೇದಿಕೆಯ ಹಿಂಭಾಗಕ್ಕೆ ...ಂಡೊಯ್ಯಲಾಯಿತು. ಗವಾಯಿಗಳು ಸಹ ಸಂಗೀತವನ್ನು ...ರ್ಧದಲ್ಲೆ ನಿಲ್ಲಿಸಿ ಆವರ ಜೊತೆಗೆ ತೆರಳಿದರು. ...ರ್ಯಕ್ರಮದ ಆಯೋಜಕರು ಸಹ ಓಡಿದ್ರು, ...ಂಗಣದಲ್ಲಿ ಗುಜುಗುಜು ಶುರುವಾಯಿತು. ನಾನು ...ೀಗಿ ಏನಾಯಿತು ಅಂತ ನೋಡಿಕೊಂಡು ಬರೋಣ ...ತ ಹೋದೆ. ಅಷ್ಟರಲ್ಲಿ ಬಿದ್ದವರನ್ನು ಕಲ್ಯಾಣ ಮಂದಿ... ಪೋರ್ಟಿಕೋ ಬಳಿ ...ದುಕೊಂಡು ಬಂದು ...ಗಿಸಿದ್ದರು. ಆಯೋಜಕರು ...ಟ್ಟರಾಜಗವಾಯಿಗಳಿಗೆ ...ಲ್ಲ ನೋಡಿಕೊಳ್ತೀವಿ ನೀವು ...ರ್ಯಕ್ರಮ ಮುಂದುವರೆಸಿ ಅಂತ ... ಕಳಿಸಿದರು. ಅವರು ಹೋಗಿ ...ೀತ ಮುಂದುವರೆಸಿದ ಕೂಡಲೇ ...ಯಿತು ಎಂದು ನೋಡಲು ...ದ ಪ್ರೇಕ್ಷಕರು ಸಹ ಮತ್ತೆ ತಮ್ಮ ...ಗೆ ಪಾವು ಒಳಗೆ ಹೋಗಿ ಸಂಗೀತ ...ಕೇಳತೊಡಗಿದರು. ಆಗ ಅಲ್ಲಿದ್ದ ...ಕರು 'ಇವರನ್ನೇನು ನಾವು ...ಲ್ಲ, ಇವರ್ಯಾರು ಅಂತಲೂ ನಮಗೆ ...ಲ್ಲ, ಅವರಾಗೇ ಬಂದು ಸಾರಂಗಿ ...ದ್ರು, ನಮಗೂ ಇದಕ್ಕೂ ಸಂಬಂಧವೇ ... ಅನ್ನೋ ತರದಲ್ಲಿ ಮಾತಾಡ...ದರು. ನಾನು ಅಲ್ಲೆ ಇದ್ದವನು 'ಅಲ್ರಿ ...ತ್ತು ಅವರು ಸಾರಂಗಿ ಬಾರಿಸ್ತಾ, ಬೊಕ್ಕೆಯಿಂದಲೂ ... ಕಾರ್ಯಕ್ರಮದಲ್ಲಿ ಸಾರಂಗಿ ನುಡಿಸಿದ್ದಾರೆ. ನಾವು ... ಸಂತೋಷ ಪಟ್ಟಿದ್ದೀವಿ. ಅದರೀಗ ಕುಸಿದು ಬಿದ್ದಿದ್ದಾರೆ. ಆಸ್ಪತ್ರೆಗೆ ಕರೆದುಕೊಂಡು ಹೋಗೋದು ಬಿಟ್ಟು ನಮಗೂ ಇವರಿಗೂ ಸಂಬಂಧ ಇಲ್ಲ ಅಂದ್ರೆ ಹೇಗೆ?' ಎಂದೆ. 'ನಾವೇನು ಇವರನ್ನ ಬರಕ್ಕೆ ಹೇಳಿರ್ಲಿಲ್ಲ ನಾವು ಇದಕ್ಕೆಲ್ಲ ಜವಾಬ್ದಾರಿ ತಗಳಕಾಗಲ್ಲ' ಅಂತ್ಹೇಳಿ ಅವರ ಪಾಡಿಗೆ ಒಳಗ್ಹೋದರು. ಗವಾಯಿಗಳಿಗೆ ತಂಬೂರಿ ಸಾಥಿ ನೀಡುತಿದ್ದ ಹುಡುಗ ಮತ್ತು ನಾನು ಇಬ್ಬರೇ ಅಲ್ಲಿ ಉಳಿದೆವು.


ಆ ಹುಡುಗ ಇದ್ದವನು 'ಸರ್, ಇವರು ನಮ್ಮ ಜೊತೆಗೆ ಎಲ್ಲಿಗೆ ಹೋದ್ರೂ ಬರೋರು, ಇವರಿಗೆ ಯಾವ ಊರು, ಇವರ ಮನೆ ಎಲ್ಲಿದೆ ಏನೂ ವಿಷಯ ಗೊತ್ತಿಲ್ಲ, ಏನಾದ್ರೂ ಆಗಲಿ ಈಗ ನಾವಿಬ್ರೂ ಇವರನ್ನ ಡಾಕ್ಟರರ ಹತ್ರ ಕರೆದುಕೊಂಡು ಹೋಗೋಣ' ಅಂದ. ಅಷ್ಟೊತ್ತಿಗೆ ಅವರಿಗೆ ಪೂರ್ತಿ ಪ್ರಜ್ಞೆ ತಪ್ಪಿಹೋಗಿತ್ತು, ಇನ್ನೂ ತಡ ಮಾಡೋದು ಸರಿಯಲ್ಲ ಎಂದು ಕೂಡ್ಲೆ ಒಂದು ಟಾಂಗಾ ಹಿಡಿದು ನಾನು ಮತ್ತು ಆ ಹುಡುಗ ಇಬ್ರೂ ಎತ್ತಿ ಟಾಂಗಾದಲ್ಲಿ ಹಾಕಿಕೊಂಡು ಹೋದ್ವಿ. ಡಾ. ಎನ್. ಡಿ. ಗೌಡ್ರು ಶಾಪ್ ಹತ್ತಿರದಲ್ಲೆ ಇದ್ದಿದ್ದರಿಂದ ಅಲ್ಲಿಗೆ ಕರೆದುಕೊಂಡು ಹೋದೆ, ಅಲ್ಲಿ ಜೂನಿಯರ್ ಡಾಕ್ಟರ್ ನನ್ನ ಬಾಲ್ಯದ ಸಹಪಾಠಿ ಡಾ. ಗೋವಿಂದಸ್ವಾಮಿ ಇದ್ದರು. ಅವರು ಪರೀಕ್ಷೆ ಮಾಡಿ ಅಯ್ಯೋ, ಸತ್ತೆ ಹೋಗಿದಾರೆ ಕಣ್ರಿ. ಯಾಕೆ ಕರೆದುಕೊಂಡು ಬರಕೋದ್ರಿ ಅಂದ್ರು. ನನಗೆ ಗಾಬರಿಯಾಗಿ ಮಲಗಿದ್ದ ಎನ್.ಡಿ ಗೌಡ್ರನ್ನೆ ಎಬ್ಬಿಸಿಕೊಂಡು ಕರ್ಕೊಂಬಂದೆ. ಅವರು ಸಹ ಬಂದು ನೋಡಿ ಹಾರ್ಟ್ ಅಟ್ಯಾಕ್ ಆಗಿ ಪ್ರಾಣ ಹೋಗಿದೆ. ನೀವೇನೋ ಒಳ್ಳೆ ಉದ್ದೇಶದಿಂದಲೇ ಕರೆದುಕೊಂಡು ಬಂದ್ರಿ, ಹಿಂಗಾದ್ರೆ ಏನು ಮಾಡಕ್ಕಾಗತ್ತೆ ಕರೆದುಕೊಂಡು ಹೋಗಿ ಅವರ ಮನೆಯವರು ಯಾರಾದ್ರೂ ಇದ್ರೆ ಅವರ ಸುಪರ್ದಿಗೆ ಒಪ್ಪಿಸಿ ಅಂದ್ರು.

ಮತ್ತೆ ಅದೇ ಟಾಂಗಾದಲ್ಲಿ ನಾನು ಮತ್ತು ಆ ಹುಡುಗ ಹೆಣ ತಗಂಡು ಕಾರ್ಯಕ್ರಮ ನಡೀತಿದ್ದಲ್ಲಿಗೆ ಬಂದ್ವಿ. ಕಾರ್ಯಕ್ರಮ ಮುಂದುವರೆದಿತ್ತು, ಹೀಂಗಾಗಿದೆ ಅಂತ ವಿಷಯ ತಿಳಿಸಬೇಕಲ್ಲ, ಕಲ್ಯಾಣ ಮಂದಿರದ ಆವರಣದಲ್ಲೆ ಟಾಂಗಾ ನಿಲ್ಲಿಸಿ, ವೀರಶೈವ ಸಮಾಜದ ಅಧ್ಯಕ್ಷರನ್ನು ಹುಡುಕಿಕೊಂಡು ಹೋದೆ. ಆವಾಗ ವಕೀಲರೊಬ್ಬರು ಅಧ್ಯಕ್ಷರಾಗಿದ್ದರು. ಸಂಗಮೇಶ್ವರ ಗವಾಯಿಗಳಿಗೆ ವಿಷಯ ತಿಳಿಸಿದೆ ಅವರು ಅಧ್ಯಕ್ಷರಿಗೆ ಹೇಳಿದರು. ಅಧ್ಯಕ್ಷರಿದ್ದವರು ಹೊರಗೆ ಬಂದವರೇ ಮೊದಲು ಹೆಣವನ್ನು ಗೇಟಿನ ಆಚೆ ತಗಂಡ್ಹೋಗಿ, ಇಲ್ಲೆಲ್ಲ ಬೇರೆ ಜಾತಿ ಧರ್ಮದವರ ಹೆಣ ಇಡೋ ಹಂಗಿಲ್ಲ, ನಮಗೂ ಇದಕ್ಕೂ ಯಾವ ಸಂಬಂಧವೂ ಇಲ್ಲ, ಅವರನ್ನೇನು ನಾವು ಕರೆಸಿರಲಿಲ್ಲ ಎಂದು ಸಿಟ್ಟಿನಿಂದ ಒದರುತ್ತಾ ಹೆಣ ಆಚೆ ತಗಂಡ್ಹೋಗು ಹೇಳಿದ್ದು ಕೇಳಿಸಿಲ್ವ ಎಂದು ಟಾಂಗಾದವನಿಗೆ ತಾಕೀತು ಮಾಡಿ ಹೆಣವಿದ್ದ ಟಾಂಗಾವನ್ನು ಆಚೆ ಕಳಿಸಿ ಮತ್ತೆ ತಮ್ಮ ಪಾಡಿಗೆ ತಾವು ಒಳಗ್ಹೋದರು.



ರಾಮದಾಸ್ ಮೊಮ್ಮಗಳು ತುಷಾರ ಜೊತೆ....

ಇಷ್ಟೊತ್ತು ಸುಮ್ಮನಿದ್ದ ಟಾಂಗಾದವನಿಗೆ ಯಾವಾಗ ಅಧ್ಯಕ್ಷರು ಹೀಗೆಲ್ಲ ಬಯ್ದು ಆಚೆಗಟ್ಟಿದರೋ, ಅವನಿಗೆ ಇರಿಸುಮುರಿಸು ಆಗೋಕೆ ಶುರುವಾಯ್ತು. ನನ್ನ ದುಡ್ಡು ನನಗೆ ಕೊಟ್ಟುಬಿಡಿ ನಾನು ಹೋಗ್ತೀನಿ ಅಂತ ಹಠ ಹಿಡಿದ. ಅಷ್ಟರಲ್ಲಿ ಹೀಗೊಂದು ಸಾವು ಸಂಭವಿಸಿದ ಕಾರಣಕ್ಕೋ ಏನೋ ಕಾರ್ಯಕ್ರಮವನ್ನು ಅರ್ಧದಲ್ಲೆ ಮುಗಿಸಲಾಯಿತು. ಹೊರಗೆ ಬಂದ ಪುಟ್ಟರಾಜಗವಾಯಿಗಳಿಗೆ ವಿಷಯ ತಿಳಿಸಿದೆ. ಅಂಧರಾದ ಅವರು ತಮ್ಮ ಸಹಾಯಕನ ಸಹಾಯದಿಂದ ರಸ್ತೆ ತನಕ ಬಂದು ಸತ್ತ ಸಾಬರ ಹೆಣದ ಕಾಲು ಮುಟ್ಟಿ ನಮಸ್ಕರಿಸಿ, ನಮ್ಮದೇ ವಾಹನವಿದೆ ಏನಕ್ಕಾದ್ರೂ ಬೇಕಾದ್ರೆ ಬಳಸಿಕೊಳ್ಳಿ ಎಂದು ನನಗೆ ಹೇಳಿ ಹೊರಟೋದ್ರು. ವೇದಿಕೆ ಮೇಲೆ ಇಷ್ಟೊತ್ತು ಕುಳಿತಿದ್ದ ಮಠಾಧೀಶರು, ಕಾರ್ಯಕ್ರಮದ ಆಯೋಜಕರು, ಗಣ್ಯರು ಎಲ್ಲ ಈ ಕಡೆ ನೋಡಿಕೊಳ್ತಾನೆ ಜಾಗ ಖಾಲಿ ಮಾಡಿದ್ರು. ಯಾರೂ ಹೆಣ ನೋಡ್ಲಿಕ್ಕೂ ಬರಲಿಲ್ಲ, ಜಟಕಾದವನೂ ಕೂಡಾ ನನಗೆ ದುಡ್ಡು ಬೇಡ, ಕಾಸು ಬೇಡಾ ನಾನು ಹೆಣಾನ ಇಲ್ಲೆ ಉರುಳಿಸ್ತೀನಿ ಅಂತ ಕೂತ್ಕಂಡ. ಆಯಿತು ನಿನಗೆ ತಿಳಿದಂಗೆ ಮಾಡು ಎಂದೆ. ಅವನು ಅಲ್ಲೆ ಹೆಣವನ್ನು ರಸ್ತೆ ಬದಿಯ ಮರದ ಕೆಳಗೆ ಹಾಕಿ ಹೊರಟುಹೋದ. ಅಷ್ಟೊತ್ತು ನನ್ನ ಜೊತೆ ಇದ್ದ ಹುಡುಗನೂ ಕೂಡಾ ನನಗೆ ಹೆದರಿಕೆ ಆಗತ್ತೆ ನಾನು ಹೋಗ್ತೀನಿ, ನಾನು ಇಲ್ಲಿದ್ದು ಏನು ಮಾಡ್ಲಿ, ವೀರಶೈವ ಹಾಸ್ಟೆಲ್‌ನಲ್ಲಿ ಉಳ್ಕೊಂಡಿದೀನಿ ಅಲ್ಲಿಗೆ ಹೋಗ್ತೀನಿ ಅಂತಾ ಹೇಳಿ ಓಡಿದ. ಅಷ್ಟೊತ್ತಿಗೆ ಶ್ರೀದೇವಿ, ವಿದ್ಯಾ ಸಭಾಂಗಣದಿಂದ ಈಚೆ ಬಂದು ಕಾಯುತ್ತಾ ನಿಂತಿದ್ದರು. ಅವರಿಗೆ ನಡೆದ ವಿಷಯ ತಿಳಿಸಿ ವಿದ್ಯನ್ನ ಅವರ ಮನೆಗೆ ಬಿಟ್ಟು ನಾನು ಶ್ರೀ ನನ್ನ ಮೋಟಾರ್ ಸೈಕಲ್ನಲ್ಲಿ ತಂಗಿ ಮನೆಗೆ ಹೋದ್ವಿ. ಉಲೂಪಿಗೆ ಜ್ವರ ಬಂದಿದೆ ಎಂದು ಶ್ರೀದೇವಿ ಚಿಂತಿತಳಾಗಿದ್ದಳು. ನನಗೆ ಯಾವ ರೀತಿಯಲ್ಲೂ ಆ ಮನುಷ್ಯ ಸಂಬಂಧಪಡದಿದ್ದರೂ ಅವನ ಹೆಣವನ್ನು ಹಾದಿ ಬೀದಿ ಪಾಲು ಮಾಡಿ ಹೋಗಿ ಮಲಗಲು ಮನಸು ಬರಲೇ ಇಲ್ಲ, ಅವರ ಹೆಣಕ್ಕೆ ಏನಾದ್ರೂ ವ್ಯವಸ್ಥೆ ಮಾಡಿ ಬಂದ್ಬಿಡ್ತೀನಿ ಅಂತ ಶ್ರೀಗೆ, ತಂಗಿಗೆ ತಿಳಿಸಿ ಮೋಟಾರ್ ಸೈಕಲ್‌ನ್ನು ತೆಗೆದುಕೊಂಡು ವಾಪಸ್ ಅಲ್ಲಿಗೆ ಬಂದೆ. ಹೆಣ ಅಲ್ಲೆ ಮರದಡಿ ಇತ್ತು.



ಶಾಮಣ್ಣನವರ ಮನೆಯಲ್ಲಿ ರಾಮದಾಸ್, ಪ್ರಭುಶಂಕರ್, ನಿರ್ಮಲಾ ಹಾಗೂ ಮೊಮ್ಮಗಳು ಊರ್ವಿ

ವಿಷಯ ತಿಳಿಸೋಣ ಅಂತ ತಾಲೂಕಾಫೀಸ್ ಪಕ್ಕದ ಪೊಲೀಸ್ ಠಾಣೆಗೆ ಹೋದ್ರೆ ಆ ರಾತ್ರಿಯಲ್ಲಿ ಇಬ್ಬರು ಪೇದೆಗಳು ಮಾತ್ರ ಇದ್ದರು. ಅವರಿಗೆ ನಡೆದ ವಿಷಯ ಹೇಳಿದೆ, ಅವರಿದ್ದವರು ಒಂದು ಅರ್ಜಿ ಕೊಡಿ, ಅರ್ಜಿ ಆಧಾರದ ಮೇಲೆ ನಾವೇನು ಕ್ರಮ ತಗೊಳಬೇಕು ಅಂತ ನೋಡ್ತೀವಿ. ಆದರೆ ಏನಕ್ಕೂ ಬೆಳಗಾಗಬೇಕು ಎಂದ್ರು. ಅವರೇ ಮತ್ತೊಂದು ಸೂಚನೆಯನ್ನೂ ಕೊಟ್ಟರು. ಏನಂದ್ರೆ ಸತ್ತವರು ಸಾಬರ ಜಾತಿ ಅಂತ ಹೇಳ್ತಿರಲ್ಲ ಸೀದಾ ಅಮೀರ್ ಅಹ್ಮದ್ ಸರ್ಕಲ್ನಲ್ಲಿದೆಯಲ್ಲ ಮಸೀದಿ ಅಲ್ಲಿಗೆ ಹೋಗಿ ವಿಷಯ ತಿಳಿಸಿ ಮತ್ತೆಲ್ಲ ಅವರು ನೋಡಿಕೊಳ್ತಾರೆ ಎಂದರು.

ಮಸೀದಿಗೆ ಹೋಗಿ ಹೀಗ್ಹೀಗೆ ಅಂತ ವಿಷಯ ತಿಳಿಸಿದೆ. ಅಲ್ಲಿದ್ದವರು ಈಗೇನೂ ಮಾಡಕ್ಕಾಗಲ್ಲ ಬೆಳಿಗ್ಗೆ ಬಂದು ನೋಡ್ತೀವಿ ಅಂದ್ರು. ನಾನು ವಾಪಾಸ್ ಬಂದು ಮೋಟಾರ್ ಸೈಕಲ್‌ನ್ನ ಒಂದು ಕಡೆ ನಿಲ್ಲಿಸಿ ಹೆಣ ಕಾಯುತ್ತಾ ಬೆಳಗು ಮಾಡಿದೆ. ಹೇಳಿದಂತೆ ಬೆಳಗಾಗುತ್ತಿದ್ದಂತೆ ಮಸೀದಿಯವರು ಮೂರು ಜನ ಬಂದ್ರು. ಯಾರಿವರು, ಯಾವೂರು, ನಿಮಗೇನಾಗಬೇಕು, ಹೇಗಾಯ್ತು ಅಂತ ಏನನ್ನೂ ಅವರು ಪ್ರಶ್ನೆ ಮಾಡಲಿಲ್ಲ ಬಂದವರೇ ಒಂದು ಟೇಪ್ ಹಿಡಿದು ಹೆಣದ ಅಳತೆ ತಗಂಡ್ರು, ಹೋಗಿ ಖಬರ್ ಸ್ಥಾನದಲ್ಲಿ ಈ ಅಳತೆ ಕೊಟ್ಟು ಗುಂಡಿ ತೋಡಲಿಕ್ಕೆ ಹೇಳಿ ಅಂದ್ರು. ಜೊತೆಗೆ ಬಟ್ಟೆ, ಸೋಪು, ಸೆಂಟು- ಹೀಗೆ ಮತ್ತೇನೇನೋ ವಸ್ತುಗಳ ಒಂದು ಪಟ್ಟಿ ಕೊಟ್ಟು ಗಾಂಧಿಬಜಾರಿನ ಇಂಥ ಅಂಗಡಿಯಲ್ಲಿ ಸಿಗುತ್ತದೆ ತಗಂಬನ್ನಿ ಎಂದರು. ಖಬರ್‌ಸ್ಥಾನಕ್ಕೆ ಹೋಗಿ ಅಳತೆ ಕೊಟ್ಟು ಗುಂಡಿ ತೋಡಲಿಕ್ಕೆ ಹೇಳಿದೆ. ಅವನು ಇದಕ್ಕೆ ದುಡ್ಡಾರು ಕೊಡದು ಎಂದ. ನಾನೇ ಜವಾಬ್ದಾರಿ, ನಾನೇ ಕೊಡ್ತೀನಿ ಎಂದೆ. ಅಲ್ಲಿಂದ ಗಾಂಧಿಬಜಾರಿಗೆ ಹೋಗಿ ಅವರು ಬರೆದುಕೊಟ್ಟ ವಸ್ತುಗಳನ್ನ ಖರೀದಿ ಮಾಡಿದೆ. ಆಗಿನ ಕಾಲದಲ್ಲೆ 300 ರೂಪಾಯಿಯಷ್ಟು ಬಿಲ್ಲಾಗಿತ್ತು. ಮರಳಿ ಬಂದ ಕೂಡಲೇ ಒಂದು ಡೋಲಿ ರೀತಿಯದನ್ನು ಮಸೀದಿಯಿಂದ ತಂದರು. ನೀವೂ ಖಬರ್ ಸ್ಥಾನದ ತನಕ ಬಂದು ಎಲ್ಲ ಮುಗಿಯೋ ತನಕ ಇರಬೇಕು ಅಂದ್ರು. ನೀವು ಹೊರಟು ಹೋದ್ರು ನಾನು ಎಲ್ಲ ಮುಗಿಯೋ ತನಕ ಇರೋದೆ ಸೈ ಎಂದೆ. ಹೆಣವನ್ನ ಡೋಲಿಯಲ್ಲಿಟ್ಟು ಹೊತ್ಕಂಡ್ರು, ನಾನು ಕೂಡಾ ಡೋಲಿಗೆ ನಾಲ್ಕನೆಯವನಾಗಿ ನನ್ನ ಭುಜ ಕೊಟ್ಟೆ. ಮೆಗ್ಗಾನ್ ಆಸ್ಪತ್ರೆ ಹತ್ತಿರವಿರುವ ಸಾಬರ ಸ್ಮಶಾನಕ್ಕೆ ತೆಗೆದುಕೊಂಡು ಹೋದ್ವಿ. ಹೆಣಕ್ಕೆ ಸ್ನಾನಗೀನ ಎಲ್ಲ ಮುಗಿದು ಇನ್ನೇನು ಮಣ್ಣು ಹಾಕಬೇಕು ಆಗ ಒಂದು ಹೆಂಗುಸು ಅಳ್ತಾ ಓಡಿಕೊಂಡು ಬಂದ್ಲು, ಅಲ್ಲಿದ್ದವರು ಅಳಬಾರದು ಯಾರೂ ಅಂತ ತಾಕೀತು ಮಾಡಿದರು. ಸಾಬರಲ್ಲಿ ಸತ್ತಾಗ ಜೋರಾಗಿ ಅತ್ತು ಕರೆದು ಮಾಡಬಾರದಂತೆ. ಆ ಹೆಂಗಸು ಸುಮ್ಮನಾದಳು. ಹೆಣ ಮಣ್ಣಾಯಿತು. ಎಲ್ಲರಂತೆ ನಾನೂ ಒಂದು ಹಿಡಿ ಮಣ್ಣು ಹಾಕಿದೆ.

ಆ ಹೆಂಗಸು ಸತ್ತ ಕಲಾವಿದರ ಹೆಂಡತಿಯಂತೆ. ಮೊದಲ ಹೆಂಡತಿ ಜೊತೆಗೆ ಯಾವುದೋ ಊರಿನಲ್ಲಿದ್ದ ಅವರು ಶಿವಮೊಗ್ಗಕ್ಕೆ ಬಂದಾಗ ಮಾತ್ರ ಈ ಹೆಂಗುಸಿನ ಮನೆಯಲ್ಲಿ ಇರುತ್ತಿದ್ದರಂತೆ. ಯಾರಿಂದ ಈ ವಿಷಯ ತಿಳಿಯಿತೋ ಗೊತ್ತಿಲ್ಲ. ಮಣ್ಣು ಮಾಡುವಾಗ ಓಡಿಬಂದಿದ್ದಳು. ನೋಡಿದರೆ ತುಂಬಾ ಬಡವಳು ಎಂದು ತಿಳಿಯುತಿತ್ತು. ಎಲ್ಲಿ ನಿಮ್ಮ ಮನೆ ಎಂದು ಕೇಳಿದೆ. ರಾಗಿಗುಡ್ಡದಲ್ಲಿ ಎಂದರು. ಸಾಹೇಬರಿಗೆ ಸಂಬಂಧಪಟ್ಟಂತೆ ಏನಾದ್ರೂ ವಸ್ತುಗಳು ಇರಬಹುದು ಅದನ್ನ ನಿಮಗೆ ಕೊಡಿಸ್ತೀನಿ ಎಂದು ವೀರಶೈವ ಕಲ್ಯಾಣ ಮಂದಿರಕ್ಕೆ ಕರೆದುಕೊಂಡು ಹೋದೆ. ಸಂಗಮೇಶ್ವರ ಗವಾಯಿಗಳಿಗೆ ಹೇಳಿ ಸಾಬರದೊಂದು ಬ್ಯಾಗಷ್ಟೆ ಇದ್ದಿದ್ದು ಅದನ್ನು ಕೊಡಿಸಿ ಜೊತೆಗೆ ನನ್ನ ಜೇಬಿಂದ 20 ರೂಪಾಯಿಯನ್ನು ತೆಗೆದುಕೊಟ್ಟೆ. ಇಷ್ಟೆಲ್ಲ ಆಗುವಾಗ ಮಧ್ಯಾಹ್ನವಾಗಿತ್ತು. ಮನೆಗೆ ಬಂದರೆ ಉಲೂಪಿಗೆ ಜ್ವರ ಜಾಸ್ತಿಯಾಗಿತ್ತು. ...ದು ಕಡೆ ಜ್ವರದಿಂದ ನರಳುತ್ತಿರುವ ಮಗು, ಮತ್ತೊಂದೆಡೆ ರಾತ್ರಿ ಮನೆ ಬಿಟ್ಟು ಮರುದಿನ ಮಧ್ಯಾಹ್ನವಾದರೂ ಮರಳಿ ಬಾರದ ನನ್ನ ಚಿಂತೆಯಲ್ಲಿ ಶ್ರೀದೇವಿ ಮತ್ತು ನನ್ನ ತಂಗಿ ದಿಕ್ಕು ತೋಚದ ಸ್ಥಿತಿಯಲ್ಲಿದ್ದರು.

ನಂಜೇಗೌಡನಂಥ ನೀರಾವರಿ ಮಂತ್ರಿ ಇನ್ನ ಬರದಿಲ್ಲ ಬುಡ

ನಂಜೇಗೌಡ ತೀರಿಹೋದ ಸುದ್ದಿ ಕೇಳಿದ ಕಾಳಮಾವ "ಚನಾಗೆ ಇದ್ನಲ್ಲ, ಅವುನಿಗೇನಾಗಿತ್ತೂ" ಎಂದ.

"ಚನ್ನಾಗೇನು. ಗಟ್ಟಿಮುಟ್ಟಗಿದ್ದ ಕಣಮಾವ. ಮಾತಾಡ್ತಯಿದ್ದಾಗ್ಲೆ ತೀರ್ಕೊಗ್ಯವುನೆ" ಎಂದ ಉಗ್ರಿ.

"ವಳ್ಳೆ ಸಾವು ಕಂಡ್ಳ. ನಮಿಗೂ ಅಂತ ಸಾವು ಬಂದ್ರೆ ಚಂದ."

"ಅಂತ ಸಾವು ಬರಕ್ಕೆ ಪುಣ್ಯ ಮಾಡಿರಬೇಕು" ಎಂದ ಸೀರ.

ಬಂಗಾರು ಸೀಮೆಯ ಕಟ್ಟೆಪುರಾಣ

■ ಬಿ. ಚಂದ್ರೇಗೌಡ

"ನೀರಾವರಿಲಿ ಅವುನ್ನ ಮೀರಸೋರೆ ಇರಲಿಲ್ಲ" ಎಂದ ಉಗ್ರಿ.

"ಏನೇನು ಬ್ಯಳಿತಿದ್ದಾ?" ಎಂದಳು ಜುಮ್ಮಿ.

"ರಾಗಿ ಆರ್ಕ ಉಳ್ಳಿ ಜ್ವಾಳ ಬ್ಯಳಿತಿದ್ದ."

"ಅವು ನೀರಾವರಿ ಬ್ಯಳಿಯೇನ್ಲ?"

"ಇನ್ನೇನೇಳನ ಮತ್ತೆ? ನೀರಾವರಿಲಿ ಅವುನ್ನ ಮೀರುಸೋರೆ ಇರಲಿಲ್ಲ ಅಂದ್ರೇ ನೀರಾವರಿ ವಿಷಯದ ತಿಳವಳಿಕೆಲಿ ಕಣೇ."

"ಅಂಗನ್ನ ಮತ್ತೆ, ಸಾವಿನ ಸುದ್ದಿ ಹೇಳಕೂ ತಮಾಸಿ ಮಾಡ್ತಿಯಲ್ಲ."

"ನಂಜೇಗೌಡ ಎಷ್ಟು ಮಟ್ಟಿಗೆ ನೀರಾವರಿ ವಿಷಯ ತಿಳಕಂಡಿದ್ದ ಅಂದ್ರೇ ಯಾವುದೇ ಸರ್ಕಾರ ಬಂದ್ರೂ ಅವುನ್ನ ಎಮ್ಮೆಲ್ಸಿ ಮಾಡಿ ಪರಮನೆಂಟಾಗಿ ನೀರಾವರಿ ಖಾತೆ ಕೊಡಬೇಕಾಗಿತ್ತು, ಅಂಗೇನಾರ ಮಾಡಿದ್ರೆ ಇಡೀ ಕರ್ನಾಟಗನ ಬಂಗಾರ ಮಾಡಿಬುಡೋನು."

"ಅಂಥೋನೇನ್ಲ?"

"ಊ ಕಣಮಾವ. ಯಾವ ಯಾವ ಅಣೆಕಟ್ಟು ಎಲ್ಲವೆ, ಏಟಗಲವೆ, ಅಚ್ಚುಗಟ್ಟು ಪ್ರದೇಶ ಎಷ್ಟು ಇದ್ಯಲ್ಲ ಬಾಯ್ಲೆ ಇತ್ತು, ಅದ್ಕೆ ಆ ಕಾಲ್ದಲ್ಲೆ ಚುಂಚನಗಿರಿ ಸ್ವಾಮಿಗಳು ಕರದು ಸನ್ಮುಮಾನ ಮಾಡಿದ್ರು."

"ಯಾವ ಕಾಲ್ದಲ್ಲೀ?"

"ಅರಸು ಕಾಲ್ದಲ್ಲಿ, ಇವುನು ನೀರಾವರಿ ಮಂತ್ರಿ. ದೇವರಾಜ ಅರಸು ನೀವೇನಾರ ಮಾಡಿ ಗೌಡ್ರೆ ನನ್ನ ಸಪೋರ್ಟದೆ ಅಂದಿದ್ರಂತೆ. ಅದ್ಕೆ ನಂಜೇಗೌಡನ ಕಾಲ್ದಲ್ಲಿ ಸುರುವಾದ ಕಾಮಗಾರಿ ಇನ್ನು ಮುಗದಿಲವಂತೆ."

"ಮುಲುಕಿ ಬಿದ್ದವೆ ಅನ್ನು."

"ಊ ಕಣಮಾವ. ನಂಜೇಗೌಡನಂತ ನೀರಾವರಿ ಮಂತ್ರಿ ಇಲ್ಲಿಗಂಟ ಬರಲಿಲ್ಲ ಕಣಮಾವ."

"ಮಕ್ಕಳೇಸಿದ್ದವುಲ ಅವುನಿಗೆ?"

"ಮುತ್ತಿನಂಗೆ ವಬ್ಬ ಮಗವುನೆ. ಈ ಮುಂದೆ ಮಕ್ಕಳಂಗೆ ಅರ್ದರ್ಧ ಡಜನ್ ಹುಟ್ಟಸಿಗಂಡಿಲ್ಲ ಅವುನು."

"ಸಂತಾನಫಲ ಇದ್ದಿದ್ರೆ ಅಷ್ಟೇನೊ, ಉಳದೋರ್‍ಯಾಕೆ ಬೈತಿಲ?"

"ಬೈಲಿಲ್ಲ, ವಳ್ಳೆ ಮಕ್ಕಳು ಎಷ್ಟರ ಹುಟ್ಟಲಿ. ಅದಲ್ಲ ಪಾಪ ನಂಜೆಗೌಡನಿಗೆ ಪುರುಸತ್ತೆ ಅಂತ ವಬ್ಬನೇ ಮಗ. ಅವುನಪ್ಪಕವುನವುನೆ. ಅಪ್ಪ ಮಗನಿಗಾಗಿ ಏನ್ನು ಮಾಡಕ್ಕೂ ಹೋಗಲಿಲ್ಲ, ಇವತ್ತಿನ ರಾಜಕಾರಣಕ್ಕೆ ನಂಜೇಗೌಡನಂತ ವಳ್ಳೆ ಮನ್ಸ ಯಾಕಬೇಕೇಳು? ಅದ್ಕೆ ಮೂಲಿಗೆ ಬದ್ದೊದ. ಅದಕೂ ದ್ಯಾವೇಗೌಡ್ನೆ ಕಾರಣ, ಇದಕೇನೇಳ್ತಿ?"


"ಹೂಸಿದೋಳ್ಯಾರು ಅಂದ್ರೆ ಮಾಸಲು ಸೀರ್ಕೊಳು ಅಂತ ಯಲ್ಲಾತ್ಕು ಅದೊಂತತ್ತಿ ನೀನು."

"ಇರದೇಳಿದೆ ಕಣಮಾವ. ಹಾಸನ, ಮಂಡ್ಯ, ಮೈಸೂರು, ತುಮಕೂರು ಇಲ್ಕಲ್ಲ ವಳ್ಳೆ ರಾಜಕಾರಣಿ ಏನಾರ ಮನೆಲವುನೆ ಅಂದ್ರೆ ದ್ಯಾವೇಗೌಡ ವಟ್ಟೆಮ್ಯಾಲೆ ತುಳದವುನೆ ಅಂತ್ಲೆ ಅರ್ಥ."

"ಅಂಗರೆ ನಂಜೇಗೌಡನಿಗೂ ಈ ಸನಿ ಹ್ಯಗಲೇರಿದ್ನ ಅನ್ನು?" ಎಂದ ಸೀರ.

"ಊ ಕಣಮಾವ. ಪಾಪ ಅದ್ಕೆ ಬಜೆಪಿಗೋಗಿ ಸೇರಿಕಂಡದ್ದ. ಅಲ್ಲಿ ನಂಜೇಗೌಡ ವರಗಿದ್ರೆ ಬಜೆಪಿ ಬ್ರಾಂಬ್ರು ವಳಗಡೆ ಕುತಗಂಡು ಮಾತಾಡೋರಂತೆ. ಓಹೊ ಬಜೆಪಿಗಳದು ಗರ್ಭಗುಡಿ ಸಂಸ್ಕೃತಿ. ಅಲ್ಲಿ ವರಗಡೆಯಿಂದ ಬಂದೋರ ವಳಿಕೆ ಸೇರಸದಿಲ್ಲ ಅಂತ ಹೇಳಿ ಈಚೆಗೆ ಬಂದ. ಬಂದೋನು ಅಂಗೆಯಿದ್ದ ಅತ್ತಗೆ."

"ಅಂಗೆಯಿರಲಿಲ್ಲ ಕಣೊ. ಮಾಯಾವತಿ ತಕ್ಕೋಗಿದ್ದ" ಎಂದ ವಾಟಿಸ್ಸೆ.



"ಮಾಯಾವತಿ ತಕ್ಕೊ ಹೋಗಿದ್ನೆ?"

"ಎಸ್. ಅವುಳ ಮನೆಲಾಗ್ಲೆ ದ್ಯಾವೇಗೌಡ ಕುಂತಿರದ ನೋಡಿ ವಾಪಸ್ಸು ಬಂದು ಸುಮ್ಮನಿದ್ದ ಪಾಪ ಇರಬೇಕಾದೋರ್‍ಲ ಸತ್ತು ಸಾಯಬೇಕಾದೋರ್‍ಕಲ್ಲ ಸುಖ ವಾಗಿರೋದೆ ನಮ್ಮ ರಾಜ್ಯದ ದುರಂತ."

"ಯಾರು ಸಾಯಬೇಕಾಗಿತ್ಲ ನಿನಿಗೆ?"

"ಯಾರು ಭೂಮಿಗೆ ವರಿಯಾಗಿದ್ದರೊ ಅವುರ್‍ಕಲ್ಲ ಬೀಳ್ಕೊಡಕ್ಕೆ ಯೋಗ್ಯರು ಕಣಕ್ಕ"

"ಭೂಮಿ ವರೆಯು ಇಳಿಸಿಗತ್ತದೆ. ಅದೇನು ನಿನ್ನ ಕೇಳತದೇನ್ಲ?"

"ಸಾರಿ ದ್ವಡಪ್ಪ. ನೀನಿನ್ನು ಇರಬೇಕು. ನಿನ್ನ ಯೇಜಿನೋರ್‍ಕಲ್ಲ ಇನ್ನೂ ರಾಜಕಾರಣ ಮಾಡ್ತಯಿರದ್ರಿಂದ ನೀನು ಇರಲೇಬೇಕು. ಇರತಿ ನೀನು. ನಿನಿಗೆ ಸುಗರ್‍ಇಲ್ಲ, ಬಿಪಿಯಿಲ್ಲ, ಯಾವ ಕಾಯಿಲೆನೂಯಿಲ್ಲ, ಆದ್ರಿಂದ ಇದ್ದೇ ಇರತಿ, ಯೇಚನೆ ಮಾಡಬ್ಯಾಡ, ನೀನಿದ್ರೆ ನಮ್ಮೂರಿಗೆ ಒಂದು ಕಳೆ."

"ಪ್ಯರಿನ ಮಗ್ಗಲಿರೊ ಕಳೆ ಅನ್ನು" ಎಂದ ಉಗ್ರಿ.

"ನಮ್ಮ ದ್ವಡಪ್ಪನೆ ಪ್ಯರು ಕಣೊ, ನಾವ್ಗಲ್ಲ ಕಳೆ. ಅಂಗೆ ನೋಡಿದ್ರೆ ನಮ್ಮ ದ್ವಡಪ್ಪನಿಗೆ ಯಾವುದಾರ ಯೂನಿವರ್ಸಿಟಿ ಇಷ್ಟೊತ್ತಿಗೆ ಡಾಕ್ಟರೇಟ್ ಕೊಡಬೇಕಾಗಿತ್ತು. ಹೋಗಿ ಹೋಗಿ ಯೆಡೂರಪ್ಪನಂಥೋರಿಗೆ ಡಾಕ್ಟರೇಟ್ ಕೊಡ್ತರಲ್ಲಾ? ಇಟೀಸ್ ಸೇಂ ಟು ಡಾಕ್ಟರೇಟ್ ಅ

"ಎಡೂರಪ್ಪನಿಗ್ಯಾಕ್ ಡಾಕ್ಟರೇಟ್ ಕೊಟ್ರೊ ವ ಎಂದ ಉಗ್ರಿ.

"ಯಾಕೆ ಅಂದ್ರೆ, ಬೂಕನಕ್ಕರೆಲುಟ್ಟಿ, ಮ ನಿಂಬೆಹಣ್ಣು ಮಾರಿದ ಶಿಕಾರಿಪುರಕ್ಕೋಗಿ, ರೈ ರೈಟರಾಗಿ, ಮೈತ್ರಾದೇ ವಾಗಿ, ಮುನಿಸಿಪಾಲಿಟಿ ರಾಗಿ, ಬಜೆಪಿ ಶಾಸ ಯಿರೋಧ ಪಕ್ಷದ ನಾಯ ಉಪಮುಖ್ಯಮಂತ್ರಿಯಾಗಿ ದಿನದ ಮುಖ್ಯಮಂತ್ರಿಯಾ ಜನಾದೇಶ ಪಡೆದ ಮುಖ ಯಾಗ್ಯವುನೆ ಅಂತ ಕ ಕಣೊ ಉಗ್ರಿ."

"ಅಂಗಾದ್ರೆ, ಈಸ ಯೋಗ್ಯ ಅಂತಿಯಾ?"

"ಕೊಡೋ ಯೂನಿ ಇರುವಾಗ ಈಸಗಳದೇನು

"ಅಂಗರಿನ್ನ ಮ್ಯಾಲೆ ಎಡೂರಪ್ಪ ಅನ್ನು?"

"ಏನೇ ಆಗ್ಲಿ ದ ಬುಟ್ಟು ಇನ್ನ್ಯಾರಿಗೂ ದ ಅನ್ನಬಾರದು ಕಂಡ್ಯ" ಎಂದ ಸೀರ ಮುಖ ಸಿಂ

"ನೀನೇಳದು ನಿಜ ಚಿಗಪ್ಪ, ಕತೆ ಬರಿ ಸೋಬಾನೆ ಪದ ಬರಕಳೋರು, ಇಂಥ ಯೂನಿವರ್ಸಿಟಿ ಡಾಕ್ಟರೇಟ್ ಕೊಟ್ರೊ ಕೊಟ್ರೊ ಮನೆ ಮುಂದೆ ನೋಡು. ಹೆಸರು ಮುಂದೆ ಅಂತ ಹಾಯ್ಕಂಡವುರೆ. ಡಾಕ್ಟರೇಟು ಪದವಿ ಸೀಮಿತ ಆಗಬೇಕು. ಹೆಸರು ಮುಂದೆ ನಿಲ್ಲುಸಬೇಕು. ಇಲ್ಲ ಅಂದ್ರೆ ನಮ್ಮ ಡಾಕ್ಟರಿಗ ಡಾಕ್ಟರಿಗೂ ಕನ್‌ಪೀಜಾಯ್ತದೆ. ನಮ್ಮ ಚಿಗಪ್ಪನಂ ಹಾದಿಬೀದಿಲ್ಕಲ್ಲ ಯಾಕೊ ಸ್ವಂಟ ನೋಯ್ತದ

ನಂ. ಟೆನ್ ಅಂದ್ರೇ ಬೆಚ್ಚಿ ಬೀಳ್ತಾರಲ್ಲಾ....

ಎಲ್ಲಾ ಸಮಸ್ಯೆಗಳಿಗೂ ಪರಿಹಾರ ಸಿಗುವುದೆಲ್ಲಿ?

'ಎಲ್ಲೂ ಇಲ್ಲ' ಎನ್ನುವುದು ಸಿನಿಕರ ಉತ್ತರ.

ಆದರೆ ಇದು ಸುಳ್ಳು! ಸಮಸ್ಯೆಗಳೆಲ್ಲದರ ಪರಿಹಾರ ನಿಧಿಯೊಂದಿದೆ!

ಎಲ್ಲಿದೆ ಈ ಸಂಜೀವಿನಿ?

ಭಗವದ್ಗೀತೆಯಲ್ಲಿ ಅಡಗಿದೆ!

ಇದು ಸುಳ್ಳಲ್ಲ, ಅಬ್ಬೇಪಾರಿಗಳ ಮಾತಲ್ಲ, ಸಾಕ್ಷಾತ್ ದೈವಸ್ವರೂಪವಾದ ಪೇಜಾವರ ಮಠದ ವಿಶ್ವೇಶತೀರ್ಥರ ಬಾಯಿಂದ ಹೊರಬಿದ್ದ ಅಮೃತವಾಣಿ ಇದು!


ತಮ್ಮ ಸಂಶೋಧನೆಯ ವಿವರವನ್ನು ನೀಡಲು ಕಾರಣವೂ ಇತ್ತು.

ಪೇಜಾವರ ಶ್ರೀಗಳಿಗೂ ದಲಿತರಿಗೂ ಯಾಕೋ ಗ್ರಹಗತಿಗಳು ಕೂಡಿಬರುತ್ತಿಲ್ಲ. ಜಾತಿವಿನಾಶ ವೇದಿಕೆಯ ಲಕ್ಷ್ಮಣ್ ಅವರು ಶ್ರೀಗಳನ್ನು ಅಂಬೇಡ್ಕರ್ ಪರಿನಿರ್ವಾಣದ ದಿವಸ ಸಹಭೋಜನಕ್ಕೆ ಆಹ್ವಾನಿಸಿದ್ದರಷ್ಟೆ. ಅದು ವಾರ್ಷಿಕ ತಿಥಿ ಊಟ. ಕಾವಿಧಾರಿಗಳನ್ನು ಇಂತಹ ಭೋಜನ ಕೂಟಕ್ಕೆ ಆಹ್ವಾನಿಸಬಾರದೆಂಬ ಕನಿಷ್ಠ ಪ್ರಜ್ಞೆಯೂ ಅವರಿಗಿದ್ದಂತಿಲ್ಲ. ಅದೂ ಅಲ್ಲದೆ ಪೇಜಾವರ ಶ್ರೀಗಳು ಮುಂದೆ ನಿಂತು ಬಾಬರಿ ಮಸೀದಿ ಧ್ವಂಸ ಮಾಡಿಸಿದ ದಿವಸ ಅದು. ವಿಜಯೋತ್ಸವವನ್ನು ಆಚರಿಸಬೇಕಾದ ಸಮಯದಲ್ಲಿ ತಿಥಿ ಊಟಕ್ಕೆ ಆಹ್ವಾನ ನೀಡಿದರೆ ಎಂತಹವರಿಗಾದರೂ ಹೇಸಿಗೆ ಹುಟ್ಟಿಸುವುದು ಸಹಜವೇ ಆಗಿತ್ತು, ಇದನ್ನು ಆಹ್ವಾನಿತರು ಅರ್ಥ ಮಾಡಿಕೊಳ್ಳಬೇಕಿತ್ತು, ಆದರೆ ಹಾಗೆ ನಡೆಯಲಿಲ್ಲ. ಆದರೂ ಪೂಜ್ಯ ಸ್ವಾಮೀಜಿಯವರು ತಮ್ಮ ಧರ್ಮಕ್ಕೆ ಅನುಗುಣವಾಗಿ ಆ ಅಪರಾಧವನ್ನು ಹೊಟ್ಟೆಯಲ್ಲಿ ಹಾಕಿಕೊಂಡರು.

ಸಹಭೋಜನಕ್ಕೆ ಯಾಕೆ ಬರಲಾಗುತ್ತಿಲ್ಲ ಎಂಬುದನ್ನು ಪತ್ರಮುಖೇನ ವಿವರಿಸಿ ಕೊರಿಯರ್‌ನಲ್ಲಿ ಕಳುಹಿಸಿದ್ದರಂತೆ. ಆದರೆ ಆ ಪತ್ರ ವಿಳಾಸ ಪತ್ತೆ ಆಗದೆ ಹಿಂತಿರುಗಿತಂತೆ! ಇದು ಪೂಜನೀಯರ ಅಪರಾಧ ಹೇಗಾಗುತ್ತೆ ಎಂಬುದು ಅವರಿಗೆ ಅಚ್ಚರಿ ತರಿಸಿತಂತೆ.

ಅಸ್ಪೃಶ್ಯತೆಯನ್ನು ತೊಡೆಯಲು ಇಷ್ಟೆಲ್ಲ ಪ್ರಯತ್ನಗಳು ನಡೆದಿದ್ದರೂ ಭೋಜನ ಕೂಟಕ್ಕೆ ಆಹ್ವಾನಿಸಿದ್ದವರಿಗೆ ಅಸಮಾಧಾನ ಕಡಿಮೆಯಾಗಲಿಲ್ಲ, ಅಸ್ಪೃಶ್ಯತೆಯನ್ನು ಕುರಿತು ಮಾತನಾಡಲು ಇವರಿಗೆ ಯಾವ ಹಕ್ಕೂ ಇಲ್ಲ ಎಂದು ಪ್ರತಿಪಾದಿಸುತ್ತಿದ್ದಾರೆ! ಆದರೂ ಪೂಜನೀಯರು ಧೃತಿಗೆಟ್ಟಿಲ್ಲ, ಅಸ್ಪೃಶ್ಯತೆ ತೊಲಗಿಸಲೇಬೇಕೆಂದು ದೃಢ ತೀರ್ಮಾನ ಕೈಗೊಂಡಿರುವುದು ಸಮಾಧಾನದ ಸಂಗತಿ.

ಸಹಭೋಜನ ಮಾತ್ರದಿಂದಲೇ ಅಸ್ಪೃಶ್ಯತೆ ನಿವಾರಣೆಯಾಗುವ ಹಾಗಿದ್ದರೆ ಅವರು ಅದಕ್ಕೆ ಸಿದ್ಧರಾಗಿದ್ದಾರೆ. ಉಡುಪಿಯ ಮಠದಲ್ಲಿ ಬ್ರಾಹ್ಮಣರಿಗೆ ಇರುವ ಪ್ರತ್ಯೇಕ



ಭೋಜನ ಶಾಲೆ ತ್ಯಜಿಸಲೂ ತಯಾರಾಗಿದ್ದಾರೆ. ಮಠಾಧಿಕಾರಿಯಾಗಿ ದಲಿತರನ್ನು ನೇಮಿಸಲೂ ಅವರ ಅಡ್ಡಿ ಇಲ್ಲ. ಆದರೆ ಇಂತಹ ಯಾವುದೇ ಕ್ರಮಗಳಿಂದಲೂ ಅಸ್ಪೃಶ್ಯತೆ ನಿವಾರಣೆ ಅಸಾಧ್ಯ ಎಂಬ ಅರಿವು ಅವರಿಗಿದೆ. ಆದುದರಿಂದ ಅವರು ವಿನೂತನ ಪ್ರಯೋಗ ಪ್ರಾರಂಭಿಸುತ್ತಿದ್ದಾರೆ.

ಹಿಂದೂ ಧರ್ಮದಲ್ಲಿ ಅಸ್ಪೃಶ್ಯತೆಯಿಂದ ನರಳುತ್ತಿರುವವರ ನೋವು ಅವರ ಕರುಳನ್ನು ಕಿತ್ತು ತಿನ್ನುತ್ತಿದೆಯಂತೆ. ಇಷ್ಟೊಂದು ಅವಮಾನಗಳ ನಡುವೆಯೂ ದಲಿತರು ಹಿಂದೂ ಮತವನ್ನು ಬಿಡದೆ ಇರಲು ಕಾರಣವಾದ ಅವರ ಸಹನಾಶಕ್ತಿಯನ್ನು ಪೂಜನೀಯರು ಶ್ಲಾಘಿಸಿದ್ದಾರೆ. ಮಠಾಧೀಶರೆಲ್ಲರನ್ನೂ ಒಂದು ಕಡೆ ಸೇರಿಸಿ ಅಸ್ಪೃಶ್ಯತೆಯ ನಿವಾರಣೆಯ ಕುರಿತು ಚರ್ಚಿಸುತ್ತಾರಂತೆ. ಎಲ್ಲಾ ಮಠಾಧೀಶರುಗಳಿಗೂ ದಲಿತ ಕೇರಿಗಳಿಗೆ ಹೋಗಿ ಅವರಿಗೆ ಸಾಂತ್ವನ ಹೇಳಲು ಕೋರುತ್ತಾರಂತೆ. ಇದರ ಬದಲು ಅಸ್ಪೃಶ್ಯತೆಯ ಲಾಭ ಪಡೆಯುತ್ತಿರುವ ಸವರ್ಣೀಯರ ಕೇರಿಗಳಿಗೆ ಮಠಾಧೀಶರು ಪಾದ ಬೆಳೆಸಿ ಈ ಆಚರಣೆಯನ್ನು ಮುಂದುವರಿಸಿದರೆ ನಿಮಗೆ ಬಹಿಷ್ಕಾರ ಹಾಕಲಾಗುತ್ತೆ ಎಂದು ಬೆದರಿಸಬಹುದಲ್ಲಾ ಎಂದು ಕೆಲವು ಪ್ರಗತಿಪರರು ಎನಿಸಿಕೊಂಡವರು ಕುಹಕವಾಡುತ್ತಾರೆ. ಪೇಜಾವರ ಶ್ರೀಗಳು ಯಾವ ಕ್ರಮ ಕೈಗೊಂಡರೂ ಇವರ ಕೊಂಕು ಇದ್ದೇ ಇರುತ್ತೆ. ಶ್ರೀಗಳಿಗೆ ಯಾವ ಪೊದೆಯನ್ನು ಯಾವಾಗ ಎಲ್ಲಿ ಹೊಡೆದರೆ ಹಿಂದೂ ಧರ್ಮ ಉಳಿಯುತ್ತೆ ಎಂಬು ದರ ಅರಿವಿರುವುದಂತೂ ಸತ್ಯ ಸಂಗತಿಯೇ ಆಗಿದೆ.

ಶ್ರೀಗಳ ಹೋರಾಟ ಇಲ್ಲಿಗೇ ಮುಕ್ತಾಯವಾಗಿಲ್ಲ, ಸರ್ವ ಸಮಸ್ಯೆ ಪರಿಹಾರ ಹೊಂದಿರುವ ಗಣಿ ನಿಧಿಯನ್ನು ಪ್ರತಿ ದಲಿತ ಕೇರಿಯಲ್ಲೂ ಪ್ರಚಾರ ಮಾಡುವ ಮಹತ್ಕಾರ್ಯವನ್ನು ಅವರು ಪ್ರಾರಂಭಿಸಲಿದ್ದಾರಂತೆ.

ಈ ಸತ್ಕಾರ್ಯಕ್ಕೂ ಪ್ರಗತಿಪರರೆನ್ನುವವರ ವಿರೋಧ ಎಂದರೆ ಏನು ಹೇಳೋಣ. ಅವರು ಭಗವದ್ಗೀತೆಯ ಮೂಲಕ್ಕೇ ಕೈಹಾಕಲು ಹೋಗುತ್ತಾರೆ. ಅದು ಬೌದ್ಧ ಧರ್ಮವನ್ನು ಸಂಪೂರ್ಣವಾಗಿ ನಾಶ ಮಾಡಲು ಬ್ರಾಹ್ಮಣ್ಯ ಹೂಡಿದ ತಂತ್ರ ಅಂತ ಜರಿಯುತ್ತಾರೆ. ಪುರೋಹಿತಶಾಹಿಯ ನಿರಂಕುಶ ಮೇಲುಗಾರಿಕೆಗಾಗಿ 'ಚಾತುರ್ವಣ್ಯಮಯಂ ಸೃಷ್ಟಿ' ಎಂದು ಕೃಷ್ಣನ ಬಾಯಿಂದ ಹೇಳಿಸುವ ಚಾಣಾಕ್ಷತನ ಮೆರೆದಿದ್ದಾರೆ ಎಂದು ಕೋಪಗೊಳ್ಳುತ್ತಾರೆ. ಆ ಭಗವಂತನ 'ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಶು ಕದಾಚನ' ಎಂಬ ಮಾತೂ ಇದೇ ಉದ್ದೇಶದಿಂದ ಕೂಡಿದೆ ಎಂದು ಕೂಗಾಡುತ್ತಾರೆ.

ಇಂತಹ ಹುಚ್ಚಾಟಗಳಿಗೆಲ್ಲ ಪೂಜ್ಯ ಸ್ವಾಮೀಜಿಯವರು ಸೊಪ್ಪು ಹಾಕುವುದಿಲ್ಲವೆಂಬುದು ಸಮಾಧಾನದ ಸಂಗತಿ. ದಲಿತ ಕೇರಿಯ ಜನರು ಹಣೆಯಬರಹದಲ್ಲಿ ನಂಬಿಕೆ ಇರುವವರು. ಭಗವಂತನೇ ಜಾತಿಯನ್ನು ಸೃಷ್ಟಿಸಿದ ಎಂದು ನಂಬುವವರು. ಯೋಗಿ ಪಡೆದದ್ದು ಯೋಗಿಗೆ, ಭೋಗಿ ಪಡೆದದ್ದು ಭೋಗಿಗೆ ಎಂಬ ನಂಬಿಕೆಯುಳ್ಳವರು. ಬಂದದ್ದೇ ಪುಣ್ಯ ಎಂದು ಭಾವಿಸುವವರು. ಮಾತುಗಳನ್ನು ಸಂಸ್ಕೃತದಲ್ಲಿ ಉದ್ಧರಿಸಿ ಕನ್ನಡದಲ್ಲಿ ವಿವರಣೆ ನೀಡಿದರೆ ಸ್ವಾಮಿಗಳ 'ಹಿಂದೂ ಧರ್ಮ' ದಲಿತರು ಉಳಿಯುವರು ಎಂಬುದರಲ್ಲಿ ಯ ಅನುಮಾನ ಇಲ್ಲ.

ಪೇಜಾವರ ಶ್ರೀಗಳ ಗೀತಾಪ್ರವಚನ ಸಾ ನೆರವೇರಲಿ. ದಲಿತರೆಲ್ಲ ಹಿಂದೂ ಧರ್ಮದಲ್ಲೇ ಉ ಎಂಬುದೇ ನಮ್ಮ ಹಾರೈಕೆ!

ಅಣಕ

■ ಎಚ್.ಎಲ್. ಕೇಶವಮೂ

ಯಾಕೋ ಏನೋ ಇದೇ ಸಮಯದಲ್ಲಿ ಘಟನೆ ನೆನಪಾಗುತ್ತಿದೆ.

ಪ್ರಪಂಚದ ಹಿರಿಯಣ್ಣ ಜಾರ್ಜ್ ಬುಷ್ ಸಾ ಬಾಗ್ದಾದ್‌ಗೆ ಹೋಗಿದ್ದರಲ್ಲ, ತಾನು ಹೇಗೆ ಜನರ ಸ್ವಾತಂತ್ರ್ಯ ಉಳಿಸಿದೆ ಅಂತ ಬಡಾಯಿ ಕೊಚ್ಚ ಪತ್ರಿಕಾಗೋಷ್ಠಿ ನಡೆಸಿದರು. ಅಮೆರಿಕ ಸೈನ್ಯದಿಂದ ನರಕ ಅನುಭವಿಸಿದ್ದ ಓರ್ವ ಪತ್ರಕರ್ತ 'ಇದು ವಿ ಮುತ್ತು' ಅಂತ ತನ್ನ ಎರಡೂ ಕಾಲಿನ ಬೂಟ ಬುಷ್‌ನತ್ತ ಎಸೆದನಲ್ಲಾ.. ಎಲ್ಲಾ ಕಡೆಯ ರಾಜಕಾರ ಒಂದೇ ವರಸೆಯವರು ಅಂತ ಕಾಣುತ್ತೆ. ಇದು ನಂಬರ್ ಬೂಟ್ಸು ನನಗೆ ಬಹಳ ದೊಡ್ಡವು ಅ ಚಟಾಕಿ ಹಾರಿಸಿದರೂ, ಮನಸ್ಸಿನಲ್ಲಿ ಅವಮಾನ, ಮನೆ ಮಾಡಿತ್ತಂತೆ. ಈಗ ನಂಬರ್ ಹತ್ತು ಸಾಕು ಬುಷ್ ಸಾಹೇಬ ಬೆಚ್ಚಿ ಬೀಳ್ತಾನಂತೆ!

ಅಲ್ಲಾ ಪೇಜಾವರ ಶ್ರೀಗಳೂ ಹೀಗೆ ಬೀಳಬೇಕಾದರೆ.... ನಂಬರ್ ಟೆನ್ನೇ ಪ್ರಯೋಗಿ ಅನ್ನೋದು ಕುಚೇಷ್ಟೆ ಮಾತಾಗಬಹುದಾ ಅಂ

* * * * *

ಸಿದ್ಧರಾಮಯ್ಯ ಚರಿತೆ

ಪಾಪ ಸಿದ್ಧರಾಮಯ್ಯ ಸ್ಥಿತಿ ಚಿಂತಾಜನಕ ಕಾಂಗ್ರೆಸ್ ಬಿಡಲ್ಲ ಅಂತಾರೆ.


ರಾತ್ರೋರಾತ್ರಿ ಮುಖ್ಯಮಂತ್ರಿ ಕಿವಿ ಕಚ್ಚಾರೆ

ಸಿಗುದಿದೆ ಅಂತ ಇವ್ರುದಿಗೇ ತೋರತರ" ಎಂದು ವಾಟಸ್ನ ನಕ್ಕ.
"ಾನ್ನಾವತ್ತು ಅಂಗೆ ತೋರದಿಲ್ಲ ಕಂಡ್ರ. ಆ ದಾಗುಟ್ಯಾರು ಈ ದಾಗುಟ್ಯಾರು ನನಿಗೂ ಗೊತ್ತು" ಎಂದ ಶೀರ.
"ದ್ಯಾವೇಗೌಡ್ರಿಗೂ ಕೊಟ್ಟಿದ್ರುಲವೆ" ಎಂದ ಉಗ್ರಿ.
"ದ್ಯಾವೇಗೌಡನಿಗೂ ಕೊಟ್ಟಿದ್ರು. ಯುಸ್ಸೆಂ ಕೃಷ್ಣನಿಗೆ ಫಾರಿನ್ ನಿವರ್ಸಿಟಿಯೋರು ಕೊಟ್ಟಿದ್ರು ಕಣೊ. ಆ ಪದವಿ ಯೋಗ್ತಿ ಗೊತ್ತಿದ್ರಿಂದ ಹಸಗಳ್ಳಿಲ್ಲವಂತೆ."
"ಕಿಷ್ಣ ಮದ್ದೂರಿಗೆ ಬಂದು ಮನೆ ಮನೆ ಸುತ್ತ ಕಾಯ್ತಿದ್ದನಂತಲ್ಲಾ?"
"ಊ ಕಣಾಕ್ಕ. ರಾಜಕಾರಣ ನನ್ನ ತಲಿಗೆ ಕದಿಯಾಗಬಾರದು ಅಂತ ನ ಮಗನಿಗೆ ತಿಕೀಟ್ ಕೊಡಿಸಿ ಓಟು ಕೇಳ್ತ ಅವ್ರುನೆ."
"ತಮ್ಮನ ಮಗಕ್ಯಾರ್ಲ?"
"ಇದೇನಕ್ಕ ಹಿಂಕೇಳ್ತಿ? ಜಿಲ್ಲಾ ಪಂಚಾತಿ ಮೆಂಬ್ರಾಗಿದ್ದ ಅಮ್ಯಾಲೆ ರಾತ್ರೋರಾತ್ರಿ ಜಿಲ್ಲಾ ಪಂಚಾತಿ ಅದ್ಯಕ್ಷನ್ನ ಮಾಡಿರಲಿಲ್ವೆ?"
"ಓ ಗುರುಚರಣ?"
"ಎಸ್. ಅವ್ರುನ ಪರ ಬಂದು ಮನಮನಿಗೂ ಹೋಯ್ತಾ ಅವ್ರುನೆ."
"ಗೆದ್ದನೇನ್ಲ?"
"ಇಲ್ಲಿವರಿಗೂ ಸಿಕ್ಕಿರೊ ಮಾಯಿತಿ ಪ್ರಕಾರ ಅವ್ರುನು 'ತರಡು ಪ್ಲೇಸು ಸೋತ್ರು ಏನೂ ಬೇಜಾರಿಲವಂತೆ."
"ಯಾಕೇ?"
"ಇನ್ನು ಹುಡುಗ. ಸೋತ್ರೆ ತಿರಗ ಗೆಲ್ತನೆ ಅಂತ ಸೊಲೊ ಕ್ಯಾನುವಾಸ್ ಅವುರೆ."
"ಕಿಷ್ಣನ ಮಕನೋಡಿ ಗೆಲ್ಸಿದ್ರ?"
"ಜನ ಅವುರಿವರ ಮಕ ನೋಡದ ಬುಟ್ಟವುರೀಗ. ಈಗೇನಿದ್ರು ಕೈ ತ್ತರೆ. ಅದ್ಕೆ ಏನ್ನ ಹೇಳಕ್ಕೆ ಬರದಿಲ್ಲ ಕಣಾಕ್ಕ."
"ಆ ಸಿದರಾಮಯ್ಯಾಕೆ ಅಂಗೆ ಜಡತಗಂಡು ಕುಂತವ್ರುನೆ?"
"ಅವ್ರುನಿಗೆ ಸೋನಿಯಾ ಗಾಂಧಿ ಕಡೆಯಿಂದ ಶಾಕ್ ಟ್ರೀಟ್‌ಮೆಂಟಾಗಿದ್ದಂತೆ ಸೋನಿಯಾ ಡೆಲ್ಲಿಗೆ ಕರಿಸಿಗಂಡು ನೀನೆ ಅಧ್ಯಕ್ಷ ಅಂದ್ಲಂತೆ. ಇವ್ರುನು ಅಂತ ಹೇಳಿ ಇಲ್ಲಿಗೆ ಬಂದನಂತೆ. ಅಮ್ಯಾಲೆ ದೇಶಪಾಂಡೆ ಮಾಡಿದಲಂತೆ."
"ಅದ್ಯಾಕಂಗೆ ಮಾಡಿದ್ಲು?"
"ಜಾಡಿ ಮಾತ ಕೇಳಿದ್ಲು, ಮಾಡಿದ್ಲು. ಆಗ್ಲಿಂದ ಬೇಜಾರಾಗಿ ಮನೆಲೆ ವ್ರುನಂತೆ."
"ಅಂಗೆ ಕುಂತಗಬಾರದು ಕಣೊ. ನೋಡು ಎಂ.ಪಿ. ಪ್ರಕಾಶ್ ಆಗ್ಲೆ ಗೆ ಹೊಂದಿಕಂಡವ್ರುನೆ? ಅಂಗೆ ಇವ್ರುನು ಹೊಂದಿಕಬೇಕಪ್ಪ."
"ಹೊಂದಿಕಂಡೋದ್ರೆ ಅವ್ರುನ್ನ ಸಿದ್ದರಾಮಯ್ಯ ಅಂತರೇನೊ? ಎಂ.ಪಿ. ಶ್" ಅಂತರೆ!"
" !?" ■

ಇದೇನ್ರಿ ಇದು, ಈ ಅವ್ಯವಹಾರ ಅಂದರೆ... 'ಸೌಜನ್ಯ ಭೇಟಿ' ಅಂತಾರೆ!
ಜನ ದಡ್ಡರು ಅನ್ನೋದು ಅವರ ನಂಬಿಕೆ!
ಅಸ್ನೋಟಿಕರ್, ಶಿವನಗೌಡ ನಾಯಕ, ವರ್ತೂರು ಪ್ರಕಾಶರ ಜೊತೆ ರೆ. ಸಿದ್ಧರಾಮಯ್ಯ ನಗುನಗುತ್ತಾ ಕೈಕುಲುಕ್ತಾರೆ.
ಇದೇನ್ರಿ ಈ ಚೆಲ್ಲಾಟ ಅಂದ್ರೆ ಸ್ನೇಹಿತರು ಮನೆಗೂ ಬರಬರ್‍ದಾ ಅಂತಾ ಆಗ್ತಾರೆ.
ಜನ ದಡ್ಡರು ಅನ್ನೋದು ಅವರ ನಂಬಿಕೆ!
ಕಾಂಗ್ರೆಸ್ ಪಕ್ಷದ ಚುನಾವಣಾ ಪ್ರಚಾರದ ಅಧ್ಯಕ್ಷರಾದರೂ ಪ್ರಚಾರಕ್ಕೆ ಗಲ್ಲ,
'ಯಾಕ್ರಿ ಹೋಗಲ್ಲ' ಅಂದರೆ 'ಸೋನಿಯಾ ಮೇಡಂ ಕರೀಲಿ' ಅಂತಾರೆ!
ಜನ ದಡ್ಡರು ಅನ್ನೋದು ಅವರ ನಂಬಿಕೆ!
ರಾಜಕೀಯ ಶಕ್ತಿ ಇಲ್ಲದೆ ಮುಂದೆ ಬರಲು ಸಾಧ್ಯ ಇಲ್ಲ, ಹಿಂದುಳಿದವರೆಲ್ಲ ಒಂದಾಗಬೇಕು ಅಂತಾರೆ.
ಹಂಗೇ ಆಗಲಿ ಅಂತ ಗೆಲ್ಲಿಸಿದರೆ ಅಹಿಂದ ಮರೀತಾರೆ ಕುರುಬರಿಗೆ ಹಾಕ್ತಾರೆ!
ಜನ ದಡ್ಡರು ಅನ್ನೋದು ಅವರ ನಂಬಿಕೆ!
ದ್ದರೆ ಅಹಿಂದ
ದ್ದರೆ ಹಿಡ್ಕೋ ನಂದ' ಅಂತಾರೆ.
ಜನ ದಡ್ಡರು ಅನ್ನೋದು ಅವರ ನಂಬಿಕೆ!
ಕಾಂಗ್ರೆಸ್ ಪಕ್ಷದ ಪರ ಪ್ರಚಾರಕ್ಕೆ ಹೋಗಲ್ಲ, ಅದು ಸೋತರೆ ತಾನಿಲ್ಲದ್ದಕ್ಕೆ ಯ್ತು ಅಂತ ಮೀಸೆ ಮೇಲೆ ಕೈಹಾಕಬಹುದು. ಅದಕ್ಕೇನು ಮಾಡಬೇಕು? ಸ್ ವಿರೋಧಿಗಳಿಗೆ ಸಹಾಯ ಮಾಡಬೇಕು. ಆಜನ್ಮ ವೈರಿ ಜೆಡಿಎಸ್‌ನ ಯೂ ನೋಡುವಂತಿಲ್ಲ ಉಳಿದದ್ದು ಯಾವುದು? ಭಾರತೀಯ ಜನತಾ ಆದರೆ ಅದಕ್ಕೆ ಬಹಿರಂಗವಾಗಿ ಸಹಾಯ ಮಾಡುವಂತಿಲ್ಲ! ಕೋಮು ಪಕ್ಷಕ್ಕೆ ಪೂರಕವಾಗಿ ನಿಂತರು ಈ ಪ್ರಗತಿಪರ ಚಿಂತಕರು ಎಂಬ ಿದ!
ಚಿಷ್ಠಾಗಿರ್‍ತೀನಿ ಅಂತಾರೆ. ಒಳೊಳಗೆ ಭಾಜಪಕ್ಕೆ ಬೆಂಬಲ ಕೊಡಿ ಅನ್ನುವ ನೀಡ್ತಾರೆ!
ಜನ ದಡ್ಡರು ಅನ್ನೋದು ಅವರ ನಂಬಿಕೆ!
ಹಿರವಾಗಿ ಭಾಜಪ ಸೇರಿ' ಅಂದರೆ 'ನಾನು ಪ್ರಗತಿಪರ. ಕೋಮುವಾದಿ ೀರುವುದಿಲ್ಲ' ಅಂತಾರೆ.
ಮುಂದೇನು ಮಾಡ್ತಾರೆ?
ಇನ್ನಾದರೂ ಪಕ್ಷ ಸೇರಿ ಲೋಕಸಭೆ ಚುನಾವಣೇಲಿ ಭಾಜಪದೊಂದಿಗೆ ಿನಿಕೆ ಮಾಡಿಕೊಳ್ಳಬಹುದು!
ಜನ ದಡ್ಡರು ಅನ್ನೋದು ಅವರ ನಂಬಿಕೆ!
ಸಿದ್ಧಾಂತ!
ವೈಚಾರಿಕ ನಿಲುವು! ■


ಟಿವಿ ಕಟಾಕ್ಷ

ಮರೆಯುವ ಮುನ್ನ




■ ಪಿ. ಲಂಕೇಶ್ ಮಾರ್ಚ್ 17, 1991

ನಮ್ಮಲ್ಲಿ ದೂರದರ್ಶನ (ಅಂದರೆ ಟಿವಿ) ಬಗ್ಗೆ ಜನಕ್ಕೆ ಭೀಕರ ಗೌರವ, ಅದರಲ್ಲಿ ಕಾಣಿಸಿಕೊಳ್ಳುವುದು ಲಕ್ಷಾಂತರ ಜನರೆದುರು ಪ್ರತ್ಯಕ್ಷವಾದಂತೆ ಅಥವಾ ತಾವೇ ಮರುಹುಟ್ಟು ಪಡೆದಂತೆ. ಹೀಗೆ ಅನೇಕ ಬುದ್ಧಿಜೀವಿಗಳು ಕಲಾವಿದರು ತಿಳಿದುಕೊಂಡಿರುವುದರಿಂದ ಈ ಟಿವಿ ಜನಕ್ಕೆ ದುರಹಂಕಾರ ಬಂದಿರುತ್ತದೆ. ಅಷ್ಟೇ ಅಲ್ಲ, ಲಂಚ, ಮೋಸ, ಜಂಬದಿಂದ ಕೊಬ್ಬಿ ಹೋಗಿರುತ್ತಾರೆ. ಅಲ್ಲಿಯ ಒಬ್ಬ ಪ್ರೊಡ್ಯೂಸರ್ ಒಮ್ಮೆ ನಾಟಕದ



ಕಾರಂತರ ಹತ್ತಿರ ಗಾಂಚಾಲಿ ಮಾಡಿದಾಗ ಕಾರಂತರು, "ನೀನು ಏನಂತ ಗೊತ್ತು, ತಲಹರಟೆ ಮಾಡಬೇಡ, ನನ್ನ ತಂಟೆಗೆ ಬರಬೇಡ" ಎಂದು ಗದರಿಸಿದ್ದಾಗಿ ಗೆಳೆಯರು ಹೇಳಿದರು. ಹಾಗೆಯೇ ಕೆಲವು ತಿಂಗಳ ಹಿಂದೆ ನನಗೊಂದು ಟೆಲಿಗ್ರಾಂ ಬಂತು. ಟಿವಿಯಿಂದ ಬಂದಿದ್ದ ಆ ಟೆಲಿಗ್ರಾಂನಲ್ಲಿ "ಖಂಡಿತ ಬನ್ನಿ-ಮಧ್ಯಾಹ್ನ ಹನ್ನೆರಡಕ್ಕೆ ಟಿವಿ ಕೇಂದ್ರದಲ್ಲಿ. ಸಂಚಯ ರೆಕಾರ್ಡಿಂಗ್ ಇದೆ" ಅಂತ ಇತ್ತು, ಅದು ಏಕೆ, ಎಂಥ ಸಂಚಯ, ಯಾರ ಜೊತೆಗೆ-ಎಂದೇನೂ ಇರಲಿಲ್ಲ, ಇದ್ದಿದ್ದರೂ ನಾನು ಹೋಗುತ್ತಿರಲಿಲ್ಲ, ಅದನ್ನು ಕಸದಬುಟ್ಟಿಗೆ ಎಸೆದು ಸುಮ್ಮನಾದೆ. ಮರುದಿನ ಫೋನ್ ಬಂತು. ಅಲ್ಲಿಂದ ಮಾತಾಡಿದ ಹೆಣ್ಣುಮಗಳು, "ತಕ್ಷಣ ಬರ್ತೀರಾ?" ಅಂದಳು; ವಿವರಿಸಿದಳು. "ನಿಮಗೇನಾದ್ರೂ ಬುದ್ಧಿ ಇದೆ ಏನ್ರೀ? ಈ ದೇಶದ ಪ್ರತಿಯೊಬ್ಬರೂ ನಿಮ್ಮ ಟಿವಿಯಲ್ಲಿ ಕಾಣಿಸಿಕೊಳ್ಳಲು ಕಾದು ಕೂರಿರ್ತಾರೆ ಅಂತ ತಿಳಿದಿದ್ದೀರಾ? ನನಗೆ ಬೇರೆ ಕೆಲಸವಿದೆ. ಅಲ್ಲದೆ ನಿಮ್ಮ ತರಲೆಯೆಲ್ಲ ನನಗೆ ಇಷ್ಟವಾಗೋಲ್ಲ" ಎಂದು ಆಕೆ ಮಾತಾಡುವ ಮುನ್ನ ಫೋನ್ ಇಟ್ಟೆ.

ಬರೆಯಲು ಅಂಗಸಾಧನೆ



ಇವತ್ತಿಗೂ ಕಾದಂಬರಿ ಎಂದರೆ ಕತೆ... ಕಳೆದ ನಲವತ್ತು ವರ್ಷದಿಂದ ಈ ಕಾದಂಬರಿ ಪ್ರಕಾರದಿಂದ ಕತೆಯನ್ನು ಕಿತ್ತು ಹಾಕಲು ಅನೇಕರು ಪ್ರಯತ್ನಿಸಿದ್ದಾರೆ. ಜಾಯ್ಸ್ ಏನು ಮಾಡಿದ ಎಂಬುದು ಜಗತ್‌ಪ್ರಸಿದ್ಧವಾಗಿದೆ. ತನ್ನ ಬೃಹತ್ 'ಯೂಲಿಸಿಸ್'ನಲ್ಲಿ ಆಧುನಿಕ ಯೂಲಿಸಿಸ್ ಸೃಷ್ಟಿಸಲು ಯತ್ನಿಸಿ ವಾಕ್ಯ, ಪದ್ಯ, ಕತೆಯ ಕಲ್ಪನೆಯನ್ನೇ ಬದಲಿಸಲು ಯತ್ನಿಸಿದ; ಇದರ ಪ್ರೂಫ್ ಓದುವವರಿಗೆ ತಲೆನೋವು ಮಾತ್ರ ಆಗಿ ಉಳಿದಿದೆ; ಸಾಹಿತ್ಯದ ವಿದ್ಯಾರ್ಥಿಗಳು ಕೂಡ ಓದುವುದಿಲ್ಲ, ಸದರಿ ಜಾಯ್ಸ್‌ನ 'ಡಬ್ಲಿನರ್ಸ್' ಎಂಬ ಪುಸ್ತಕ ಮಾತ್ರ ಹಳೇ ಶೈಲಿಯಲ್ಲಿ ಕತೆ ಹೇಳುತ್ತ ಅಪೂರ್ವ ಕೃತಿಯಾಗಿದೆ. ಈ ಕಥಾಸಂಕಲನದ "ದಿ ಡೆಡ್" ನೀಳ್ಗತೆ ನಮ್ಮಂಥವರ ವ್ಯಕ್ತಿತ್ವದ ಭಾಗವಾಯಿತು. ಜಾಯ್ಸ್ ತನ್ನ 'ಯೂಲಿಸಿಸ್'ನಲ್ಲಿ ಮಾಡಿದಂತೆಯೇ ಅನೇಕ ಫ್ರೆಂಚ್ ಕಾದಂಬರಿಕಾರರು, ಇಂಗ್ಲಿಷ್‌ನ ವರ್ಜಿನಿಯಾ ವುಲ್ಫ್ ಮುಂತಾದವರು ಕತೆಯನ್ನು ಕಿತ್ತುಹಾಕಲು ಯತ್ನಿಸಿದರು. ಅವರಿಂದಲೂ ಸಾಧ್ಯವಾಗಲಿಲ್ಲ, ಕವನ, ನಾಟಕಕ್ಕಿಲ್ಲದ ಸವಲತ್ತು ಕಾದಂಬರಿಗಿದೆ-ಮನುಷ್ಯ ಇವತ್ತಿಗೂ ಕಣ್ಣು ಬಿಟ್ಟುಕೊಂಡು ಅಚ್ಚರಿಯಿಂದ ಕೇಳುವುದು ಕತೆಯನ್ನು.

ಕಾದಂಬರಿ ಕತೆಗಿಂತ ಹೆಚ್ಚು-ಇಲ್ಲಿ ಪುಟ್ಟ ನಾಟಕ, ಪದ್ಯ, ವಗಟು, ಆಟಗಳೆಲ್ಲ ಬರಲು ಸಾಧ್ಯವಿದೆ. ಹೋಮರ್, ಮಿಲ್ಟನ್ನರ ಮಹಾಕಾವ್ಯದಲ್ಲಿಲ್ಲದ ತುರ್ತು, ರಂಜನೆ, ವರದಿಯ ಮೋಜು ಇವೆಲ್ಲ ಇವೆ. ಸಣ್ಣಕತೆ ಕಾದಂಬರಿಯ ಉಗುರು ಮಾತ್ರ ಇದ್ದಂತೆ.

ಒಂದು ಕಾದಂಬರಿ ಬರೆಯಲೆತ್ನಿಸುತ್ತ ನಿತ್ಯದ ಮಾತುಕತೆ, ಘಟನೆ, ಸುದ್ದಿ ಎಲ್ಲದರಿಂದ ನಾನು ಓದಿದ ಬರೆದ ಎಲ್ಲದರಿಂದ ಸ್ಫೂರ್ತಿ ಪಡೆಯುತ್ತ ನನ್ನ ಸಮಕಾಲೀನರ ಒಂದೆರಡು ಕೃತಿ ಓದಿದೆ. 'ಸಂಸ್ಕಾರ' ಓದಿ ಹದಿನೈದು ವರ್ಷ ಆಗಿತ್ತು, 'ಭಾರತೀಪುರ' ಓದಿ ಹತ್ತು ವರ್ಷವಾಗಿತ್ತು, 'ಚೋಮನ ದುಡಿ'ಯನ್ನು ಮೊನ್ನೆ ಅವಸರದಲ್ಲಿ ಎರಡನೇ ಸಲ ಓದಿದ್ದೆ. ಈಗ ಸುಮ್ಮನೇ ತಿರುವಿ ಹಾಕುತ್ತಾ ಹೋದೆ-ಏನಾಯಿತು, ಏನೆನ್ನಿಸಿತು ಎಂಬುದು ಅಷ್ಟು ಮುಖ್ಯವಲ್ಲ. ಈಚೆಗೆ 'ಪುಸ್ತಕ ವಿಮರ್ಶೆ' ವಿಭಾಗಕ್ಕೆಂದು ಓದುವುದು ಈ ಕಾರಣಕ್ಕಾಗಿಯೇ.

'ಸಂಸ್ಕಾರ'ದ ಮಟ್ಟಕ್ಕೆ ಅನಂತಮೂರ್ತಿ ಮತ್ತೆ ಹೋಗುವುದಿಲ್ಲ, ಅವರ 'ಭಾರತೀಪುರ' ಕಾದಂಬರಿಯ ದೌರ್ಬಲ್ಯ, ಜಡತ್ವದ ಬೀಜಗಳು ಸಂಸ್ಕಾರದಲ್ಲಿಯೇ ಇವೆ. ಹಣ ಹೂಳುವುದಕ್ಕಾಗಿ ಪಡುವ ಕಷ್ಟಗಳು 'ಸಂಸ್ಕಾರ'ದಲ್ಲಿ; ಇವತ್ತು ಕಟ್ಟಾ ಬ್ರಾಹ್ಮಣರಿಗೆ ಕೂಡ ಇದೊಂದು ಸಮಸ್ಯೆಯಾಗಿ ಉಳಿದಿಲ್ಲ. ಆದರೆ 'ಸಂಸ್ಕಾರ' ಇದೆಲ್ಲದಕ್ಕಿಂತ ಹೆಚ್ಚಿನದನ್ನು ಹೇಳುತ್ತದೆ-ಸತ್ತುಹೋದ ಸಾಯುತ್ತಿರುವ, ಪ್ರತಿಭಟಿಸುತ್ತಿರುವ ಬಗ್ಗೆ ಈ ಕಾದಂಬರಿ; ಪ್ರಾಣೇಶಾಚಾರ್ಯರು ಜೀವಂತವಾಗಿ 'ಶಾಕ್' ಅನುಭವಿಸುವ ಬಗ್ಗೆ ಇದು. ಆದರೆ ಈ ಎರಡನೆ ಸ್ತರ ಇಲ್ಲದ್ದರಿಂದಲೇ 'ಭಾರತೀಪುರ' ಹೇಳಿಕೆ, ಸಿದ್ಧಾಂತಗಳಲ್ಲಿ ಒದ್ದಾಡುತ್ತದೆ. 'ಕ್ಲಿಪ್ ಜಾಯಿಂಟ್' ತರಹದ ಇದು ಉದ್ದೇಶಪೂರ್ವಕ, ಭಾರವಾದ ಬರವಣಿಗೆ.

ಚೆಸ್ ಆಡುವ ಹುಡುಗರು (ಕ್ಯಾಸ್ಪರೊವ್, ಬಾಬಿ ಫಿಶರ್ ತರಹದವರು) ದೈಹಿಕ ಅಂಗಸಾಧನೆ ಮಾಡುತ್ತಾರಂತೆ; ನನಗೆ ಅಚ್ಚರಿಯಾಗಿ ನಮ್ಮ ಡಾ. ಶ್ರೀನಿವಾಸಗೌಡರನ್ನು "ಹೌದೆ? ಇವರ ಈ ಬುದ್ಧಿಯ ಆಟಕ್ಕೆ ವ್ಯಾಯಾಮ ಬೇಕೆ?" ಅಂದೆ. ಬೇಕೇಬೇಕು" ಅಂದರು. ದೇಹವೇ ನಮ್ಮ ಮಾನಸಿಕ, ದೈಹಿಕ, ಆತ್ಮದ ಚೈತನ್ಯಕ್ಕೆ ಆಧಾರ. ಒಂದು ಕತೆ, ಕಾದಂಬರಿ ಬರೆಯುವುದು ಚೆಸ್ ನಂತೆಯೇ ಪ್ರಾಣವನ್ನೆಲ್ಲ ಹೀರಿಕೊಳ್ಳುತ್ತದೆ. ಮುತ್ತಿದ್ದಿತನಕ್ಕೆ, ಸಾಮಾಜಿಕ ನಯವಿನಯಗಳಿಗೆ ಶಕ್ತಿಯೇ ಉಳಿದಿರುವುದಿಲ್ಲ; ಆದ್ದರಿಂದಲೇ ಎಲ್ಲೋ ಕೆಲವರು ಮಾತ್ರ (ಸಾಫೋಕ್ಲಿಸ್, ಪಿಕಾಸೋ ತರಹದವರು) ಮುಪ್ಪಿನಲ್ಲೂ ಕ್ರಿಯಾಶಕ್ತಿ ಉಳಿಸಿಕೊಂಡಿರುತ್ತಾರೆ. ನಮ್ಮಂಥವರು ಒಂದು 'ಛಾನ್ಸ್' ತೆಗೆದುಕೊಳ್ಳಬೇಕಾಗುತ್ತದೆ. ಆಯುಸ್ಸಿನ ವರ್ಷಗಳು, ಜೀವನದ ಕಷ್ಟಗಳ ನಡುವೆಯೂ ಬರೆಯುತ್ತ ಹಲ್ಲುಕಚ್ಚಿಕೊಂಡು ಜೀವನಕ್ಕೆ ಕಟ್ಟಿಹಾಕಿ ಬರೆಯುತ್ತ ಮಾಂತ್ರಿಕತೆ ಉಳಿಸಿಕೊಳ್ಳಬೇಕಾಗುತ್ತದೆ.

ಮೊನ್ನೆ ಒಟ್ಟಿಗೇ ಹತ್ತುಪುಟದಷ್ಟು ಕಾದಂಬರಿ ಬರೆದು ಕೂತಿದ್ದೆ. ಯಾರೋ ಬಾಗಿಲು ತೆರೆದುಕೊಂಡು ಬಂದರು. ಮಾತಾಡಿಸಿದರು. ನನಗೆ ಹಲವು ನಿಮಿಷ ಏನಾಗುತ್ತಿದೆ ಎಂಬುದೇ ಗೊತ್ತಿರಲಿಲ್ಲ, ಇದರಿಂದಾಗಿಯೇ ಅನೇಕ ಲೇಖಕರನ್ನು ಲೌಕಿಕರು 'ತಿಕ್ಕಲರು' ಅನ್ನುವುದು. ■

ಬುದ್ಧನೆಡೆಗೆ ನಡಿಗೆ

■ ಸಂತೋಷ ಗುಡ್ಡಿಯಂಗಡಿ

ನನ್ನವರೆಲ್ಲ ನಡೆಯುತ್ತಿದ್ದಾರೆ
ಬಿದ್ದಲ್ಲಿಂದ ಎದ್ದು
ಬೋಧಿಸತ್ವವ ನೆನೆದು
ಸಿದ್ಧ ಅರ್ಥವನರಿತು
ಸಿದ್ಧಾರ್ಥನೆಡೆಗೆ

ಒಬ್ಬೊಬ್ಬರೆದ್ದೆದ್ದು
ಒಕ್ಕಲುತನಕ್ಕೊದ್ದು
ಗುಡಿಸಲುಗಳೂ ಸಿಡಿದೆದ್ದು
ನೆರೆಯೇ ನೆರೆದರು ದಂಡು ದಂಡಾಗಿ
ಧುಮುಗುಡುವ ದಂಡಿಗೆ
ನಡುಗಿತ್ತು ಧರೆಯೆಲ್ಲ
ಆದರಿತ್ತು ದೇವಮಾನವರ ಗುಂಡಿಗೆ

ಹೆಜ್ಜೆಹೆಜ್ಜೆಯೂ ದಂಡಿಗೆ
ಯುದ್ಧ ಗೆದ್ದಷ್ಟೇ ಸಂಭ್ರಮ
ಹೊಳೆ ಹೊಳೆವ ಥಳಗುಡುವ
ಬೆವರಿನಾ ಮುಕುಟದಲಿ
ಬೋಧಿಸತ್ವವ ದಿವ್ಯಪ್ರಭೆಯ ಫಲವ

ಜರೆದು ಜೀತದ ಬದುಕ
ಹೊಸಕಿ ಜಾತಿಯ ಕೊರಳ
ಹಿಂದಿನೆಲ್ಲವಾ ತೊರೆದು
ನಡೆದಿದ್ದಾರೆ ನನ್ನವರು
ಬಿದ್ದಲ್ಲಿಂದ ಎದ್ದು ಬುದ್ಧನೆಡೆಗೆ

ಬಿದ್ದಿದ್ದಲ್ಲಿ ಭೀಕರ ಕುರುಹುಗಳು
ಜಗದ ಯಾವ ಪವಿತ್ರ ನದಿಯೂ
ತೊಳೆಯಲಾಗದ ಕರಾಳ ಕಲೆಗಳು!



ಚಾರುಮತಿಯ ಪುಟ್ಟ ಅಂಗೈ ಮೇಲೆ ಆರ್ಥಿಕ ಕುಸಿತದ ಗಾಯ




ಬಿಡಿ ಚಿತ್ರಗಳು

• ಈಶ

ನಾಲ್ಕೂವರೆ ವರ್ಷದ ನನ್ನ ಪುಟ್ಟ ಮಗಳು ಈ ಚಾರುಮತಿ. ಬನಶಂಕರಿಯ ಶಾಲೆಯೊಂದರಲ್ಲಿ ಮಾಂಟೆಸ್ಸರಿ ಕಲಿಯಲು ನಿತ್ಯ ನಾಲ್ಕು ಕಿಲೋಮೀಟರ್ ಅಂತರದ ಉತ್ತರಹಳ್ಳಿಯಿಂದ ಹೋಗಿಬರುತ್ತಾಳೆ. ಮೊನ್ನೆ ಶಾಲೆಗೆ ಹೋದವಳು ಮನೆಗೆ ಅಳುತ್ತಾ ಬಂದವಳೆ "ವ್ಯಾನ್‌ನಲ್ಲಿ ಅನೀಶ್ ಕಚ್‌ಬಿಟ್ಟಾ" ಅಂತಾ ತನ್ನಮ್ಮನಿಗೆ ಅಂಗೈ ತೋರಿಸಿದ್ದಾಳೆ. ಸಂಜೆ ಮನೆಯಲ್ಲಿ ನಾನವಳ ಪುಟ್ಟ ಅಂಗೈ ನೋಡಿದಾಗ ಅಲ್ಲೆರಡು ಪುಟ್ಟ ಹಲ್ಲಿನ ಗುರುತು ಸ್ಪಷ್ಟವಾಗಿ ಕಂಡವು. ಮಕ್ಕಳ ಗದ್ದಲದಲ್ಲಿ ಏನೋ ಸಣ್ಣ ಪ್ರಮಾದವಾಗಿದೆ ಅಂದುಕೊಂಡ ನಾನು ಯಾವುದಕ್ಕೂ ಇರಲಿ ಎಂದು ವ್ಯಾನ್ ಡ್ರೈವರ್ ಜತೆ ಮಾತಾಡುವಂತೆ ಸೂಚಿಸಿದೆ. ಜೊತೆಯಲ್ಲಿ ಆ ಡ್ರೈವರ್ ಇತ್ತೀಚೆಗೆ ಚಾರುಳನ್ನು ಶಾಲೆಯಿಂದ ಮನೆಗೆ ವಾಪಸ್ ಕರೆತಂದು ಬಿಡುವುದು ಒಂದು ಗಂಟೆ ತಡವೂ ಆಗುತ್ತಿತ್ತು. ಈ ಗದ್ದಲ ಯಾಕೆ, ತಡ ಯಾಕೆಂದು ಎಲ್ಲಾ ವಿಚಾರಿಸಿಕೊಂಡಾಗ ನನಗರ್ಥವಾಗಿದ್ದು ಜಾಗತಿಕ ಆರ್ಥಿಕ ಕುಸಿತದ ಪೆಟ್ಟೇ ಚಾರುಮತಿಯ ಅಂಗೈ ಮೇಲಿನ ಗಾಯವಾಗಿ ಮೂಡಿದೆ ಎಂಬುದು.

ಶಾಲಾ ಮಕ್ಕಳನ್ನು ಪಿಕ್‌ಅಪ್ ಅಂಡ್ ಡ್ರಾಪ್ ಮಾಡುವುದನ್ನೇ ಉದ್ಯೋಗ ಮಾಡಿಕೊಂಡಿರುವ ಆ ವ್ಯಾನ್ ಡ್ರೈವರ್ ಮೂರು ಮಾರುತಿ ವ್ಯಾನೂ ಜೊತೆಗೆ ಶಿಫ್ಟ್ ಮೇಲೆ ಕೆಲಸ ಮಾಡಲು ನಾಲ್ಕೈದು ಚಾಲಕರನ್ನು ನೇಮಿಸಿಕೊಂಡಿದ್ದ. ವ್ಯಾನ್ ಖರೀದಿಗೆ ಬ್ಯಾಂಕ್ ಸಾಲವನ್ನು ಮಾಡಿಕೊಂಡಿದ್ದ. ಆದರೀಗ ಆರ್ಥಿಕ ಬಿಕ್ಕಟ್ಟು ಬಂದು ಅಪ್ಪಳಿಸಿವೆಯಲ್ಲ ಜನ ಹಣ ಖರ್ಚು ಮಾಡಲು ಹೆದರುತ್ತಿದ್ದಾರೆ ಅಥವಾ ಶಕ್ತಿ ಕಳೆದುಕೊಂಡಿದ್ದಾರೆ. ಹಾಗಾಗಿ ತಮ್ಮ ಮಕ್ಕಳನ್ನು ಮೊದಲು ವ್ಯಾನ್‌ನಲ್ಲಿ ಶಾಲೆಗೆ ಕಳುಹಿಸುತ್ತಿದ್ದವರು ಈಗ ಸುಮ್ಮನೆ ನಾನೂರು ರೂಪಾಯಿ ಖರ್ಚೇಕೆಂದು ತಾವೇ ಬಿಟ್ಟು ಬರುವುದು, ಬಿಟಿಎಸ್ ಬಸ್‌ನಲ್ಲಿ ಕಳುಹಿಸುವುದು... ಹೀಗೆ ಬೇರೆ ದಾರಿ ಹುಡುಕಿಕೊಳ್ಳುತ್ತಿದ್ದಾರೆ. ಇದರಿಂದ ವ್ಯಾನ್‌ನವನಿಗೆ ಆದಾಯ ಕಮ್ಮಿಯಾಗಿ ಅವನೀಗ ಡ್ರೈವರ್‌ಗಳನ್ನು ಕೆಲಸ ಬಿಡಿಸಿ ಈಗ ಒಂದೇ ವ್ಯಾನ್ ಉಳಿಸಿಕೊಂಡಿದ್ದಾನೆ. ಒಂದು ವ್ಯಾನ್‌ನಲ್ಲಿ ಮೊದಲು ಎಂಟತ್ತು ಮಕ್ಕಳನ್ನು ಕೂರಿಸುತ್ತಿದ್ದವನು ಈಗ ಹದಿನೈದರ ತನಕ ತುರುಕಿ ಒಂದೇ ಟ್ರಿಪ್ ಹೊಡೆಯುತ್ತಿದ್ದಾನೆ. ಸಹಜವಾಗೆ ಇದರಿಂದ ಮಕ್ಕಳಿಗೆ ಇಕ್ಕಟ್ಟು, ಉಸಿರು ಕಟ್ಟುವಿಕೆ ಅನಿಸಿ ರಂಪಾಟ ಮಾಡುತ್ತವೆ. ಅಂತಹ ಒಂದು ಗದ್ದಲದಲ್ಲೇ ಅನೀಶ್ ಚಾರುಳ ಅಂಗೈ ಕಚ್ಚಿಬಿಟ್ಟಿದ್ದ. ಅಷ್ಟೇ ಅಲ್ಲ, ಡ್ರೈವರ್ ಎಲ್ಲಾ ರೂಟಿನ ಮಕ್ಕಳನ್ನು ಒಂದೇ ಬಾರಿ ಕರೆದೊಯ್ಯುವುದರಿಂದ ಊರೆಲ್ಲಾ ಸುತ್ತಿಕೊಂಡು ಚಾರು ಮನೆ ತಲುಪುವಷ್ಟರಲ್ಲಿ ಮೊದಲಿಗಿಂತ ಒಂದು ಗಂಟೆ ಜಾಸ್ತಿ ವ್ಯಾನ್‌ನೊಳಗೆ ಕಳೆಯಬೇಕಾಗಿ ಬಂದಿದೆ.

ಈಗಿನ ಆರ್ಥಿಕ ಕುಸಿತದಿಂದ ಯಾರೋ ಕೆಲಸ ಕಳೆದುಕೊಂಡರು. ಇನ್ಯಾರದೋ ಸಂಬಳ ಕಟ್ ಅಂತೆ... ಎಂದೆಲ್ಲಾ ಕೇಳಿಸಿಕೊಳ್ಳುತ್ತಿದ್ದೆ. ಈ crisis ಈಗ ನನ್ನ ಮಗಳ ಅಂಗೈಗೆ ಗಾಯ ಮಾಡಿದ್ದೂ ಅಲ್ಲದೆ ನಿತ್ಯಜೀವನದ ಒಂದು ಗಂಟೆಯನ್ನೂ ಕಸಿದುಕೊಳ್ಳುತ್ತಿದೆ. ■



ಪೇಜಾವರರ ಸಂಕುಚಿತ ಬುದ್ಧಿಗೆ ಪುರಾವೆಗಳು

ಪೇಜಾವರಶ್ರೀಗಳ ದ್ವಂದ್ವ ವ್ಯಕ್ತಿತ್ವ ಡಿಸೆಂಬರ್ 6ರ ಸಹಪಂಕ್ತಿಭೋಜನ ತಪ್ಪಿಸಿಕೊಳ್ಳುವಲ್ಲಿ ಬಹಿರಂಗಗೊಂಡಂತೆ ಇನ್ನೂ ಹಲವಾರು ಸಂದರ್ಭಗಳಲ್ಲೂ ಬಯಲಾಗಿದೆ. ಕಳೆದ ತಿಂಗಳು ಕರಾವಳಿಯ ಒಬ್ಬ ಪ್ರಸಿದ್ಧ ಯಕ್ಷಗಾನ ಕಲಾವಿದರು ಸಂದರ್ಶನವೊಂದರಲ್ಲಿ ಈ ಬಗ್ಗೆ ಇನ್ನೊಂದು ಪ್ರಸಂಗ ಬಯಲುಗೊಳಿಸಿದ್ದಾರೆ. ಆ ಕಲಾವಿದರು ಪರಶುರಾಮನ ಪಾತ್ರ ವಹಿಸುವಾಗ ಹಣೆಗೆ ಶೈವರಂತೆ ವಿಭೂತಿ ಹಚ್ಚಿಕೊಳ್ಳುತ್ತಿದ್ದುದನ್ನು ಕಂಡು ಪೇಜಾವರಶ್ರೀಗಳು ಅವರನ್ನು ಕರೆದು ಹೇಳಿದರಂತೆ "ಪರಶುರಾಮ ವಿಷ್ಣುವಿನ ಅವತಾರ ಹಾಗಾಗಿ ಆ ಪಾತ್ರದಲ್ಲಿ ನೀನು ಹಣೆಗೆ ವೈಷ್ಣವರ ಊರ್ಧ್ವನಾಮವನ್ನೇ ಧರಿಸಬೇಕು" ಎಂದು ಆದೇಶಿಸಿದರಂತೆ. ಅದಕ್ಕೆ ಆ ಕಲಾವಿದರು ಉತ್ತರಿಸಿದರಂತೆ "ಪುರಾಣಗಳ ಪ್ರಕಾರ ಪರಶುರಾಮನ ಆರಾಧ್ಯ ದೈವ ಶಿವನಾಗಿದ್ದ. ಭಕ್ತರು ಯಾವಾಗಲೂ ತಾವು ಆರಾಧಿಸುವ ದೇವರ ನಾಮವನ್ನೇ ಹಚ್ಚಿಕೊಳ್ಳುವುದು. ಮೇಲಾಗಿ ಪರಶುರಾಮ ಪಶ್ಚಿಮ ಕರಾವಳಿಯನ್ನು ಸೃಷ್ಟಿಸಿದ ನಂತರ ಇಲ್ಲಿಯ ಜನರಿಗೆ ಆದೇಶಿಸಿದ್ದ: 'ನನ್ನನ್ನು ನೀವು ಯಾರೂ ಪೂಜಿಸಬಾರದು. ಕೇವಲ ನನ್ನ ಆರಾಧ್ಯ ದೈವವಾದ ಶಿವನನ್ನು ಮಾತ್ರ ಪೂಜಿಸಬೇಕು' ಎಂದು. ಇದೇ ಕಾರಣಕ್ಕೆ ಕರಾವಳಿಯನ್ನು ಪರಶುರಾಮ ಸೃಷ್ಟಿಸಿದರೂ ಆ ಸೃಷ್ಟಿಕರ್ತನ ಒಂದೇ ಒಂದು ದೇವಸ್ಥಾನ ಇಲ್ಲ, ಎಲ್ಲಿಯೂ ಇಲ್ಲ. ಹಳ್ಳಿ-ಹಳ್ಳಿಗಳಲ್ಲೂ ಇರುವುದು ಶಿವಾಲಯ. ಅಷ್ಟೇ ಅಲ್ಲ, ರಾಮನೂ ವಿಷ್ಣುವಿನ ಅವತಾರವಾದರೂ ಅವನು ರಾವಣನ ಮೇಲೆ ಯುದ್ಧಕ್ಕೆ ಹೋಗುವ ಮೊದಲು ರಾಮೇಶ್ವರದಲ್ಲಿ ಅರ್ಚಿಸುವಾಗಲೂ ಶೈವರಂತೆ ವಿಭೂತಿ ಹಚ್ಚಿಕೊಂಡಿರುವಂತೆ ಪುರಾತನ ಶಿಲ್ಪಗಳಲ್ಲಿ ಚಿತ್ರಿಸಲಾಗಿದೆ" ಎಂದು ಆ ಕಲಾವಿದರು ವಾದಿಸಿದರಂತೆ. ಇದರಿಂದ ಕ್ರೋಧಗೊಂಡ ಪೇಜಾವರಶ್ರೀಗಳು "ನೀನು ನನಗೆ ಪುರಾಣ, ಧರ್ಮ ಕಲಿಸುವುದು ಬೇಡ. ನಾನು ಹೇಳಿದಷ್ಟು ಮಾಡು ಹೋಗು" ಎಂದರಂತೆ.

ಇನ್ನೊಂದು ಉದಾಹರಣೆಯೆಂದರೆ 'ನಾಗಶ್ರೀ' ಎಂಬ ಯಕ್ಷಗಾನ ಕರಾವಳಿಯಲ್ಲೆಲ್ಲಾ ತುಂಬಾ ಜನಪ್ರಿಯವಾಗಿತ್ತು. ಆದರೆ ನಾಗಶ್ರೀ ಕಥೆಯಲ್ಲೂ ತುಳಸಿಯ ಕಥೆಯಂತೆ ಕೃಷ್ಣನನ್ನು ಖಳನಾಯಕನಂತೆ ಚಿತ್ರಿಸಲಾಗಿದೆ. ಪತಿವ್ರತೆಯಾದ ನಾಗಶ್ರೀಯ ಮೇಲೆ ಕಣ್ಣಿಟ್ಟಿದ್ದ ರಸಿಕ ಕೃಷ್ಣ ಅವಳ ಗಂಡನನ್ನು ಕೊಂದ. ಇದರಿಂದ ಕ್ರೋಧಿತಳಾದ ನಾಗಶ್ರೀ ಹಾವಿನ ರೂಪ ತಳೆದು ಸೇಡು ತೀರಿಸಲು ಕೃಷ್ಣನ ಬೆನ್ನು ಹತ್ತಿದಳಂತೆ. ಕೃಷ್ಣನು ಹೆದರಿ ಓಡಿ ಉಡುಪಿಯ ಸುಬ್ರಹ್ಮಣ್ಯ ದೇವಸ್ಥಾನ ಹೊಕ್ಕು ಗರ್ಭಗುಡಿಯಲ್ಲಿ ಸುಬ್ರಹ್ಮಣ್ಯ ದೇವರ ಮೂರ್ತಿಯೊಳಗೆ ಸೇರಿಕೊಂಡನಂತೆ. ನಾಗಶ್ರೀ ದಿವ್ಯದೃಷ್ಟಿಯಿಂದ ಆ ಕಲ್ಲಿನ ಮೂರ್ತಿಗೆ ಕಚ್ಚಿ ಹರಿಸಿದ ವಿಷದಿಂದಾಗಿ ಉಡುಪಿಯ ಕೃಷ್ಣನ ಮೂರ್ತಿ ಕಪ್ಪಾಗಿ ಇಂದಿಗೂ ಹಾಗೆ ಇದೆ ಎಂಬುದೇ ಆ 'ನಾಗಶ್ರೀ'ಯ ಕಥೆ. ಇಂತಹ ಕಥೆಯ ಯಕ್ಷಗಾನ ಆಡಬಾರದೆಂದು ಉಡುಪಿ ಮಠಾಧೀಶರು ಆದೇಶಿಸಿದ್ದರಿಂದ ಆ ಪ್ರಸಂಗದ ಯಕ್ಷಗಾನ ತುಂಬಾ ಕಡಿಮೆಯಾಯಿತೆನ್ನಲಾಗುತ್ತದೆ. ಜಾನಪದ ಕಲೆಗಳ ಪಾತ್ರದಲ್ಲೂ ಜಾತಿ-ಉಪಜಾತಿ ಹುಡುಕುತ್ತಾ ನಾವೆಲ್ಲಾ ಹಿಂದೂಗಳು, ನಾವೆಲ್ಲಾ ಒಂದು ಎಂದು ಪೇಜಾವರ ಶ್ರೀಗಳು ಹಿಂದೂ ಜನರೆಲ್ಲಾ ಒಂದು ಎಂದು ಭಾವಿಸುವುದು ಒತ್ತಟ್ಟಿಗಿರಲಿ ಹಿಂದೂ ದೇವರೆಲ್ಲ ಒಂದು ಎಂದು ಭಾವಿಸಲಾರದಷ್ಟು ಸಂಕುಚಿತ ಬುದ್ಧಿ ಹೊಂದಿರುವಂತಿದೆ.

ಆದರೂ ಅವರು ತಿಳಿಯದೆಯೇ ಒಂದು ಉಪಕಾರ ಸಮಾಜಕ್ಕೆ ಮಾಡಿದ್ದಾರೆ. ಈಚೆಗೆ ಬೌದ್ಧ ಧರ್ಮಕ್ಕೆ ಹಿಂದೂಗಳ ಮತಾಂತರದ ವಿರುದ್ಧ ವಿವಾದಾತ್ಮಕ ಹೇಳಿಕೆ ಅವರು ಕೊಟ್ಟ ಮೇಲೆ ನಡೆದ ಚರ್ಚೆಯಲ್ಲಿ ಸ್ವಾಮಿ ವಿವೇಕಾನಂದರು ವಿಶ್ವದಲ್ಲೆಲ್ಲಾ ಹಿಂದೂ ಧರ್ಮದ ಪತಾಕೆ ಹಾರಿಸಿದ್ದರೂ, ಮೂಲದಲ್ಲಿ ಅವರಿಗೆ ಹಿಂದೂ ಧರ್ಮಕ್ಕಿಂತ ಬೌದ್ಧ ಧರ್ಮದ ಮೇಲೆ ಹೆಚ್ಚು ಒಲವಿತ್ತು ಎಂಬ ಅಂಶ ಬಹಿರಂಗಗೊಂಡಿದೆ. ಇದರಿಂದಾಗಿ ಜನರಲ್ಲಿ ಬೌದ್ಧ ಧರ್ಮದ ಬಗ್ಗೆ ಆಸಕ್ತಿ ಹೆಚ್ಚಾಗಿದೆ ಎನ್ನುವುದಕ್ಕೆ ಇತ್ತೀಚೆಗೆ ಬೌದ್ಧ ಧರ್ಮದ ಪುಸ್ತಕಗಳಿಗೆ ಒಮ್ಮೆಲೇ ಹೆಚ್ಚಿದ ಬೇಡಿಕೆಯೇ ಸಾಕ್ಷಿ

- ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು.

ಹೊಗಳಿಕೆ

ಜನತೆಯು ದೌರ್ಜನ್ಯಕ್ಕೆ, ಗುರಿಯಾದಾಗ, ದಬ್ಬಾಳಿಕೆಯಿಂದ ತತ್ತರಿಸಿದಾಗ ಅವರ ಪರ ದನಿಯೆತ್ತುವ ಜವಾಬ್ದಾರಿ ಪತ್ರಿಕೆಗಳದ್ದಾಗಿರುತ್ತದೆ. ಆ ನಿಟ್ಟಿನಲ್ಲಿ ನೀವು ಮತ್ತು ನಿಮ್ಮ ಸಿಬ್ಬಂದಿ ಮಾಡುತ್ತಿರುವ ಹೋರಾಟ ಅಭಿನಂದನೀಯ.


ಇವತ್ತು ಕೋಮುವಾದಿ ಆರ್‌ಎಸ್‌ಎಸ್‌ನ ಕರಪತ್ರದಂತಿರುವ 'ವಿಜಯ ಕರ್ನಾಟಕ' ರಾಜ್ಯದ ನಂಬರ್ ಒನ್ ಪತ್ರಿಕೆಯಾಗಿರುವಾಗ, ಬಿಜೆಪಿ ಕೂಡಾ ವೋಟ್ ಬ್ಯಾಂಕ್ ರಾಜಕಾರಣದಲ್ಲಿ ತೊಡಗಿರುವಾಗ 'ಲಂಕೇಶ್' ವಾರಪತ್ರಿಕೆ ಅತ್ಯಗತ್ಯವಾಗಿರುತ್ತದೆ. ನಮ್ಮ ಬೆಂಬಲ ಸದಾ ನಿಮಗಿರುತ್ತದೆ.

-ವಿನೋದ್ ಕಮಲಾನಗರ, ಬೆಂಗಳೂರು

ಡಿಸೆಂಬರ್ 17ರ ಸಂಚಿಕೆ ತುಂಬಾ ಚೆನ್ನಾಗಿ ಬಂದಿದೆ. '30 ಕೇಸುಗಳ ಕ್ರಿಮಿನಲ್ ರೌಡಿ ಸಿ.ಎಂ. ಆದರೆ ಏನು ಗತಿ' ಎಂಬ ಒಳಪುಟದ ಲೇಖನ ಓದಿ ದಿಗ್ಭ್ರಮೆಯಾಯಿತು. ಸಾಕ್ಷಿ ಸಮೇತ ಬರೆದಿದ್ದೀರಿ, ಇನ್ನೇನು ಬೇಕು? 'ರೆಡ್ಡಿ +ಚಡ್ಡಿ=ಯಡ್ಡಿ' ಎನ್ನುವ ಅದೆಷ್ಟೋ ಸಂಗತಿಗಳನ್ನು ಎಳೆಎಳೆಯಾಗಿ ಬಿಚ್ಚಿದ್ದೀರಿ.

ಒಂದು ಕಾಲಂ ಚೆನ್ನಾಗಿದೆ ಅಂದ್ರೆ, ಇನ್ನೊಂದಕ್ಕೆ ಅಪವಾದವಾಗುವುದು. ಒಂದು ಪುಟ ಚೆನ್ನಾಗಿದೆ ಅಂದ್ರೆ, ಇನ್ನೊಂದು ಪುಟಕ್ಕೆ ಅಗೌರವ ಕೊಟ್ಟಂತಾಗುತ್ತದೆ. ಲಂಕೇಶ್ ವಾರಪತ್ರಿಕೆಯ ಯಾವ ಯಾವ ಪುಟದ ಬಗ್ಗೆ ವರ್ಣಿಸಲಿ..(!?) ಪತ್ರಿಕೆ ಓದಿ ಮುಗಿಸಿದ ತಕ್ಷಣ ಮತ್ತೆ ಪುನಃ ಮಂಗಳವಾರ ಯಾವಾಗ ಬಂದಿತೋ? ಯಾವಾಗ ಬೆಂಗಳೂರಿನಿಂದ ಸಿಂಧನೂರಿಗೆ ಪೇಪರ್ ಬಂಡಲ್ ಬಂದಿತೂ? ಎಂದು ಕಾಯುತ್ತಾ ಕುಳಿತಿರುತ್ತೇನೆ.

-ಎಂ.ಜೆ. ಕಾವ್ಯಪ್ರಿಯ.
ಸಿಂಧನೂರ



ಬುದ್ಧಿಶಕ್ತಿ

ಗುರುಗಳ ಬಗ್ಗೆ ಪುಸ್ತಕ ಬರೆಯಬೇಕೆಂದಿದ್ದ ಬರಹಗಾರನೊಬ್ಬ ಮಠಕ್ಕೆ ಬಂದು "ನಿಮಗೆ ಅಸಾಧಾರಣ ಬುದ್ಧಿಶಕ್ತಿ ಇದೆ ಎಂದು ಜನ ಹೇಳುತ್ತಾರೆ. ಅದು ನಿಜವೇ?" ಎಂದು ಗುರುಗಳನ್ನು ಕೇಳಿದ.

"ನೀವು ಹಾಗೆ ಅಂದುಕೊಳ್ಳಬಹುದು" ಎಂದರು ಗುರುಗಳು ನಿಗರ್ವಿಯಾಗಿ.

"ಆದರೆ ಅಸಾಧಾರಣ ಬುದ್ಧಿಶಕ್ತಿ ಅಂದರೆ ಏನು?" ಎಂದ ಬರಹಗಾರ.

"ಗುರುತಿಸುವ ಸಾಮರ್ಥ್ಯ."

"ಯಾವುದನ್ನು ಗುರುತಿಸುವ ಸಾಮರ್ಥ್ಯ?"

"ಕಂಬಳಿ ಹುಳದಲ್ಲಿ ಚಿಟ್ಟೆಯನ್ನು, ಮೊಟ್ಟೆಯಲ್ಲಿ ಹದ್ದುವನ್ನು, ಸ್ವಾರ್ಥಿಯಲ್ಲಿ ಒಬ್ಬ ಸಂತನನ್ನು" ಎಂದು ಗುರುಗಳು ಹೇಳಿದರು.

ಸಿನಿಮಾ ಪ್ರಶಸ್ತಿ ಯಾರಿಗೆ


ಯಡಿಯೂರಪ್ಪ ಸರ್ಕಾರ ಅಧಿಕಾರಕ್ಕೆ ಬಂದ ಮೇ[...] ಮೊದಲ ಬಾರಿಗೆ ಸಿನಿಮಾ ಪ್ರಶಸ್ತಿ ಆಯ್ಕೆ ಸಮಿ[...]ಯೊಂದನ್ನು ಘೋಷಿಸಿದೆ.

ಬಿಜೆಪಿಯ ವಿಧಾನ ಪರಿಷತ್ ಸದಸ್ಯ ಕಂ ಚಿತ್ರ[...] ಶ್ರೀನಾಥ್ ಅವರ ಸಹೋದರ ಸಿ.ಆರ್. ಸಿಂಹ [...]ರನ್ನು ಈ ಆಯ್ಕೆ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಲಾ[...] ಜೊತೆಗೆ ಯಡಿಯೂರಪ್ಪನವರ ಆತ್ಮೀಯ ಮಿತ್ರ [...] ನಿರ್ಮಾಪಕ ವಿಜಯ್‌ಕುಮಾರ್ ಈ ಸಮಿತಿಯಲ್ಲಿದ[...] ಹಾಗೆಯೇ ಬಿಜೆಪಿ ಪರ ಚುನಾವಣಾ ಪ್ರಚಾರ ಸಭೆಗ[...]



ಭಾಗವಹಿಸಿದ್ದ ದಿ. ಸುಧೀ[...] ಅವರ ಪತ್ನಿ ಕೂಡಾ ಈ ಸ[...]ತಿಯ ಸದಸ್ಯೆ. ಅಂದರೆ, [...] ಸಮಿತಿ ಸಂಪೂರ್ಣವಾಗಿ ಕೇಸ[...]ಮಯವಾಗಿದೆಯೆಂದು ಹೇ[...] ಬೇಕಿಲ್ಲ ತಾನೆ? ಇದ್ದುದ[...] ಸಂಕೇತ್ ಕಾಶಿ, ಕೇಸರಿ ಹರ[...] ಪತ್ರಕರ್ತ ಕೆ.ಎಸ್.ವಾಸು ಮೊದಲಾದವರು ಪರವಾಗಿ[...]

ಅದೆಲ್ಲ ಬದಿಗಿಟ್ಟು ಮಾತನಾಡುವುದಾದರೆ [...] ಸಮಿತಿಯ ಮುಂದೆ ನಲವತ್ತೆರಡು ಚಿತ್ರಗಳಿವೆ. ಅವುಗ[...] ಈಗಾಗಲೇ ವಿವಾದಕ್ಕೊಳಗಾಗಿರುವ ಕೆಲವು ಚಿತ್ರಗ[...] ಇರುವುದು ಬೇಸರದ ವಿಷಯ. ಎಲ್ಲರೂ ಇವು ರಿಮೇ[...] ಚಿತ್ರಗಳೆಂದು ಹೇಳಿರುವ 'ಈ ಬಂಧನ', 'ಮಿ. ಗರ[...] 'ಗಜ', 'ಸತ್ಯವಾನ್ ಸಾವಿತ್ರಿ' ತರಹದ ಚಿತ್ರಗಳ [...] ಸಿ.ಆರ್. ಸಿಂಹ ಅವರ ಸಮಿತಿ ಒಂದು ದಿ[...] ನಿರ್ಧಾರವನ್ನು ತೆಗೆದುಕೊಳ್ಳಬೇಕಿದೆ.



ಇದರ ಹೊರತಾಗಿ ಗಿರೀಶ್ ಕಾಸರವಳ್ಳಿ ಅವರ 'ಗುಲಾಬಿ ಟಾಕೀಸ್', ಕವಿತಾ ಲಂಕೇಶರ 'ಅವ್ವ', ಬರಗೂರರ 'ಏಕಲವ್ಯ', ಜೆ. ಮೂರ್ತಿ ನಿರ್ದೇಶನದ 'ಕುರುನಾಡು', ರಾಮದಾಸ್ ನಾಯ್ಡು ಅವರ 'ಮೊಗ್ಗಿನ ಜಡೆ', ಬಿ. ಸುರೇಶ್ ನಿರ್ಮಾ[...] 'ಗುಬ್ಬಚ್ಚಿಗಳು', ನಾಗತಿಹಳ್ಳಿ ನಿರ್ದೇಶನದ 'ಮಾತಾ[...] ಮಾತಾಡ್ ಮಲ್ಲಿಗೆ', 'ಬನದ ನೆರಳು' ಮೊದಲ[...] ಚಿತ್ರಗಳ ಹೆಸರುಗಳು ಪ್ರಶಸ್ತಿಯ ಪಟ್ಟಿಯಲ್ಲಿ ಕೇಳಿಬರುತ್[...] ಕಮರ್ಷಿಯಲ್ ಚಿತ್ರಗಳ ಪಟ್ಟಿಯಲ್ಲಿ 'ಗಾಳಿಪ[...] 'ಬಿಂದಾಸ್', 'ಮಿಲನ', 'ಸತ್ಯ ಇನ್ ಲವ್' ತರ[...] ಚಿತ್ರಗಳಿವೆ.ಒಟ್ಟಾರೆಯಾಗಿ ಸಿ.ಆರ್. ಸಿಂಹ ಸಮಿತಿ ಮು[...] ರಿಮೇಕ್‌ಗಳನ್ನು ತಿರಸ್ಕರಿಸುವ, ಜೊತೆಗೆ ಉತ್ತಮ ಚಿತ್ರಗ[...] ಪ್ರಶಸ್ತಿಗೆ ಆಯ್ಕೆ ಮಾಡುವ ಜವಾಬ್ದಾರಿ ಇದೆ.

ಸಿನಿಮಾ ನಿರ್ದೇಶಕರಾದ ಐಎಎಸ್ ವಿಠಲಮೂರ್ತಿ



ಕಳೆದ ಹಲವಾರು ವರ್ಷಗಳಿಂದ ಸಿನಿಮಾ ರಂಗದ ಜೊತೆ ಬಹಳ ಹತ್ತಿರದ ನಂಟು ಹೊಂದಿರುವ ಐಎಎಸ್ ಅಧಿಕಾರಿ ಐ.ಎಂ. ವಿಠಲ ಮೂರ್ತಿ ಇದೀಗ ನೇರವಾಗಿ ಚಿತ್ರರಂಗಕ್ಕೆ ಧುಮುಕಲು ನಿರ್ಧರಿಸಿದ್ದಾರೆ. ಆದರೆ ಎಲ್ಲರ ನಿರೀಕ್ಷೆಯಂತೆ ಅವರು ಕೇವಲ ನಿರ್ಮಾಪಕರಾಗದೆ ನಿರ್ದೇಶಕ ಕೂಡ ಆಗ[...] ಸಜ್ಜಾಗಿದ್ದಾರೆ.

ಮುಂದಿನ ವರ್ಷ ಏಪ್ರಿಲ್ ತಿಂಗಳಲ್ಲಿ ಇ[...] ಚೊಚ್ಚಲ ನಿರ್ದೇಶನದ 'ಕಿರಗೂರಿನ ಗಯ್ಯಾಳಿಗಳ[...] ಸೆಟ್ಟೇರಲಿದೆ. ಪೂರ್ಣಚಂದ್ರ ತೇಜಸ್ವಿಯವರ [...] ಕಥೆಯನ್ನು ಸಿನಿಮಾ ಮಾಡಲು ವಿಠಲಮೂ[...] ಹಲವಾರು ವರ್ಷಗಳಿಂದ ಓಡಾಡುತ್ತಲೇ ಇದ್ದ[...] ಆದರೆ ಅದ್ಯಾಕೋ ದೊಡ್ಡ ದೊಡ್ಡ ನಿರ್ದೇಶಕರು [...] ಚಿತ್ರ ಮಾಡಲು ಹಿಂದೇಟು ಹಾಕಿದ್ದರು. ಆದ್ದರಿಂ[...] ವಿಠಲಮೂರ್ತಿ ಈಗ ಧೈರ್ಯ ಮಾಡಿ ತಾವೇ ಅಖಾ[...] ಇಳಿಯುತ್ತಿದ್ದಾರೆ.

ಈ ಹಿಂದೆ 'ಕಾನೂರು ಹೆಗ್ಗಡತಿ', 'ಮತದಾ[...] ಮತ್ತು 'ಹಸೀನಾ'ದಂತಹ ಸಿನಿಮಾ ನಿರ್ಮಾಣದ[...] ತೊಡಗಿಸಿಕೊಂಡಿದ್ದ ವಿಠಲಮೂರ್ತಿಯವರ ಬ[...] ತೇಜಸ್ವಿಯವರ ಇನ್ನೂ ಮೂರ್ನಾಲ್ಕು ಕಥೆಗಳ ಹಕ್ಕುಗ[...] ಇರುವುದರಿಂದ ವರ್ಷಕ್ಕೊಂದು ಸಿನಿಮಾ ಮಾಡು[...] ಉದ್ದೇಶವನ್ನೂ ಅವರು ಹೊಂದಿದ್ದಾರೆ.

ಕರ್ನಾಟಕದಲ್ಲಿ ಐಎಎಸ್ ಅಧಿಕಾರಿಯೊಬ್ಬ[...] ಸಿನಿಮಾ ನಿರ್ದೇಶಿಸಲು ಹೊರಟಿರುವುದು ಇ[...] ಮೊದಲು. 'ಕಿರಗೂರಿನ ಗಯ್ಯಾಳಿಗಳು' ಒಂದು ಸ[...]ಕತೆ. ಅದನ್ನು ಹೇಗೆ ಒಂದು ಚಿತ್ರಕತೆಯಾಗಿ ವಿಸ್ತರಿಸುತ್ತಾ[...] ಮತ್ತೆ ಕತೆಯ ಪ್ರತಿ ಸಾಲಿನಲ್ಲಿ ಬರುವ ಬೈಗುಳಗಳ[...] ಹೇಗೆ ನಿಭಾಯಿಸುತ್ತಾರೆ ಎಂದು ನೋಡಬೇಕಿದೆ..

ಸಂದರ್ಶನ

ಗೋಲ್ಡನ್ ಗಣೇಶನ ಮಾತಿನ ಸರ್ಕಸ್!

ಗೋಲ್ಡನ್ ಸ್ಟಾರ್ ಗಣೇಶ್ ಮಾರುಕಟ್ಟೆ ಕುಸಿಯುತ್ತಿದೆ; ಆತನ ವರ್ಚಸ್ಸು ಕುಂದಿದೆ ಎಂದೇ ಗಾಂಧಿನಗರದಲ್ಲಿ ಈಗ ನಿತ್ಯ ಚಾಲ್ತಿಯಲ್ಲಿರುವ ಮಾತು. ಈ ಬಗ್ಗೆ ಗಣೇಶ್‌ನನ್ನು ಮಾತಾಡಿಸಿದಾಗ ಆತ ತೀಕ್ಷ್ಣವಾಗಿ ತಮಾಷೆಯಾಗಿ ಎಂದಿನಂತೆ ಮಾತನಾಡಿದ್ದು ಹೀಗೆ.

ಲಂಕೇಶ್: ಈ ವರ್ಷ ನಿಮ್ಮ ಚಿತ್ರಗಳು ಯಶಸ್ವಿಯಾಗಿಲ್ಲವಲ್ಲ?

ಗಣೇಶ್: ನನ್ನ ಎರಡೂವರೆ ವರ್ಷಗಳ ವೃತ್ತಿಜೀವನ ಒಂದು ಸಿನಿಮಾ ಆರಂಭವಾಗುವ ಮೊದಲಿನ ಸ್ಲೈಡ್ ಷೋ ತರಹ ಇದೆ. ಈಗಷ್ಟೇ ಸ್ನೇಹಿತರಿಗೆ ಥ್ಯಾಂಕ್ಸ್ ಹೇಳಿ ಟೈಟಲ್ ಕಾರ್ಡ್ ಮುಗಿಸಿದ್ದೇನೆ. ಈ ಗಣೇಶನ ನಿಜವಾದ ಸಿನಿಮಾ ಆರಂಭವಾಗುವುದೇ ಇನ್ನು ಮುಂದೆ.

ನೋಡಿ ಸಾರ್ ಎಲ್ಲಾ ಚಿತ್ರ 'ಮುಂಗಾರು ಮಳೆ' ಯಶಸ್ಸು ಕಾಣಲು ಸಾಧ್ಯವಿಲ್ಲ. ಕೆಲವು ಅದಕ್ಕಿಂತ ಕಡಿಮೆ ಇರಬಹುದು; ಇನ್ನು ಕೆಲವು ಅದನ್ನು ಧಾಟಿ ಮುಂದೆ ಹೋಗಲೂಬಹುದು. ಆದರೆ ನನ್ನ ನಾಲ್ಕು ಚಿತ್ರಗಳಲ್ಲಿ 'ಗಾಳಿಪಟ' ಮತ್ತು 'ಅರಮನೆ' ಗೆದ್ದಿವೆ. 'ಬೊಂಬಾಟ್' ಮತ್ತು 'ಸಂಗಮ' ಪ್ರೇಕ್ಷಕರ ದೃಷ್ಟಿಯಿಂದ ಸೋತಿವೆ. ಆದರೆ ವ್ಯಾಪಾರದ ದೃಷ್ಟಿಯಿಂದ ಗೆದ್ದಿವೆ.

ಪ್ರಶ್ನೆ: ಹಾಗಾದರೆ ಈ ವರ್ಷದ ಚಿತ್ರಗಳ ಆಯ್ಕೆ ಬಗ್ಗೆ ಪಶ್ಚಾತ್ತಾಪವಿದೆಯೇ?

ಉತ್ತರ: ನೋ ನೋ. ನೋ ರಿಗ್ರೇಟ್ಸ್ ಸರ್. ಇಮೇಜ್ ಬದಲಾವಣೆಗೆ ಪ್ರಯತ್ನಿಸಿದ್ದು ನಿಜ. ಹಾಗೆ ಪ್ರಯತ್ನಿಸದಿದ್ದರೆ ನಿಂತ ನೀರಾಗಿಬಿಡುತ್ತಿದ್ದೆ. ಈಗ ಜನ ನನ್ನಿಂದ ಏನು ಅಪೇಕ್ಷಿಸುತ್ತಾರೆ ಎಂದು ಗೊತ್ತಾಗಿದೆ. ಹೀಗಾಗಿ ಒಂದು ಪರೀಕ್ಷೆಯಲ್ಲಿ ಪಾಸಾಗಿದ್ದೇನೆ. ಅದಕ್ಕಾಗಿ ನಾನ್ಯಾಕೆ ಪಶ್ಚಾತ್ತಾಪ ಪಡಲಿ?

ನಿಜ, ಎರಡು ಚಿತ್ರಗಳು ಪ್ರೇಕ್ಷಕರನ್ನು ರಂಜಿಸಲಿಲ್ಲ, ಅದರಲ್ಲಿ ಏನು ಕೊರತೆಯಿದೆ ಎಂಬುದನ್ನು ನಾನು ಅರಿತುಕೊಂಡಿದ್ದೇನೆ. 'ನೀನು ಲವರ್ ಬಾಯ್ ಪಾತ್ರ ಬಿಟ್ಟು ಇನ್ಸ್‌ಪೆಕ್ಟರ್, ಆಕ್ಷನ್ ಹೀರೋ.... ಮೊದಲಾದ ಪಾತ್ರಗಳನ್ನು ಮಾಡಬೇಡ' ಎಂದು ಪ್ರೇಕ್ಷಕರು ತೀರ್ಪು ನೀಡಿದ್ದಾರೆ. ಆ ತೀರ್ಪಿಗೆ ನಾನು ಬದ್ಧನಾಗಿದ್ದೇನೆ.

ಪ್ರಶ್ನೆ: ನೀವು ದಿಢೀರನೆ ಮದುವೆಯಾಗಿದ್ದರಿಂದ ನಿಮ್ಮ ಕಟ್ಟಾ ಅಭಿಮಾನಿಗಳಾದ ಹೆಣ್ಣುಮಕ್ಕಳೆಲ್ಲ ನಿಮ್ಮಿಂದ ದೂರವಾದರು. ನಿಮ್ಮ ಕ್ರೇಜ್ ಕಡಿಮೆಯಾಗಿದೆ ಎಂಬ ಮಾತು ಚಾಲ್ತಿಯಲ್ಲಿದೆಯಲ್ಲ?

ಉತ್ತರ: ಈ ವಾದ ನಿಜವೇ ಆದಲ್ಲಿ ಶಾರುಖ್ ಖಾನ್ ಚಿತ್ರಗಳನ್ನೂ ಯಾವ ಹೆಣ್ಣುಮಕ್ಕಳೂ ನೋಡುತ್ತಿರಲಿಲ್ಲ. ಇದೆಲ್ಲಾ ಖಂಡಿತಾ ಸುಳ್ಳು. ನನ್ನ ವೈಯಕ್ತಿಕ ಜೀವನ ನನಗೆ. ಅದರ ಬಗ್ಗೆ ಪ್ರೇಕ್ಷಕರು ಅಭಿಮಾನಿಗಳು ತಲೆಕೆಡಿಸಿಕೊಳ್ಳುವುದಿಲ್ಲ ಎಂಬುದು ನನಗೆ ಗೊತ್ತು. ನನ್ನ ಪಾತ್ರವನ್ನಷ್ಟೇ ಅವರು ನಿರೀಕ್ಷಿಸುತ್ತಾರೆಯೇ ವಿನಃ ವೈಯಕ್ತಿಕ ಜೀವನವನ್ನಲ್ಲ.

ನಿರ್ದೇಶಕ ನನಗೊಂದು ಪಾತ್ರ ನೀಡುತ್ತಾನೆ. ಈ ಗಣೇಶ ಆ ಪಾತ್ರದ ಮುಖಾಂತರ ಒಂದು ಪೇಂಟಿಂಗ್ ಬಿಡಿಸುತ್ತಾನೆ. ಆ ಪೇಂಟಿಂಗ್ ಪ್ರೇಕ್ಷಕನಿಗೆ ಇಷ್ಟವಾದರೆ ನಾನು ಗೆದ್ದಹಾಗೆ. ಎಲ್ಲಿಯವರೆಗೆ ನಾನು ಪ್ರೇಕ್ಷಕರನ್ನು ರಂಜಿಸುತ್ತೇನೋ, ಅಲ್ಲಿಯವರೆಗೆ ಅವರು ನನ್ನ ಕೈಬಿಡುವುದಿಲ್ಲ. ಇದು ಸತ್ಯ. ಮದುವೆಯಾಗಿದೆ, ಮಕ್ಕಳಾಗಿದೆ ಎಂಬ ಮಾತು ಅರ್ಥವಿಲ್ಲದ್ದು.



ಪ್ರಶ್ನೆ: ಮುಂದಿನ ವರ್ಷ ನೀವು ಅಪ್ಪ ಆಗುತ್ತೀರಂತೆ?

ಉತ್ತರ: ಹೌದಲ್ಲಾ... ಮದ್ವೆ ಆದ್ಮೇಲೆ ಮಕ್ಳಾಗ್ಬೇಕು ತಾನೆ? ಮಾರ್ಚ್ ವೇಳೆಗೆ ನಿಮಗೆಲ್ಲಾ ಸಿಹಿ ಸುದ್ದಿ ಕೊಡ್ತೀನಿ!

ಪ್ರಶ್ನೆ: ನಿಮಗೆ ಬೇಡಿಕೆಯಿದ್ದರೂ ನೀವೇ ಸ್ವಂತ ನಿರ್ಮಾಣ ಸಂಸ್ಥೆ ಆರಂಭ ಮಾಡುವ ಅಗತ್ಯವಿತ್ತೇ? ಅದನ್ನು ಹಣಕ್ಕಾಗಿ ಪ್ರಾರಂಭಿಸಿದ್ದೀರಾ?

ಉತ್ತರ: ನಾನು ನಿರ್ಮಾಣ ಸಂಸ್ಥೆ ಹುಟ್ಟುಹಾಕಿ ಒಳ್ಳೆಯ ಕಥೆಯನ್ನು ಸಿನಿಮಾ ಮಾಡಲು ಹೊರಟಿರುವುದು ನಿಜ. ಈ ಸಂಸ್ಥೆಯಿಂದ ಅಂತಹ ಸಿನಿಮಾ ಆದರೂ ಆಗಬಹುದು ಅಥವಾ ಆಗದೆಯೂ ಇರಬಹುದು. ಆದರೆ ನಾನು ಹಣಕ್ಕಾಗಿ ಖಂಡಿತ ಇದನ್ನು ಪ್ರಾರಂಭಿಸಿಲ್ಲ. ನಾನು ಅಲೆಮಾರಿಯಾಗಿ ಚಿತ್ರರಂಗಕ್ಕೆ ಬಂದವನು. ಆಮೇಲೆ ಉಪವಾಸವಿದ್ದದ್ದೂ ಇದೆ. ಆ ಬಳಿಕ ಪೋಷಕನಟ, ಹಾಸ್ಯನಟ, ಕಿರುತೆರೆಯಲ್ಲಿ ನಟನೆ, ಆ ಬಳಿಕ ಟೀವಿ ನಿರೂಪಕ ಇದೆಲ್ಲ ಆದ ಮೇಲೆ ಕೊನೆಗೆ ನಾಯಕನಟನಾದೆ. ಈ ಎಲ್ಲಾ ಅನುಭವವನ್ನು ಹೊಂದಿದ ನನಗೆ ನಿರ್ಮಾಪಕನಾಗಿಯೂ ಅನುಭವ ಹೊಂದಬೇಕು ಎಂಬ ಆಶಯವಿದೆ ಅಷ್ಟೇ.

ಪ್ರಶ್ನೆ: ಬ್ರಾಂಡ್ ಅಂಬಾಸಿಡರ್ ಆಗಿ ಇತ್ತೀಚೆಗೆ ಸಿನಿಮಾಗಳಿಗಿಂತಲೂ ಹೆಚ್ಚು ಕಾಲ್‌ಶೀಟ್ ನೀಡುತ್ತಿದ್ದೀರಲ್ಲಾ?

ಉತ್ತರ: ಹೌದು. ರಿಲಯನ್ಸ್‌ನವರು ಈ ವರ್ಷ ಕಾಂಟ್ರಾಕ್ಟ್ ರಿನೀವಲ್ ಮಾಡಿದ್ದಾರೆ. ಮೊನ್ನೆ ಮೊನ್ನೆ ಕೋಕಾಕೋಲಾ ಕಂಪನಿಗೆ ಸಹಿ ಮಾಡಿದ್ದೇನೆ. ಮಾರ್ಚ್ ತಿಂಗಳೊಳಗೆ ಇನ್ನೂ ಮೂರು ಮಲ್ಟಿ ನ್ಯಾಷನಲ್ ಕಂಪನಿಗಳಿಗೆ ಸಹಿ ಮಾಡುತ್ತೇನೆ. ಇದರಲ್ಲಿ ತಪ್ಪೇನಿದೆ? ಅಷ್ಟು ದೊಡ್ಡ ಕಂಪನಿಯವರು ಕನ್ನಡದ ನಟರನ್ನು ಹುಡುಕಿಕೊಂಡು ಬರುವುದು ಸಂತೋಷದ ವಿಷಯವಲ್ಲವೇ? ನನಗಂತೂ ಈ ಬ್ರಾಂಡ್ ಅಂಬಾಸಿಡರ್ ಒಂದು ರೀತಿಯಲ್ಲಿ ಟಾನಿಕ್ ಇದ್ದಹಾಗೆ. ಆ ಕಾರಣಕ್ಕಾಗಿ ನನ್ನ ಚಿತ್ರಗಳೂ ಗೆಲ್ಲಬೇಕೆಂದು ಕಷ್ಟಪಡುತ್ತಿದ್ದೇನೆ. ನಾಲ್ಕು ಚಿತ್ರ ಸೋತರೆ ನಾಳೆ ನನಗೆ ಯಾರಾದರೂ ಬ್ರಾಂಡ್ ಅಂಬಾಸಿಡರ್ ಮಾಡ್ತಾರಾ?

ಪ್ರಶ್ನೆ: ಭವಿಷ್ಯದ ಬಗ್ಗೆ ಏನು ಯೋಜನೆ ಹಾಕಿಕೊಂಡಿದ್ದೀರಾ?

ಉತ್ತರ: 2008ರಲ್ಲಿ ಆಗಿದ್ದು ಖಂಡಿತ ರಿಪೀಟ್ ಆಗಲ್ಲ, 'ಸರ್ಕಸ್' ಚಿತ್ರದಲ್ಲಿ ರೊಮ್ಯಾನ್ಸ್ ಮತ್ತು ಥ್ರಿಲ್ ಇದೆ. ಇದು ಖಂಡಿತವಾಗಿಯೂ ಪ್ರೇಕ್ಷಕರಿಗೆ ಇಷ್ಟವಾಗುತ್ತೆ. ನನ್ನ 'ಉಲ್ಲಾಸ' ಚಿತ್ರವಂತೂ ಅಭಿಮಾನಿಗಳಿಗೆ ಖಂಡಿತವಾಗಿಯೂ ರಂಜನೆ ನೀಡುತ್ತದೆ. ಇನ್ನೂ ಮೂರು ಚಿತ್ರಗಳು ಕ್ಯೂನಲ್ಲಿವೆ. ಎಲ್ಲವನ್ನೂ ರಂಜನೆಯ ದೃಷ್ಟಿಯಿಂದ ಆಯ್ಕೆ ಮಾಡಿಕೊಂಡಿದ್ದೇನೆ.

ಸರ್, ಬಹಳ ಪ್ರೀತಿಯಿಂದ ಜನ ನನಗೆ 'ಮುಂಗಾರು ಮಳೆ'ಯ ಮುಖಾಂತರ ದೊಡ್ಡ ಸ್ಥಾನ ಮತ್ತು ಜವಾಬ್ದಾರಿಯನ್ನು ನೀಡಿದ್ದಾರೆ. ಯಾರಿಗೂ ಸಿಗದಂತಹ ಒಂದು ಅಮೂಲ್ಯವಾದ ಪ್ರೀತಿ ನನಗೆ ದೊರಕಿದೆ. ಇದನ್ನು ಯಾವುದೇ ಕಾರಣಕ್ಕೆ ಕಳೆದುಕೊಳ್ಳಲು ನಾನು ತಯಾರಿಲ್ಲ.

(ನಗುತ್ತಾ) ನಾನು ಕನಿಷ್ಠವೆಂದರೂ ಮುಂದಿನ ಮೂವತ್ತು ವರ್ಷಗಳ ಕಾಲ ನಾಯಕನಾಗಿ ನಟಿಸಿ ರಂಜಿಸಬೇಕೆಂದು ಕೊಂಡಿದ್ದೇನೆ....

ಪ್ರಶ್ನೆ: ನಿಮ್ಮ ಮತ್ತು ಯೋಗರಾಜ್ ಭಟ್ಟರ ಸಮಾಗಮ ಮುಂದಿನ ವರ್ಷ ಆಗಲಿದೆಯೇ?

ಉತ್ತರ: (ಮುಸಿಮುಸಿ ನಗುತ್ತಾ) ಸಮಾಗಮ ಆಗುವುದು ಗ್ಯಾರಂಟಿ. ಆದರೆ ಮುಂದಿನ ವರ್ಷವೇ ಆಗುತ್ತೋ ಇಲ್ಲವೋ ಗೊತ್ತಿಲ್ಲ.


ಗಣೇಶನ್ ಗ್ಲಾಮರ್, ವರ್ಚಸ್ಸು, ಚಿತ್ರಗಳ ಮಾರುಕಟ್ಟೆ ಕಡಿಮೆಯಾಗಿದೆ ಎಂಬ ಮಾತುಗಳ ಹಿನ್ನೆಲೆಯಲ್ಲಿ ಗಣೇಶನನ್ನು ಮಾತನಾಡಿಸಿದಾಗ ತನ್ನಲ್ಲಿರುವ ಆತ್ಮವಿಶ್ವಾಸ, ಲೆಕ್ಕಾಚಾರ ಮತ್ತು ಬುದ್ಧಿವಂತಿಕೆ ಪ್ರದರ್ಶಿಸಿದ್ದು. ಅದನ್ನು ನೋಡಿ ಈತನನ್ನು ಸದ್ಯಕ್ಕೆ ಯಾರೂ ಅಲ್ಲಾಡಿಸಲು ಸಾಧ್ಯವಿಲ್ಲ ಎಂದೆನ್ನಿಸಿತು.

■ ಶೆಣೈ

ನಿರೀಕ್ಷೆ ಮೂಡಿಸಿರುವ ಮೂವರು ನಿರ್ದೇಶಕರು

ಚಿತ್ರರಂಗ ಎಂಬ ಬಣ್ಣದ ಲೋಕದಲ್ಲಿ ಅದೆಷ್ಟೋ ಜನ ಆರಂಭದಲ್ಲಿ ಅಪಾರ ನಿರೀಕ್ಷೆಗಳನ್ನು ಹುಟ್ಟಿಸಿ ಆನಂತರ ಅವುಗಳನ್ನು ಸ್ವತಃ ನುಚ್ಚುನೂರು ಮಾಡಿದ್ದಾರೆ. ಆದರೆ ಒಂದೇ ಒಂದು ಚಿತ್ರ ಬಿಡುಗಡೆಯಾಗುವ ಮುನ್ನವೇ ಬಹಳಷ್ಟು ನಿರೀಕ್ಷೆಯನ್ನು ಹುಟ್ಟಿಸುವವರು ವಿರಳ. ಇಂತಹ ಅಪರೂಪದ ಸಾಲಿನಲ್ಲಿ ಈ ಮೂವರು ನಿರ್ದೇಶಕರು ಸೇರಿದ್ದಾರೆ. ಅವರ ಕಿರು ಪರಿಚಯ ಇಲ್ಲಿದೆ.....

'ಹಾಗೆ ಸುಮ್ಮನೆ' ಎಂದ ಪ್ರೀತಮ್ ಗುಬ್ಬಿ



ಪ್ರೀತಮ್ ಗುಬ್ಬಿ ತನ್ನ ಚೊಚ್ಚಲ ಪ್ರಯತ್ನದಲ್ಲೇ 'ಒಳ್ಳೆ ಕಥೆಗಾರ' ಎಂದು ಹೆಸರು ಮಾಡಿದ ಯುವಕ. ಈತ ಕಥೆ ಬರೆದ 'ಮುಂಗಾರು ಮಳೆ' ಕನ್ನಡ ಚಿತ್ರರಂಗದ ಎಲ್ಲ ದಾಖಲೆಗಳನ್ನು ಮುರಿದಿದೆ. ಯೋಗರಾಜ್ ಭಟ್ಟರ ಅಸೋಸಿಯೇಟ್ ಆಗಿಯೂ ದುಡಿದಿರುವ ಪ್ರೀತಮ್ ಆನಂತರ 'ಮುಂಗಾರು ಮಳೆ ಭಾಗ-3'ಕ್ಕೂ ಕಥೆಯನ್ನು ಸಿದ್ಧಪಡಿಸಿ, ರಾಕ್‌ಲೈನ್ ನಿರ್ಮಾಪಕರಿಗಾಗಿ ತಾನೇ ಚಿತ್ರ ನಿರ್ದೇಶಿಸಲು ಮುಂದಾದ. ಇನ್ನೇನು ಸಿನಿಮಾ ಆರಂಭವಾಗಬೇಕು ಎನ್ನುವಷ್ಟರಲ್ಲಿ ಗಣೇಶನ ಗೊಂದಲದಲ್ಲಿ ಸಿಲುಕಿ ಈತನ ಆಸೆ ಹಾಗೇ ಕಮರಿಹೋಗಿತ್ತು, ಅದಕ್ಕೆಲ್ಲಾ ತಲೆಕೆಡಿಸಿಕೊಂಡು ಕೂರದ ಪ್ರೀತಂ ಈಗ 'ಹಾಗೆ ಸುಮ್ಮನೆ' ಸಿನಿಮಾ ಮಾಡಿದ್ದಾನೆ. ಯಾವ ಸ್ಟಾರ್‌ಗಳೂ ಇಲ್ಲದ ಈ ಚಿತ್ರ ಈಗ ಎಲ್ಲೆಡೆ ಕುತೂಹಲವನ್ನು ಮೂಡಿಸಿದೆ. ಬದುಕಲು ಕಲಿಸಿದ, ಬದುಕು ಬುದ್ಧಿಯ ಈ ಪ್ರೀತಮ್‌ನಿಂದ ಜನ ದೊಡ್ಡದನ್ನು ನಿರೀಕ್ಷಿಸುತ್ತಿದ್ದಾರೆ.

'ಅಂಬಾರಿ' ಯಲ್ಲಿ ಬಂದ ಅರ್ಜುನ!



ಈತನಿಗೆ ಈಗ ಇಪ್ಪತ್ತೈದು ವರ್ಷ ವಯಸ್ಸು. ಆದರೆ ಚಿತ್ರರಂಗದಲ್ಲಿ ಈಗಾಗಲೇ ಆರು ವರ್ಷದ ಅನುಭವ ಹೊಂದಿದ್ದಾನೆ. ಮಂಡ್ಯ ಜಿಲ್ಲೆಯ ಈ ಹುಡುಗನನ್ನು ಗಾಯಕ ಎಲ್.ಎನ್ ಶಾಸ್ತ್ರಿ ಕರೆತಂದು ರವಿಚಂದ್ರನ್ ಜೊತೆಗೆ ಕೆಲಸಕ್ಕೆ ಹಚ್ಚಿದರು. ರವಿಚಂದ್ರನ್‌ರ 'ಮಲ್ಲ'ದಂಥ ಹಿಟ್ ಸಿನಿಮಾಗಳೊಂದಿಗೆ ಪಿ.ಎನ್ ಸತ್ಯಾ ಜೊತೆ ಒಂದೆರಡು ಚಿತ್ರಗಳಲ್ಲಿ ಕೆಲಸ ಮಾಡಿರುವ ಅರ್ಜುನ್ ಇವತ್ತು 'ಅಂಬಾರಿ'ಯನ್ನೇರಿದ್ದಾನೆ.

ಲೂಸ್ ಮಾದ ಅಲಿಯಾಸ್ ಯೋಗೇಶ್ ನಾಯಕನಾಗಿ ನಟಿಸಿರುವ, ಅರ್ಜುನ್ ನಿರ್ದೇಶಿಸಿರುವ 'ಅಂಬಾರಿ' ಬಿಡುಗಡೆಗೂ ಮುನ್ನ ಸಾಕಷ್ಟು ನಿರೀಕ್ಷೆ ಹುಟ್ಟಿಸಿದೆ. ಹರಿಕೃಷ್ಣ ಟ್ಯೂನ್ ಮಾಡಿರುವ ಆಡಿಯೋ ಹಿಟ್ ಆಗಿದೆಯಲ್ಲದೆ ಸತ್ಯ ಹೆಗಡೆಯ ಕ್ಯಾಮೆರಾ ಕೆಲಸ ತುಂಬಾ ಚೆನ್ನಾಗಿ ಬಂದಿದೆ ಅನ್ನೋದು ಎಡಿಟಿಂಗ್ ರೂಮಿನಿಂದ ಬಂದಿರುವ ನ್ಯೂಸ್.

'ಗುಲಾಮ' ರಂಗನಾಥ್!

ರಾಮು ನಿರ್ಮಾಣದ ಹಲವಾರು ಚಿತ್ರಗಳಿಗೆ ಕಥೆ, ಚಿತ್ರಕಥೆ, ಸಂಭಾಷಣೆಯನ್ನು ಒದಗಿಸಿರುವ ತುಷಾರ್ ರಂಗನಾಥ್ ಇವತ್ತು ಕನ್ನಡ ಚಿತ್ರರಂಗದಲ್ಲಿ ಹೆಜ್ಜೆ ಗುರುತು ಮೂಡಿಸುತ್ತಿರುವ ಪ್ರತಿಯೊಬ್ಬರಿಗೂ ಪರಮಾಪ್ತ. ಯೋಗರಾಜ್ ಭಟ್, ಸಾಧುಕೋಕಿಲಾ ನಿರ್ದೇಶಿಸಿರುವ ಚಿತ್ರಗಳಿಗೆ ಅಸೋಸಿಯೇಟ್ ಆಗಿ ಅನುಭವ ಹೊಂದಿರುವ ರಂಗನಾಥ್‌ಗೆ ದುನಿಯಾ ಸೂರಿ ಕ್ಲೋಸ್ ಫ್ರೆಂಡು. ಅಷ್ಟೇ ಅಲ್ಲ ಇವತ್ತಿನ ಹೀರೋಗಳಾದ ವಿಜಯ್, ದರ್ಶನ್, ಸುದೀಪ್‌ರಿಂದ ಹಿಡಿದು ಪುನೀತ್ ತನಕ ಎಲ್ಲರಿಗೂ ಹತ್ತಿರವಿರುವ ವ್ಯಕ್ತಿ.



ಇವತ್ತಿನ ತಲೆಮಾರಿನ ಯುವಕರಿಗೆ ಏನು ಬೇಕು ಎಂಬ ಮಿಡಿತವನ್ನು ಅರಿತಿರುವ ಬರಹಗಾರ ರಂಗನಾಥ್. ಈತ ಸಂಭಾಷಣೆ ಬರೆದ 'ರಾಕ್ಷಸ', 'ಸುಂಟರಗಾಳಿ', 'ಅನಾಥರು' ಚಿತ್ರಗಳ ಡೈಲಾಗುಗಳೇ ಇದಕ್ಕೆ ಸಾಕ್ಷಿ.

ಒಂದೇ ಒಂದು ಗೆಲುವಿಗಾಗಿ ಹಂಬಲಿಸುತ್ತಿರುವ ಪ್ರಜ್ವಲ್ ದೇವರಾಜ್‌ಗೆ ರಂಗನಾಥ್‌ರ 'ಗುಲಾಮ' ಬ್ರೇಕ್ ನೀಡಬೇಕಾಗಿದೆ. ಹಾಗೆಯೇ ನಿರಂತರ ಸೋಲಿನಿಂದ ಕಂಗೆಟ್ಟಿರುವ ತನ್ನ ಧಣಿ ರಾಮುರನ್ನು ಸೋಲಿನ ಕೂಪದಿಂದ ಹೊರಗೆತ್ತುವ ದೊಡ್ಡ ಜವಾಬ್ದಾರಿಯೂ ರಂಗನಾಥ್ ಮೇಲಿದೆ. ಇಂಥ ಹೊಣೆಗಾರಿಕೆಯ ನಡುವೆ ಗಾಂಧಿನಗರದಲ್ಲಿ 'ಗುಲಾಮ'ನ ಬಗ್ಗೆ ಒಳ್ಳೆಯ ಟಾಕ್ ಕೇಳಿಬರುತ್ತಿರುವುದು ನೆಮ್ಮದಿ ಮೂಡಿಸುವ ವಿಚಾರ.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಈ ಮೂವರು ಕಥೆ, ಚಿತ್ರಕಥೆ, ಸಂಭಾಷಣೆ ಬರೆಯುತ್ತಾ ಅಸೋಸಿಯೇಟ್‌ಗಳಾಗಿಯೂ ಅನುಭವ ಪಡೆದು ಡೈರೆಕ್ಷನ್‌ಗೆ ಕಾಲಿರಿಸಿರುವವರು. 2009ರಲ್ಲಿ ಬಿಡುಗಡೆಯಾಗಲು ಸಿದ್ಧವಿರುವ ಇವರ ಸಿನಿಮಾಗಳು ಚಿತ್ರರಂಗಕ್ಕೆ ಹೊಸ ತಿರುವುಗಳನ್ನು ನೀಡಲಿ....

■ ಅರುಣ್ .ಜೆ

R B P LANKESH, Kannada Weekly Price Rs. 12/- 31-12-2008 RNI No. KARKAN2005/14648 Regd.No.KA/RNP/BGS/2036/2008-10 Posted at : Basavanagudi,



ಥರ್ಡ್‌ಕ್ಲಾಸ್ ಮಂಜ!

ಥ್ರಿಲ್ ಹುಟ್ಟಿಸಿದ ನೀನ್ಯಾರೆ?

'3ನೇ ಕ್ಲಾಸ್ ಮಂಜ-ಬಿಕಾಂ ಭಾಗ್ಯ' ಎಂಬ ಚಿತ್ರ ಅದರ ಹೆಸರಿನಷ್ಟೇ ವಿಚಿತ್ರವಾಗಿದೆ. 'ಮೆಂಟಲ್ ಮಂಜ' ಮತ್ತು 'ತಿಮ್ಮ' ಎಂಬ ಚಿತ್ರಗಳನ್ನು ನೀಡಿದ್ದ ಸಹೋದರರಾದ ಸಾಯಿಸಾಗರ್ ಮತ್ತು ಅರ್ಜುನ್ ಈ 'ಮಂಜ-ಭಾಗ್ಯ' ಚಿತ್ರವನ್ನೂ ನೀಡಿದ್ದಾರೆ. ಯಥಾಪ್ರಕಾರ ಇವರ ತಂದೆ ಚಳವಳಿ ನಾರಾಯಣ್ ಇದರ ನಿರ್ಮಾಪಕ.

'ಮೆಂಟಲ್ ಮಂಜ' ಒಂದು ರೀತಿಯ ಹವಾ ಸೃಷ್ಟಿಸಿತ್ತು, ಅದೇ ಗುಂಗಿನಲ್ಲಿ ಮಾಡಿದ 'ತಿಮ್ಮ' ತಿಪ್ಪೆ ಸೇರಿತ್ತು, ಈಗ ಇವರ ಮೂರನೇ ಚಿತ್ರವೂ ತಿಪ್ಪೆ ಸೇರುವ ಹಾದಿಯಲ್ಲಿದೆ. ಚಿತ್ರದ ಸಂಭಾಷಣೆ 'ಭಯಂಕರ'ವಾಗಿದೆ! ಕಥೆಯಂತೂ 'ಅತಿ ಭಯಂಕರ'ವಾಗಿದೆ!! ಆದ್ದರಿಂದ ಚಿತ್ರದ ಕಥೆಯನ್ನು ನಾವು ಇಲ್ಲಿ ಹೇಳುವುದಿಲ್ಲ, ಯಾಕೆಂದರೆ ನಮ್ಮ ಓದುಗರ ಮನಸ್ಸು ಕೆಡಿಸುವಷ್ಟು ಪಾಪಿಗಳು ನಾವಲ್ಲ.

ಈ ಚಿತ್ರದ ವಿಶೇಷವೇನೆಂದರೆ ಭಾಗ್ಯಳ ಪಾತ್ರದಲ್ಲಿ ಕಾಣಿಸಿಕೊಂಡಿರುವ ಹುಡುಗಿ ಮನಸ್ಸಿನಲ್ಲಿ ಉಳಿಯುತ್ತಾಳೆ. ಸಾಯಿಸಾಗರ್‌ಗೆ ನಿರ್ದೇಶನದ ಮೇಲೆ ಹಿಡಿತವಿದೆ. ಆದರೆ ಆತ ಇಂತಹ 'ಮೂರನೇ ಕ್ಲಾಸ್' ಕಥೆಯ ಬದಲು ಒಳ್ಳೊಳ್ಳೆಯ ಕಥೆಯನ್ನು ಆಯ್ಕೆ ಮಾಡಿಕೊಂಡರೆ ಒಳ್ಳೆಯದು. ಇದೇ ಮಾತು ಮೆಂಟಲ್ ಸ್ಟಾರ್ ಅರ್ಜುನ್‌ಗೂ ಅನ್ವಯಿಸುತ್ತದೆ. ಈ ಚಿತ್ರವನ್ನು ಸಿ ಕೇಂದ್ರದ ಪ್ರೇಕ್ಷಕರನ್ನು ಮನಸ್ಸಿನಲ್ಲಿಟ್ಟುಕೊಂಡೇ ಸಾಗರ್ ಮಾಡಿರುವಂತಿದೆ. ಮುಂದಿನ ಬಾರಿ ಅವರಿಂದ ಎ ಮತ್ತು ಬಿ ಕೇಂದ್ರಗಳಿಗೂ ಸಲ್ಲುವ ಚಿತ್ರವನ್ನು ಅವರು ಮಾಡಲಿ ಎಂದಷ್ಟೇ ಆಶಿಸಬಹುದು.



ಶಿಂಧೇಶ್ ಎಂಬ ಅನಾಮಿಕ ನಿರ್ದೇಶಕನ ಚೊಚ್ಚಲ ಚಿತ್ರದ ಹೆಸರು 'ನೀನ್ಯಾರೆ?' ಈ ಚಿತ್ರ ಕೂಡ ಇತ್ತೀಚೆಗೆ ಬಂದಷ್ಟೇ ವೇಗವಾಗಿ ಹೋದ ಇತರೆ ರಿಯಲ್ ಎಸ್ಟೇಟ್ ದಂಧೆಕೋರರ ಚಿತ್ರಗಳ ಸಾಲಿಗೆ ಸೇರುತ್ತದೆ ಎಂಬುದು ನಮ್ಮ ನಿರೀಕ್ಷೆಯಾಗಿತ್ತು.

ಆದರೆ ಅಂತಹ ನಿರೀಕ್ಷೆಯೊಂದಿಗೆ ಬಂದವರೆಲ್ಲ ಬೆಚ್ಚಿ ಬೀಳುವ ರೀತಿಯಲ್ಲಿ ಶಿಂಧೇಶ್ ಚಿತ್ರವನ್ನು ನಿರ್ದೇಶಿಸಿದ್ದಾರೆ. ಆತನಿಗೆ ಪೈಪೋಟಿ ನೀಡುವಂತೆ ವಿಷ್ಣುವರ್ಧನ್ ತನ್ನ ಕ್ಯಾಮೆರಾ ಮುಖಾಂತರ ತೆರೆಯ ಮೇಲೆ ದೃಶ್ಯ ಕಾವ್ಯವನ್ನು ಬಿಂಬಿಸಿದ್ದಾರೆ. ಇವರಿಬ್ಬರಿಗೆ ಹೆಗಲುಕೊಟ್ಟಿರುವವರು ಕಲಾನಿರ್ದೇಶಕ ರಾಜು. ಇದೆಲ್ಲದರ ಜೊತೆ ನವಿರಾದ ಚಿತ್ರಕಥೆ, ಚುರುಕಾದ ಸಂಭಾಷಣೆ ಚಿತ್ರಕ್ಕೆ ಮೆರುಗು ನೀಡಿದೆ. ಅದ್ಭುತವಾದ ಹೊರಾಂಗಣ ಪ್ರದೇಶಗಳು ಕೂಡಾ ಚಿತ್ರದ ಕಥೆಯ ಹಂದರವನ್ನು ವಿಸ್ತರಿಸಿದೆ. ನೂರನೆಯ ಚಿತ್ರಕ್ಕೆ ಸಂಗೀತ ನಿರ್ದೇಶನ ಮಾಡಿರುವ ವಿ. ಮನೋಹರ್ ಕೂಡ ನೆನಪಿನಲ್ಲುಳಿಯುವಂತಹ ಹಾಡುಗಳನ್ನು ನೀಡಿ ಚಿತ್ರಕ್ಕೆ ತನ್ನ ಕಾಣಿಕೆಯನ್ನು ಸಲ್ಲಿಸಿದ್ದಾರೆ. ಇದೆಲ್ಲದರ ನಡುವೆ ಹೊಸಬರಾದ ಸೂರಜ್ ಮತ್ತು ರಮ್ಯ ಬಾರ್ನ ಶಕ್ತಿಮೀರಿ ತಮ್ಮ ಪಾತ್ರಗಳಿಗೆ ನ್ಯಾಯ ಒದಗಿಸಿರುವುದು ಕಾಣಿಸುತ್ತದೆ. ಸಂಕಲನಕಾರ ಗೋವರ್ಧನ್ ಆರಂಭದಲ್ಲಿ ಚುರುಕಾಗಿದ್ದರೂ ಚಿತ್ರದ ಕೊನೆಯಲ್ಲಿನ ಕತ್ತರಿ ಪ್ರಯೋಗಿಸಲು ಹಿಂಜರಿದಂತಿದೆ.



ಹೊಸಬರೇ ತುಂಬಿ ತುಳುಕುವ 'ನೀನ್ಯಾರೆ' ಚಿತ್ರತಂಡ ಅದ್ಭುತವಾದ ಚಿತ್ರವನ್ನು ಮಾಡಿದೆ ಎಂಬುದು ಇದೆಲ್ಲದರ ಅರ್ಥವಲ್ಲ, ಆದರೆ ಚಿಕ್ಕಪುಟ್ಟ ದೋಷಗಳ ನಡುವೆಯೂ ಈ ಹೊಸಬರ ತಂಡ ಹೊಸ ಭರವಸೆ ಸೃಷ್ಟಿಸುವಷ್ಟು ಸುಂದರವಾಗಿ ಚಿತ್ರವೊಂದನ್ನು [illegible]. ಇಡೀ ಚಿತ್ರದಲ್ಲಿ ಸ್ವಲ್ಪ ಯಡವಟ್ಟಾಗಿರುವುದೆಂದರೆ, ಚಿತ್ರದ ಕಥೆ ಮತ್ತು ಕ್ಲೈಮ್ಯಾಕ್ಸ್‌ನಲ್ಲಿ. ಇದೆರಡು ಸರಿಯಿದ್ದಿದ್ದರೆ 'ನೀನ್ಯಾರೆ' [illegible] ಉತ್ತಮ ಚಿತ್ರವಾಗುತ್ತಿತ್ತೇನೋ?

[illegible]ರೂ ವರ್ಷವಿಡೀ ಡಬ್ಬಾ ಚಿತ್ರಗಳನ್ನು ನೋಡಿದ ಪ್ರೇಕ್ಷಕರಿಗೆ ಈ ಚಿತ್ರ ಹಿತವಾದ ಅನುಭವ ನೀಡುತ್ತದೆ.

■ ಶೆಣೈ

ಮಧುರ ಹಾಡುಗಳ ಮೇಲೆ ಪೀಡೆಕಣ್ಣು!

ಡಾ. ರಾಜ್‌ಕುಮಾರ್ ಅಭಿನಯದ 'ನೀ ನನ್ನ ಗೆಲ್ಲಲಾರೆ' ಚಿತ್ರದ 'ಜೀವ ಹೂವಾಗಿದೆ ಬಾಳು ಜೇ[illegible]' ಎಂಬ ಹಾಡು ಯಾರಿಗೆ ತಾನೆ ಗೊತ್ತಿಲ್ಲ, ಡಾ. ರಾ[illegible] ಮತ್ತು ಮಂಜುಳ ಹೆಜ್ಜೆ ಹಾಕಿದ್ದ ಈ ಹಾಡನ್ನು ಸ್ಲೋ ಮೋಷನ್‌ನಲ್ಲಿ ಚಿತ್ರಿಸಿದ್ದು ಅದರ ವೈಶಿಷ್ಟ್ಯ.

ಇಂಥ ಹಾಡಿನ ಮೇಲೆ ನಮ್ಮ ಗಾಂಧಿನಗರದ 'ಮೆಂಟಲ್'ಗಳ ಮತ್ತು ಬಂಡಲ್‌ಗಳ ಕೆಂಗಣ್ಣು ಬಿದ್ದಿ[illegible] ಮೊನ್ನೆ ತಾನೆ ಬಿಡುಗಡೆಗೊಂಡಿರುವ '3ನೇ ಕ್ಲಾಸ್ ಬಿಕಾಂ ಭಾಗ್ಯ' ಚಿತ್ರದಲ್ಲಿ ಈ ಹಾಡನ್ನು ಮರುಬಳಕೆ[illegible] ಎಕ್ಕುಟ್ಟಿಸಿದ್ದಾರೆ. ಅಲ್ಲದೇ ಇದೇ ಹಾಡನ್ನು ದಯಾಳ[illegible] ತನ್ನ 'ಸರ್ಕಸ್'ನಲ್ಲಿ ಬಳಸಿಕೊಂಡಿದ್ದಾರೆ.

ಹಳೆಯ ಸುಮಧುರ ಹಾಡುಗಳ ಕಡೆಗೆ ತಮ್ಮ ದೃಷ್ಟಿ ನೆಟ್ಟಿರುವ ಈ ಮಂದಿ ಇನ್ನೆಷ್ಟು ಯುಗಳ ಗೀತೆಗಳಿಗೆ ಕದ್ದಿ ಗೀರುತ್ತಾರೋ! ಬಲ್ಲವರಾರು?

'ನೂರಕ್ಕೆ ಮೂವತ್ತೈದು' ಅಂತೂ ಪಾಸಾದ್ವಿ ಮಗಾ



ಇದ್ಯಾವ ರಿಸಲ್ಟು ಎಂದು ಹುಬ್ಬೇರಿಸಬೇಡಿ. ಇದು ಚಿತ್ರವೊಂದರ ಹೆಸರು. [illegible] ಹೊಸಬರು ತುಂಬಿರುವ ತಂಡವೊಂದು '35/100' ಚಿತ್ರವನ್ನು ಮಾಡಿ ಈಗ [illegible] ಕಾಯುತ್ತಿದೆ.

ನಮ್ಮ ಗಾಂಧಿನಗರದವರು ಸಿನಿಮಾವನ್ನು ವಿಭಿನ್ನವಾಗಿ ಮಾಡುತ್ತಾರೋ [illegible] ಆದರೆ ಚಿತ್ರವಿಚಿತ್ರದ ಟೈಟಲ್‌ಗಳನ್ನಿಟ್ಟು 'ನಾವು ತುಂಬಾ ಡಿಫರೆಂಟು' ಎನ್[illegible] ಆದರೆ ಸಿನಿಮಾ ಬಿಡುಗಡೆಗೊಂಡಾಗಲಷ್ಟೆ ಗೊತ್ತಾಗೋದು ಅದು ಡಿಫರೆಂಟ[illegible] ಎಂದು!

ಆದರೆ '36/100' ತಂಡದ ಯುವಕರನ್ನು ನೋಡಿದರೆ ಹೀಗನಿಸುವುದಿ[illegible] ವಾರವಷ್ಟೇ ಬಿಡುಗಡೆಯಾಗಿರುವ ಚಿತ್ರದ ಆಡಿಯೋವನ್ನೊಮ್ಮೆ ಕೇಳಿದರೆ [illegible] ಚೆನ್ನಾಗೇ ಮಾಡಿದ್ದಾರೆ' ಎನಿಸುತ್ತದೆ. ಈ ಚಿತ್ರಕ್ಕೆ ಪ್ರಣವ ಎಂಬ ಹುಡು[illegible] ನೀಡಿದ್ದರೆ ಆತನ ಸ್ನೇಹಿತ ಸ್ವರೂಪ್ ಎಲ್ಲ ವಿಲೂ ಹಾಡುಗಳಿಗೆ ಸಾಹಿತ್ಯ ಒದ[illegible]

ಬೆಂಗಳೂರು ದೂರದರ್ಶನ ಕೇಂದ್ರದ ನಿರ್ದೇಶಕ ಮಹೇಶ್ ಜೋಷಿ ಅ[illegible] ವಿಕ್ರಂ ಜೋಷಿ ಹಾಗೂ ಎಫ್‌ಎಂ ರೇಡಿಯೋ ಜಾಕಿ ಮನೋಜ್ ಸೇರಿದಂತೆ [illegible] ಮೂರು ಜನ ನಾಯಕರು. ಬಿಡುಗಡೆಯಾಗಿರುವ ಹಾಡುಗಳಿಗೆ ಮೂವತ್ತೈದಕ್ಕಿ[illegible] ಮಾರ್ಕ್ಸ್ ಪಡೆದಿರುವ ಈ ಹುಡುಗರ ತಂಡ ಚಿತ್ರ ಬಿಡುಗಡೆಯಾದ ಮೇ[illegible] ಮಾರ್ಕ್ಸ್ ಪಡೆಯುತ್ತಾರೆ ನೋಡಬೇಕು.

ಉಪ್ಪಿಗೆ ನಿರ್ದೇಶನ ಮಾಡುವ ಆತ್ಮವಿಶ್ವಾಸವಿಲ್ಲವೇ?



ಉಪೇಂದ್ರ

ತಾನು ಈ ವರ್ಷ ಚಿತ್ರವೊಂದನ್ನು ನಿರ್ದೇಶಿಸುತ್ತೇನೆ ಎಂದು ಉಪೇಂದ್ರ ಅನೌನ್ಸ್ ಮಾಡಿ ಆತನ ಅಭಿಮಾನಿಗಳನ್ನು ಸಂತೋಷಪಡಿಸಿದ್ದರು. ಇದಕ್ಕೊಂದು ಕಾರಣವೂ ಇತ್ತು, 'ಬುದ್ಧಿವಂತ' ಚಿತ್ರಕ್ಕಿಂತ ಮೊದಲು ಬಂದ ಆತನ ಹತ್ತನ್ನೆರಡು ಚಿತ್ರಗಳು ಬಾಕ್ಸಾಫೀಸಿನಲ್ಲಿ ಸೋತಿದ್ದವು. ಆಗ ತಾನು ಮತ್ತೆ ಗೆಲ್ಲಬೇಕಾದರೆ ತಾನೇ ನಿರ್ದೇಶನ ಮಾಡಬೇಕೆಂಬ ತೀರ್ಮಾನಕ್ಕೆ ಉಪ್ಪಿ ಬಂದಿದ್ದರು.

ಅದಷ್ಟೇ ಅಲ್ಲ, ಬಹುತೇಕ ಎಲ್ಲಾ ಪತ್ರಿಕಾಗೋಷ್ಠಿಗಳಲ್ಲಿ "ನಿಮ್ಮ ನಿರ್ದೇಶನದ ಚಿತ್ರ ಯಾವಾಗ ಸೆಟ್ಟೇರುತ್ತೆ?" ಎಂದು ಪತ್ರಕರ್ತರು ಕಿಚಾಯಿಸುತ್ತಿದ್ದರು. ಇದೆಲ್ಲದರಿಂದ ರೋಸಿಹೋಗಿದ್ದ ಉಪ್ಪಿ "ಈ ವರ್ಷ ಗ್ಯಾರಂಟಿ" ಎಂದು ಹೇಳಿದ್ದರು.

ಆದರೆ ಮೊನ್ನೆ ನಡೆದದ್ದೇ ಬೇರೆ. ಉಪ್ಪಿ ನಾಯಕ ನಟನಾಗಿರುವ ಚಿತ್ರವೊಂದು ಯಾವುದೇ ಗೌಜು-ಗದ್ದಲವಿಲ್ಲದೇ ಸೆಟ್ಟೇರಿದೆ. ಈ ಚಿತ್ರಕ್ಕೆ ಉಪ್ಪಿಯೇ ಕತೆ, ಚಿತ್ರಕತೆ, ಸಂಭಾಷಣೆಯನ್ನೂ ಬರೆದಿದ್ದಾರೆ. ಆದರೆ ನಿರ್ದೇಶನದ ಜವಾಬ್ದಾರಿಯನ್ನು ಮಾತ್ರ ತೆಲುಗು ಚಿತ್ರಗಳಲ್ಲಿ ಸಹಾಯಕ ನಿರ್ದೇಶಕನಾಗಿದ್ದ ಸಂಪತ್ ನಂದಿ ಎಂಬ ಹೊಸಬರಿಗೆ ವಹಿಸಿದ್ದಾರೆ. ಸಿನಿ[illegible] ಚಿತ್ರಕಥೆ, ಸಂಭಾಷಣೆ ಅಲ್ಲದೆ ನಟನೆಯನ್ನೂ ಮಾಡುತ್ತಿರುವ ಉಪ್ಪಿ ಇದರ ನಿ[illegible] ಜವಾಬ್ದಾರಿಯನ್ನು ವಹಿಸಿಕೊಳ್ಳದಂತೆ ಯಾರು ಅಡ್ಡಿ ಬಂದರೆಂಬುದೇ ಇಲ್ಲಿರು[illegible]

ಈ ಪ್ರಶ್ನೆಯೀಗ ಹಲವಾರು ರೀತಿಯ ವ್ಯಾಖ್ಯಾನಗಳಿಗೆ ಎಡೆ ಮಾಡಿ[illegible] ಮೊದಲನೆಯದಾಗಿ ಉಪ್ಪಿಗೆ ನಿರ್ದೇಶನ ಮಾಡುವ ಆತ್ಮವಿಶ್ವಾಸವಿಲ್ಲವೇ? ಒ[illegible] ಚಿತ್ರ ಸೋತರೆ ಜನ ತನ್ನತ್ತ ಬೊಟ್ಟು ಮಾಡುತ್ತಾರೆ ಎಂಬ ಅಂಜಿಕೆ ಉಪ್ಪಿಯನ್ನು ಕಾಡು[illegible] ತನ್ನ ಶೈಲಿಯ ಚಿತ್ರಗಳನ್ನು ಈಗಿನ ಯುವ ಜನಾಂಗ ಒಪ್ಪಿಕೊಳ್ಳಲಾರರು ಎಂಬ[illegible] ಚಿತ್ರವೊಂದನ್ನು ನಿರ್ದೇಶಿಸಲಿಕ್ಕಾಗಿ ಸಮಯ ವ್ಯರ್ಥ ಮಾಡುವ ಬದಲು ಅದೇ ಸ[illegible] ಇನ್ನೊಂದೆರಡು ಸಿನಿಮಾಗಳಲ್ಲಿ ನಟಿಸಿ ಹಣ ಮಾಡಬಹುದು ಎಂಬ ಲೆಕ್ಕಾಚಾ[illegible] ಎಲ್ಲ ಕಾರಣಗಳಿಗಾಗಿ ತಂಡದ ಕ್ಯಾಪ್ಟನ್ ಆಗುವ ಬದಲು ತಂಡದಲ್ಲಿ ಸ್ಥಾನ ಸಿ[illegible] ಎಂಬ ತೃಪ್ತಿ ಉಪ್ಪಿಗಿರಬಹುದೆ?

ಉತ್ತರ ಏನೇ ಇರಲಿ, ಉಪೇಂದ್ರ ನಿರ್ದೇಶನದ ಚಿತ್ರ ಸೆಟ್ಟೇರಲು ಬಹು[illegible] ಸಮಯ ತಗುಲಬಹುದು ಎಂಬುದಂತೂ ಸದ್ಯ ಖಚಿತ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 2667
Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main ...